ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಹಬ್ಬದ ಸಂಭ್ರಮ

ಬಕ್ರೀದ್ ಹಬ್ಬದ ಅಂಗವಾಗಿ ಬೆಂಗಳೂರಿನಲ್ಲಿ ನಡೆದ ಸಾಮೂಹಿಕ ಪ್ರಾರ್ಥನೆಯ ವೇಳೆ ಬಾಲಕರಿಬ್ಬರು ಶುಭಾಶಯ ವಿನಿಮಯ ಮಾಡಿಕೊಂಡಿದ್ದು ಹೀಗೆ...

ಪ್ರತಿಭಟನೆ

ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆ ಖಂಡಿಸಿ ಎಸ್‌ಯುಸಿಐ (ಕಮ್ಯುನಿಸ್ಟ್) ಸದಸ್ಯರು ಮೈಸೂರಿನಲ್ಲಿ ಪ್ರತಿಭಟನೆ ನಡೆಸಿದರು

ಖರೀದಿಸಿ ನಿಮ್ಮ ವೈವಾಹಿಕ ಮತ್ತು ವಿಶೇಷ ಸಂದರ್ಭಗಳ
ರೇಷ್ಮೆ ಸೀರೆಗಳನ್ನು ಸಗಟು ದರದಲ್ಲಿ ನೇರವಾಗಿ ಇವರಿಂದ
ದಿ ಚೆನ್ನೈ ಸಿಲ್ಕ್ಸ್
ರೇಷ್ಮೆ ಉತ್ಪಾದನೆ ಮತ್ತು ಮಾರಾಟ ಕೇಂದ್ರಗಳು ಈಗ ಕಾಂಚಿಪುರಂನಲ್ಲಿ ಕೂಡ ಲಭ್ಯ

SCAN TO LOCATE VENUE

30 MINS FROM ELECTRONIC CITY

ದಿ ಚೆನ್ನೈ ಸಿಲ್ಕ್ಸ್
The Chennai Silks
Let the celebrations begin!

India's Most Trusted Jeweller
ಶ್ರೀ ಕುಮರನ್ ಜ್ಯುವೆಲರ್ಸ್
Sree Kumaran JEWELLERS
Gold • Diamond • Platinum • Silver

ಹೊಸೂರ್ (ಟೆಕ್ಸ್‌ಟೈಲ್ & ಜ್ಯುವೆಲ್ಲರಿ) : ಬೆಂಗಳೂರು ಹೆದ್ದಾರಿ. ☎: 9677761978 | 9167527777
ಗ್ರಾಹಕ ಸೇವಾ ಕೇಂದ್ರ : ಎಎಸ್‌ಎಲ್ ಪ್ಲಾಜಾ, ಬಸ್ ನಿಲ್ದಾಣದ ಎದುರು, ಹೊಸೂರ್. ☎: 7845759888
ಮೈಸೂರು (ಜ್ಯುವೆಲ್ಲರಿ) : ಬಿ ಎನ್ ರಸ್ತೆ, ಲಷ್ಕರ್ ಮೊಹಲ್ಲಾ (ಸಬರ್ಬನ್ ಬಸ್ ನಿಲ್ದಾಣದ ಬಳಿ). ☎: 0821–2418916, 9491685000
ಕಾಂಚಿಪುರಂ (ಜ್ಯುವೆಲ್ಲರಿ & ಸಿಲ್ಕ್) : ವೆಸ್ಟ್ ರಾಜಾ ಸ್ಟ್ರೀಟ್. ☎: 044 27234916, 9566743916, 9003796888

SCAN FOR MORE UPDATES

ಕರ್ನಾಟಕ • ತೆಲಂಗಾಣ • ತಮಿಳನಾಡು • ಪುದುಚೇರಿ

R.V. TOURS AND TRAVELS PVT. LTD.

KARNATAKA | TELANGANA | ANDHRA PRADESH | TAMILNADU

ಕಾಶಿ–ಅಯೋಧ್ಯೆ ಪ್ರಯಾಗರಾಜ್

3 Nights / 4 Days (Flight Package)

RS.27,999/-

+5% GST PER PERSON

ಚಾರ್ಧಾಮ್ ಯಾತ್ರಾ	ಅಮರ್ನಾಥ್ ಯಾತ್ರಾ	ಮುಕ್ತಿನಾಥ್ ಯಾತ್ರಾ
12 Nights / 13 Days	13 Nights / 14 Days	12 Nights / 13 Days
RS.68,500/-	RS.72,500/-	RS.76,500/-

ಯುರೋಪ್

(Europe Tour)

12 Nights / 13 Days

~~RS.3,25,000/-~~

RS.2,99,999/-

+5% GST +2% TCS * Limited Offer

Duration	Destination	Price
5 N 6 D	ಸಿಂಗಾಪುರ್ ಮಲೇಷ್ಯಾ	RS.1,12,000/-
5 N 6 D	ಶ್ರೀಲಂಕಾ	RS.59,500/-
4 N 5 D	ವಿಯೆಟ್ನಾಂ	RS.99,999/-
4 N 5 D	ಬ್ಯಾಂಕಾಕ್–ಪಟ್ಟಾಯ *Land Package	RS.30,000/-
6 N 7 D	ಭೂತಾನ್	RS.60,000/-
4 N 5 D	ಬಾಲಿ	RS.95,000/-

Duration	Destination	Price
7 N 8 D	ತಮಿಳುನಾಡು	RS.52,999/-
8 N 9 D	ಶಿಮ್ಲಾ–ಮನಾಲಿ	RS.55,999/-
6 N 7 D	ಗ್ಯಾಂಗ್ಟಾಕ್-ಡಾರ್ಜಿಲಿಂಗ್ *Land Package	RS.42,000/-
11 N 12 D	ಗುಜರಾತ್- ಮಧ್ಯಪ್ರದೇಶ	RS.69,999/-

ಕೈಲಾಸ ಮಾನಸ ಸರೋವರ

13 Nights / 14 Days

RS.2,85,000/-

+5% GST +2%TCS

Reach us

* For All Domestic Tour Package +5% GST Applicable
* For All International Tour Package +5% GST +2% TCS Applicable
* All Tour Packages Calculated Per Person

*T&C APPLY

R V Ramana
Founder & Chairman

Ph: 9154225664, 9154225675

Address : No. 313,Varsha Arcade, Next to sub-registar office, Ganganagar, Bellary road, Bengaluru.

prajavani.net prajavani • www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

‘ಪ್ರಗ್ಗು’ಗೆ ಗೆಲುವು
ಭಾರತದ ಆರ್.ಪ್ರಜ್ಞಾನಂದ, ನಾರ್ವೆ ಚೆಸ್ ಟೂರ್ನಿಯ 3ನೇ ಸುತ್ತಿನಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ (ನಾರ್ವೆ) ಅವರಿಗೆ ಆಘಾತ ನೀಡಿದರು

‘ತುರ್ತು ಆರೈಕೆ ಬದುಕುವ ಹಕ್ಕಿನ ಅವಿಭಾಜ್ಯ ಭಾಗ’ 11

ಕುರ್ಚಿ ತೊರೆದ ಸಿ.ಎಂ: ಡಿಕೆಶಿಗೆ ತೆರೆದ ದಾರಿ

ಅಧಿಕಾರ ಹಸ್ತಾಂತರದ ಪ್ರಹಸನಕ್ಕೆ ಕೊನೆಗೂ ತೆರೆ ಎಳೆಯಲು ಮುಹೂರ್ತ • ರಾಜೀನಾಮೆ ನೀಡಬಾರದು ಎಂಬ ಬೆಂಬಲಿಗರ ಒತ್ತಡಕ್ಕೆ ಮಣಿಯದ ಸಿದ್ದರಾಮಯ್ಯ • ಕಣ್ಣೀರಿಟ್ಟ ಸಚಿವರು–ಶಾಸಕರು • ರಾಜ್ಯಪಾಲರ ಅನುಪಸ್ಥಿತಿಯಲ್ಲಿ ವಿಶೇಷ ಕಾರ್ಯದರ್ಶಿಗೆ ರಾಜೀನಾಮೆ ಪತ್ರ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರು ವರ್ಷಗಳ ಆಡಳಿತ ಪೂರೈಸಿರುವ ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕೆ ಗುರುವಾರ ರಾಜೀನಾಮೆ ನೀಡಿದ್ದಾರೆ. ಅವರ ಉತ್ತರಾಧಿಕಾರಿಯಾಗುವ ಹಂಬಲದಲ್ಲಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ವಿಧಾನಸೌಧದ ಮೂರನೇ ಮಹಡಿಯಲ್ಲಿ ಅಧಿಕಾರಕ್ಕೇರುವ ಬಾಗಿಲು ತೆರೆದಿದೆ.

ಸುಮಾರು ಆರೇಳು ತಿಂಗಳುಗಳಿಂದ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಆಗಾಗ್ಗೆ ಕೋಲಾಹಲಕ್ಕೆ ಕಾರಣವಾಗುತ್ತಿದ್ದ ‘ಅಧಿಕಾರ ಹಸ್ತಾಂತರ’ದ ಪ್ರಹಸನಕ್ಕೆ ಕೊನೆಗೂ ತೆರೆಬೀಳುವ ಮುಹೂರ್ತ ಕೂಡಿ ಬಂದಂತಾಗಿದೆ. ಸಿದ್ದರಾಮಯ್ಯ ರಾಜೀನಾಮೆಯಿಂದ ತೆರವಾಗಿರುವ ಸ್ಥಾನವನ್ನು ಅಲಂಕರಿಸಲು ಅಣಿಯಾಗಿರುವ ಶಿವಕುಮಾರ್ ಅವರು ಶಾಸಕಾಂಗ ಪಕ್ಷದ ನಾಯಕನಾಗಿ ಆಯ್ಕೆಯಾಗಬೇಕಾದ ಕೊನೆಯ ಮೆಟ್ಟಿಲೊಂದು ಬಾಕಿ ಉಳಿದಿದೆ.

‘ರಾಜೀನಾಮೆ ನೀಡಬಾರದು, ನೀಡಲೇಬೇಕಾದರೆ ಸಮಯ ತೆಗೆದುಕೊಳ್ಳಿ’ ಎಂದು ತಮ್ಮ ಆಪ್ತ ಸಚಿವರು, ಶಾಸಕರ ಒತ್ತಡಕ್ಕೆ ಮಣಿಯದ ಸಿದ್ದರಾಮಯ್ಯ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಕೊಟ್ಟ ಮಾತಿನಂತೆ ತಮ್ಮ ರಾಜೀನಾಮೆಯನ್ನು ಸಲ್ಲಿಸಿದರು. ಇದರೊಂದಿಗೆ ಇನ್ನು ಎರಡು ವರ್ಷದ ಅವಧಿಗೆ ಶಿವಕುಮಾರ್, ಮುಖ್ಯಮಂತ್ರಿಯಾಗುವ ಅವಕಾಶ ಸಿಕ್ಕಂತಾಗಿದೆ.

ತಮ್ಮ ಅಧಿಕೃತ ನಿವಾಸ ‘ಕಾವೇರಿ’ಯಲ್ಲಿ ಗುರುವಾರ ಬೆಳಿಗ್ಗೆ ಸಂಪುಟ ಸಹೋದ್ಯೋಗಿಗಳಿಗೆ ಆಯೋಜಿಸಿದ್ದ ಉಪಾಹಾರ ಕೂಟಕ್ಕೆ ಬಂದಿದ್ದ ಶಿವಕುಮಾರ್ ಅವರನ್ನು ಆಲಿಂಗಿಸಿಕೊಂಡ ಸಿದ್ದರಾಮಯ್ಯ ಒಗ್ಗಟ್ಟಿನ ಸಂದೇಶ ರವಾನಿಸಿದರು. ಇದೇ ವೇಳೆ ಶಿವಕುಮಾರ್ ಅವರು ಸಿದ್ದರಾಮಯ್ಯ ಅವರ ಕಾಲಿಗೆ ಎರಗಿ ಆಶೀರ್ವಾದ ಪಡೆದರು.

‘ವರಿಷ್ಠರ ಸೂಚನೆಯಂತೆ ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿಯಲು ನಿರ್ಧರಿಸಿದ್ದೇನೆ ಎಂದು ಉಪಾಹಾರ ಸಭೆಯಲ್ಲಿ ಸಿದ್ದರಾಮಯ್ಯ ಪ್ರಕಟಿಸಿದರು. ಶಿವಕುಮಾರ್ ಮುಂದಿನ ಮುಖ್ಯಮಂತ್ರಿ ಎಂದೂ ಘೋಷಿಸಿದರು. ವಿದಾಯ ಮಾತುಗಳನ್ನು ಆಡುತ್ತಲೇ ಅವರು ಗದ್ಗದಿತರಾದರು. ಆ ಸನ್ನಿವೇಶವು ಭಾವುಕ ಕ್ಷಣಗಳನ್ನು ಸೃಷ್ಟಿಸಿದವು’ ಎಂದು ಮೂಲಗಳು ಹೇಳಿವೆ.

ಉಪಾಹಾರ ಸಭೆಯಲ್ಲಿ ಭಾಗವಹಿಸಿ ತೆರಳುವ ವೇಳೆ ಸುದ್ದಿಗಾರರ ಜೊತೆ ಮಾತನಾಡಿದ ಸಚಿವ ಎಚ್‌.ಕೆ. ಪಾಟೀಲ, ‘ಡಿ.ಕೆ. ಶಿವಕುಮಾರ್ ಮುಂದಿನ ಮುಖ್ಯಮಂತ್ರಿ ಆಗಲಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿದರು’ ಎಂದರು. ಸಚಿವ ರಾಮಲಿಂಗಾರೆಡ್ಡಿ ಕೂಡಾ ಅದೇ ಮಾತನ್ನು ಪುನರುಚ್ಚರಿಸಿದರು.

7

ಇಂದು ರಾಹುಲ್ ಭೇಟಿ

ನವದೆಹಲಿ: ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಸಿದ್ದರಾಮಯ್ಯ ಅವರು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಶುಕ್ರವಾರ ಬೆಳಿಗ್ಗೆ 9ಕ್ಕೆ ಭೇಟಿ ಮಾಡಿ ಸಮಾಲೋಚನೆ ನಡೆಸಲಿದ್ದಾರೆ.

ಸಿದ್ದರಾಮಯ್ಯ ಹಾಗೂ ಆಪ್ತ ಸಚಿವರನ್ನು ಹೊತ್ತು ಸಂಜೆ 4.30ಕ್ಕೆ ಬೆಂಗಳೂರಿನಿಂದ ಹೊರಟ ವಿಶೇಷ ವಿಮಾನ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ರಾತ್ರಿ 7ಕ್ಕೆ ಇಳಿಯಬೇಕಿತ್ತು. ಹವಾಮಾನ ವೈಪರೀತ್ಯದ ಕಾರಣದಿಂದ ಜೈಪುರದಲ್ಲಿ ಇಳಿಯಿತು.

ಈ ವಿಮಾನದಲ್ಲಿ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಸಚಿವರಾದ ಕೆ.ಜೆ.ಜಾರ್ಜ್, ಬೈರತಿ ಸುರೇಶ್, ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ, ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ, ಎಐಸಿಸಿ ಕಾರ್ಯದರ್ಶಿ ಅಭಿಷೇಕ್ ದತ್ ಮತ್ತಿತರರು ಇದ್ದರು. ತಡರಾತ್ರಿ ಅಥವಾ ಬೆಳಿಗ್ಗೆ ಮುಖ್ಯಮಂತ್ರಿ ಅವರು ದೆಹಲಿಗೆ ಬರಲಿದ್ದಾರೆ. ಜನಪಥ್‌ನಲ್ಲಿರುವ ನಿವಾಸದಲ್ಲಿ ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ರಾಹುಲ್ ಅವರನ್ನು ಸಿದ್ದರಾಮಯ್ಯ ಭೇಟಿ ಮಾಡಲಿದ್ದಾರೆ.

2–3 ಸಲ ಗೆದ್ದು ಈವರೆಗೆ ಸಚಿವರಾಗದವರಿಗೆ ಹೊಸ ಸಂಪುಟದಲ್ಲಿ ಆದ್ಯತೆ ನೀಡಲು ಹೈಕಮಾಂಡ್ ಯೋಜಿಸಿದೆ. ನಾಲ್ಕೈದು ಬಾರಿ ಸಚಿವರಾಗಿದ್ದವರನ್ನು ಪಕ್ಷದ ಕೆಲಸಕ್ಕೆ ನಿಯೋಜಿಸುವ ಸಂಭವ ಇದೆ.

7

ಡಿ.ಕೆ ಶಿವಕುಮಾರ್ ಅವರು ಸಿದ್ದರಾಮಯ್ಯ ಅವರ ಪಾದ ಮುಟ್ಟಿ ಆಶೀರ್ವಾದ ಪಡೆದರು

‘ಮುಂದಿನ ಸಿ.ಎಂ: ಸಿಎಲ್‌ಪಿ, ಹೈಕಮಾಂಡ್ ತೀರ್ಮಾನ’

‘ಮುಂದಿನ ಮುಖ್ಯಮಂತ್ರಿ ಯಾರು ಎಂಬುದನ್ನು ಶಾಸಕಾಂಗ ಪಕ್ಷದ ಸಭೆ ಮತ್ತು ಹೈಕಮಾಂಡ್ ತೀರ್ಮಾನಿಸುತ್ತದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಉಪಾಹಾರ ಸಭೆಯಲ್ಲಿ ಶಿವಕುಮಾರ್ ಅವರ ಹೆಸರನ್ನು ಸಿದ್ದರಾಮಯ್ಯ ಘೋಷಿಸಿದ್ದಾರೆ ಎಂದು ಸಚಿವರಾದ ಎಚ್‌.ಕೆ. ಪಾಟೀಲ, ರಾಮಲಿಂಗಾರೆಡ್ಡಿ ಹೇಳಿದ್ದರು.

ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಸುದ್ದಿಗಾರರು ಪ್ರಶ್ನಿಸಿದಾಗ ಸಿದ್ದರಾಮಯ್ಯ ಅವರು, ಮುಂದಿನ ಮುಖ್ಯಮಂತ್ರಿ ಯಾರು ಎಂಬ ಗುಟ್ಟನ್ನು ಬಹಿರಂಗಪಡಿಸಲು ಇಚ್ಛಿಸಲಿಲ್ಲ.

‘ನಿಮ್ಮ ಉತ್ತರಾಧಿಕಾರಿ ಯಾರು? ನಿಮ್ಮ ಪಕ್ಕದಲ್ಲಿ ಕೂತಿದ್ದಾರಲ್ಲ ಅವರಿಬ್ಬರಲ್ಲಿ ಯಾರು’ ಎಂದು ಸುದ್ದಿಗಾರರು ಪದೇ ಪದೇ ಪ್ರಶ್ನಿಸಿದಾಗ, ‘ಯಾರೆಂಬುದನ್ನು ಶಾಸಕಾಂಗ ಪಕ್ಷದ ಸಭೆ ಮತ್ತು ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳುತ್ತದೆ’ ಎಂದು ಎರಡು ಬಾರಿ ಹೇಳಿದರು. ಪಕ್ಕದಲ್ಲಿ ಕುಳಿತಿದ್ದ ಡಿ.ಕೆ.ಶಿವಕುಮಾರ್ ಅವರು ತಮ್ಮ ಹೆಸರು ಹೇಳಬಹುದೇನೋ ಎಂಬ ಭಾವದಲ್ಲಿ ಕೆಲ ಕ್ಷಣ ಸಿದ್ದರಾಮಯ್ಯ ಅವರ ಮುಖವನ್ನೇ ದಿಟ್ಟಿಸಿದರು.

‘ರಾಜ್ಯಸಭೆ ಒಲ್ಲೆ, ನನ್ನ ನೆಲೆ ರಾಜ್ಯದ ರಾಜಕಾರಣದಲ್ಲೇ’

‘ರಾಜ್ಯಸಭೆಗೆ ಹೋಗಿ ಎಂಬ ಸಲಹೆ ಬಂತು. ವಿನಮ್ರವಾಗಿ ಇಲ್ಲವೆಂದೆ. ನಾನು ರಾಷ್ಟ್ರ ರಾಜಕಾರಣ ಪ್ರವೇಶಿಸುವುದಿಲ್ಲ. ರಾಜ್ಯ ರಾಜಕಾರಣದಲ್ಲೇ ಸಕ್ರಿಯವಾಗಿ ಮುಂದುವರಿಯುತ್ತೇನೆ...’

ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿದ ಬಳಿಕ ತಮ್ಮ ಆಪ್ತ ಶಾಸಕರು, ಸಚಿವರು, ಬೆಂಬಲಿಗರ ಮಧ್ಯೆ ಕಿಕ್ಕಿರಿದ ಸುದ್ದಿಗೋಷ್ಠಿಯಲ್ಲಿ ಮಾತನಾಡುವಾಗ ಭಾವೋದ್ವೇಗದಿಂದ ಅವರ ಗಂಟಲು ಉಬ್ಬಿ ಬಂದಿತು. ಅಲ್ಲಲ್ಲಿ ಮಾತಿಗೆ ವಿರಾಮ ನೀಡಿ ತಮ್ಮ ಲಹರಿಯನ್ನು ಭಾರವಾದ ಹೃದಯದಿಂದ ಮುಂದುವರಿಸಿದರು.

‘ನಿಮ್ಮ ರಾಜೀನಾಮೆಗೆ ಕಾರಣವೇನು, ಯಾರದ್ದಾದರೂ ಒತ್ತಡವಿತ್ತೇ’ ಎಂಬ ಪ್ರಶ್ನೆಗೆ, ‘ಹೈಕಮಾಂಡ್ ರಾಜೀನಾಮೆ ಕೊಡಿ ಎಂದು ಹೇಳಿತು. ಅವರು ಹೇಳಿದ ತಕ್ಷಣವೇ ಸ್ವಯಂ ಪ್ರೇರಣೆಯಿಂದ ರಾಜೀನಾಮೆ ನೀಡಿದ್ದೇನೆ’ ಎಂದರು.

‘ರಾಷ್ಟ್ರ ರಾಜಕಾರಣಕ್ಕೆ ಹೋಗುತ್ತೀರಾ’ ಎಂಬ ಮತ್ತೊಂದು ಪ್ರಶ್ನೆಗೆ, ‘ಇಲ್ಲ... ರಾಜ್ಯಸಭೆಗೆ ಹೋಗಿ ಎಂಬ ಸಲಹೆ ಬಂದಿತು. ನಾನು ವಿನಮ್ರನಾಗಿ ಆಗುವುದಿಲ್ಲ, ನನಗೆ ಆಸಕ್ತಿ ಇಲ್ಲ ಎಂದು ಹೇಳಿದೆ. 5 ವರ್ಷದಲ್ಲಿ ಇನ್ನು ಎರಡು ವರ್ಷಗಳ ಅವಧಿ ಬಾಕಿ ಇದೆ. ಕರ್ನಾಟಕದ ಜನರಿಗಾಗಿ ಸಕ್ರಿಯ ರಾಜಕಾರಣದಲ್ಲೇ ಇರುತ್ತೇನೆ’ ಎಂದು ಸ್ಪಷ್ಟಪಡಿಸಿದರು.

ನಾಯಕನ ಆಯ್ಕೆಗೆ ಸಿಎಲ್‌ಪಿ

ರಾಜ್ಯದ ಚುಕ್ಕಾಣಿ ಹಿಡಿಯುವ ಹೊಸ ನಾಯಕನ ಆಯ್ಕೆಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆ ಒಂದೆರಡು ದಿನಗಳಲ್ಲಿ ನಡೆಯಲಿದೆ.

ಸಿದ್ದರಾಮಯ್ಯನವರ ರಾಜೀನಾಮೆ ಅಂಗೀಕಾರಕೊಂಡ ಬಳಿಕ, ಎಐಸಿಸಿ ವೀಕ್ಷಕರ ಸಮ್ಮುಖದಲ್ಲಿ ಸಿಎಲ್‌ಪಿ ಸಭೆ ನಿಗದಿಯಾಗಲಿದೆ. ಆ ಸಭೆಯಲ್ಲಿ, ಮುಂದಿನ ನಾಯಕನ ಆಯ್ಕೆಯನ್ನು ಘೋಷಿಸಿ, ಅನುಮೋದನೆ ಪಡೆಯಲಾಗುತ್ತದೆ. ಆಯ್ಕೆಯಾದ ನಾಯಕ, ತಮಗೆ ಬಹುಮತ ಇದೆ ಎಂದು ದೃಢಪಡಿಸಲು ಶಾಸಕರ ಸಹಿ ಇರುವ ಪತ್ರವನ್ನು ರಾಜ್ಯಪಾಲರಿಗೆ ಸಲ್ಲಿಸಿ, ಸರ್ಕಾರ ರಚನೆಗೆ ಅವಕಾಶ ನೀಡುವಂತೆ ಕೋರಬೇಕು. ಅದಾದ ನಂತರವಷ್ಟೇ ಹೊಸ ಸರ್ಕಾರ ಅಸ್ತಿತ್ವಕ್ಕೆ ಬರಲಿದೆ.

ಉಪಾಹಾರ ಸಭೆಯಿಂದ ದೆಹಲಿ ಪಯಣದವರೆಗೆ...

- **ಬೆಳಿಗ್ಗೆ 9:** ಕಾವೇರಿ ನಿವಾಸದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಉಪಾಹಾರ ಸಭೆ. ಡಿ.ಕೆ.ಶಿವಕುಮಾರ್ ಆದಿಯಾಗಿ ಎಲ್ಲ ಸಚಿವರು ಭಾಗಿ
- ಶಿವಕುಮಾರ್ ಅವರ ಜತೆ ಪ್ರತ್ಯೇಕವಾಗಿ 30 ನಿಮಿಷಕ್ಕೂ ಹೆಚ್ಚು ಚರ್ಚೆ ನಡೆಸಿದ ಸಿದ್ದರಾಮಯ್ಯ. ಉಪಾಹಾರ ಸಭೆಯಲ್ಲಿ ರಾಜೀನಾಮೆ ವಿಚಾರ ಪ್ರಸ್ತಾಪ. 11.30ರ ಹೊತ್ತಿಗೆ ಸಭೆ ಅಂತ್ಯ
- **ಮಧ್ಯಾಹ್ನ 2.45:** ಕಾವೇರಿ ನಿವಾಸದಿಂದ ಸಚಿವರ ದಂಡಿನ ಜತೆ ಲೋಕಭವನದತ್ತ ಹೊರಟ ಸಿದ್ದರಾಮಯ್ಯ
- **ಮಧ್ಯಾಹ್ನ 3:** ರಾಜ್ಯಪಾಲರ ಅನುಪಸ್ಥಿತಿಯಲ್ಲಿ ಅವರ ಕಾರ್ಯದರ್ಶಿಗೆ ರಾಜೀನಾಮೆ ಪತ್ರ ಸಲ್ಲಿಸಿದ ಮುಖ್ಯಮಂತ್ರಿ
- **ಮಧ್ಯಾಹ್ನ 3.30:** ಗೃಹಕಚೇರಿ ಕೃಷ್ಣಾದಲ್ಲಿ ಸುದ್ದಿಗೋಷ್ಠಿ. ರಾಜೀನಾಮೆ ವಿಚಾರವನ್ನು ಅಧಿಕೃತವಾಗಿ ಮಾಧ್ಯಮಗಳಿಗೆ ತಿಳಿಸಿದ ಮುಖ್ಯಮಂತ್ರಿ
- **ಸಂಜೆ 4.30:** ದೆಹಲಿಗೆ ಪ್ರಯಾಣಿಸಲು ಎಚ್‌ಎಎಲ್ ವಿಮಾನ ನಿಲ್ದಾಣದತ್ತ ತೆರಳಿದ ಸಿದ್ದರಾಮಯ್ಯ, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ, ಸಚಿವರಾದ ಕೆ.ಜೆ.ಜಾರ್ಜ್, ಬೈರತಿ ಸುರೇಶ್, ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ
- **ಸಂಜೆ 5:** ತಮ್ಮ ಸದಾಶಿವನಗರದ ಮನೆಗೆ ತೆರಳಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್. ಮನೆಯ ಬಳಿ ಜಮಾಯಿಸಲು ಆರಂಭಿಸಿದ ಬೆಂಬಲಿಗರು, ಅಭಿಮಾನಿಗಳು
- ‘ನೂತನ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸುತ್ತಿರುವ ಡಿ.ಕೆ.ಶಿವಕುಮಾರ್ ಅವರಿಗೆ ಅಭಿನಂದನೆಗಳು’ ಎಂಬ ಬರಹ ಇರುವ ಬ್ಯಾನರ್ ಕಟ್ಟಿದ ಅಭಿಮಾನಿಗಳು. ಸಂಜೆ 6ರ ವೇಳೆಗೆ ಶಾಸಕರು, ಸಚಿವರಿಂದ ಶಿವಕುಮಾರ್ ಅವರ ಭೇಟಿ ಮತ್ತು ಮಾತುಕತೆ
- **ರಾತ್ರಿ 7.45:** ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ದೆಹಲಿಗೆ ಡಿ.ಕೆ.ಶಿವಕುಮಾರ್

ನಟಿ ಟ್ವಿಶಾ ಸಾವು: ನಿವೃತ್ತ ನ್ಯಾಯಾಧೀಶೆ ಬಂಧನ

ನವದೆಹಲಿ (ಪಿಟಿಐ): ನಟಿ ಟ್ವಿಶಾ ಶರ್ಮಾ ಸಾವಿನ ಪ್ರಕರಣಕ್ಕೆ ಸಂಬಂಧಿಸಿ, ಸಿಬಿಐ ಗುರುವಾರ ಅವರ ಅತ್ತೆ, ನಿವೃತ್ತ ನ್ಯಾಯಾಧೀಶರಾದ ಗಿರಿಬಾಲಾ ಸಿಂಗ್ ಅವರನ್ನು ಬಂಧಿಸಿದೆ.

ಭೋಪಾಲ್‌ನ ಬಾಗ್ ಮುಫಲಿಯಾ ಪ್ರದೇಶದಲ್ಲಿರುವ ನಿವಾಸದಲ್ಲಿ ಗಿರಿಬಾಲಾ ಸಿಂಗ್ ಅವರನ್ನು ವಿಚಾರಣೆಗೆ ಒಳಪಡಿಸಿದ ಸಿಬಿಐ ತಂಡವು, ಬಳಿಕ ಅವರನ್ನು ವಶಕ್ಕೆ ಪಡೆಯಿತು.

ಗಿರಿಬಾಲಾ ಸಿಂಗ್ ಮತ್ತು ಪುತ್ರ ಸಮರ್ಥ್ ಸಿಂಗ್ ವಿರುದ್ಧ ವರದಕ್ಷಿಣೆ ಕಿರುಕುಳ ಆರೋಪ ದಡಿ ಕತಾರ ಹಿಲ್ಸ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ವಿಚಾರಣಾ ನ್ಯಾಯಾಲಯವು ಗಿರಿಬಾಲಾ ಅವರಿಗೆ ಮೇ 15ರಂದು ನಿರೀಕ್ಷಣಾ ಜಾಮೀನು ಮಂಜೂರುಗೊಳಿಸಿತ್ತು. ಆದರೆ, ಮಧ್ಯಪ್ರದೇಶ ಹೈಕೋರ್ಟ್ ಬುಧವಾರ ಈ ಜಾಮೀನನ್ನು ರದ್ದುಗೊಳಿಸಿತ್ತು.

‘ಪ್ರತಿವಾದಿಯ ವಿರುದ್ಧ ಹೊರಿಸಲಾದ ಆರೋಪಗಳ ಆಧಾರದಲ್ಲಿ ಅವರ ಜಾಮೀನು ರದ್ದುಗೊಳಿಸಲಾಗಿದೆ’ ಎಂದು ಹೈಕೋರ್ಟ್ ನ್ಯಾಯಮೂರ್ತಿ ದೇವನಾರಾಯಣ ಮಿಶ್ರಾ 17 ಪುಟಗಳ ಆದೇಶದಲ್ಲಿ ತಿಳಿಸಿದ್ದಾರೆ.

ಭೋಪಾಲ್‌ನಲ್ಲಿರುವ ಮನೆಯಲ್ಲಿ ಟ್ವಿಶಾ ಅವರ ಮೃತದೇಹ ನೇಣು ಬಿಗಿದ ಸ್ಥಿತಿಯಲ್ಲಿ ಮೇ 12ರಂದು ಪತ್ತೆಯಾಗಿತ್ತು. ಇದರ ಬೆನ್ನಲ್ಲೇ ಅವರ ಪತಿ, ವಕೀಲ ಸಮರ್ಥ್ ಸಿಂಗ್ ತಲೆಮರೆಸಿಕೊಂಡಿದ್ದರು. ಸಮರ್ಥ್ ಸಿಂಗ್ ಅವರನ್ನು ಸಿಬಿಐ ಮೇ 22ರಂದು ಜಬಲಪುರದಲ್ಲಿ ಬಂಧಿಸಿತ್ತು.

ಇರಾನ್, ಅಮೆರಿಕ ದಾಳಿ – ಪ್ರತಿದಾಳಿ

ದುಬೈ (ಎಪಿ): ಇರಾನ್ ಮತ್ತು ಅಮೆರಿಕ ಮಧ್ಯೆ ಮತ್ತೊಮ್ಮೆ ಯುದ್ಧ ಆರಂಭವಾಗಿದೆ. ‘ಸ್ವಯಂ ರಕ್ಷಣೆ’ಗಾಗಿ ಇರಾನ್‌ನ ದಕ್ಷಿಣ ಭಾಗದಲ್ಲಿರುವ ಬಂದರ್ ಅಬ್ಬಾಸ್ ನಗರದ ಮೇಲೆ ದಾಳಿ ನಡೆಸಿದ್ದಾಗಿ ಅಮೆರಿಕ ಹೇಳಿದೆ. ಬಳಿಕ, ಕುವೈತ್‌ನ ಅಮೆರಿಕದ ನೆಲೆಗಳ ಮೇಲೆ ದಾಳಿ ನಡೆಸಿದ್ದಾಗಿ ಇರಾನ್ ಹೇಳಿದೆ. ಕದನ ವಿರಾಮವನ್ನು ಎರಡೂ ದೇಶಗಳು ಉಲ್ಲಂಘಿಸಿವೆ.

‘ಇರಾನ್‌ನ ಭದ್ರತಾ ಪಡೆಗಳೊಂದಿಗೆ ಮಾತುಕತೆ ನಡೆಸದೆ ಹೋರ್ಮುಜ್ ಜಲಸಂಧಿಯನ್ನು ದಾಟಿ ಪರ್ಷಿಯನ್ ಗಲ್ಫ್‌ಗೆ ಪ್ರವೇಶ ಪಡೆಯಲು ಯತ್ನಿಸಿದ ನಾಲ್ಕು ಹಡಗುಗಳ ಮೇಲೆ ಬುಧವಾರ ರಾತ್ರಿ ದಾಳಿ ನಡೆಸಲಾಗಿದೆ’ ಎಂದು ಐಆರ್‌ಐಬಿ ಸುದ್ದಿ ಸಂಸ್ಥೆ ವರದಿ ಮಾಡಿದೆ.

‘ಭದ್ರತಾ ಪಡೆಗಳು ಎಚ್ಚರಿಕೆ ನೀಡಿದ ಬಳಿಕವೂ ಹಡಗುಗಳು ಮುಂದುವರಿದವು, ವಾಪಸು ಬರುವಂತೆ ಅವರಿಗೆ ಎಚ್ಚರಿಕೆ ನೀಡಲು ದಾಳಿ ನಡೆಸಲಾಗಿದೆ’ ಎಂದು ವರದಿಯಲ್ಲಿ ಹೇಳಲಾಗಿದೆ. ಆದರೆ, ಹಡಗುಗಳು ಯಾವ ದೇಶಕ್ಕೆ ಸೇರಿದವು ಎಂಬುದು ಸೇರಿ ಇನ್ನಿತರೆ ಮಾಹಿತಿಯನ್ನು ಇರಾನ್ ಹಂಚಿಕೊಂಡಿಲ್ಲ.

10

ಚಿನಕುರುಳಿ ಪ್ರಕಾಶ್ ಶೆಟ್ಟಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ

ಹಾಕಿ: ಡಿವೈಇಎಸ್ ಕುಡಿಗೆ ತಂಡಕ್ಕೆ ಗೆಲುವು

ಬೆಂಗಳೂರು: ಡಿವೈಇಎಸ್ ಕುಡಿಗೆ ತಂಡವು 'ಹಾಕಿ ಕರ್ನಾಟಕ' ರಾಜ್ಯ 16 ವರ್ಷದೊಳಗಿನ ಬಾಲಕಿಯರ ಟೂರ್ನಿಯಲ್ಲಿ 8–1ರಿಂದ ಹೊಯ್ಸಳ ಹಾಕಿ ಅಕಾಡೆಮಿ ತಂಡವನ್ನು ಮಣಿಸಿತು. ಶಾಂತಿನಗರದಲ್ಲಿ ಗುರುವಾರ ನಡೆದ ಇತರ ಪಂದ್ಯಗಳಲ್ಲಿ ಹಾಕಿ ಬೆಳಗಾವಿ ತಂಡ 7–0ಯಿಂದ ಡಿವೈಇಎಸ್ ಹಾವೇರಿ ವಿರುದ್ಧ; ಸಾಯ್ ಮಡಿಕೇರಿ ತಂಡ 2–0ಯಿಂದ ಡಿವೈಇಎಸ್ ಧಾರವಾಡ ತಂಡವನ್ನು ಸೋಲಿಸಿತು.

ಬಕ್ರೀದ್ ಆಚರಣೆ: ಪ್ರಾರ್ಥನೆಯ ಬಿಂಬಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತ್ಯಾಗ, ಬಲಿದಾನದ ಸಂಕೇತವಾದ ಬಕ್ರೀದ್ ಅನ್ನು ಮುಸ್ಲಿಮರು ನಗರದಲ್ಲಿ ಗುರುವಾರ ಶ್ರದ್ಧೆಯಿಂದ ಆಚರಿಸಿದರು.

ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಂಡಿದ್ದರು. ಧರ್ಮಗುರುಗಳು ಸಂದೇಶ ನೀಡಿದರು. ತ್ಯಾಗ, ಕೌಟುಂಬಿಕ ಮಿಲನ ಹಾಗೂ ಕುರ್ಬಾನಿ ಮುಂತಾದ ಧಾರ್ಮಿಕ ಆಚರಣೆಗಳಿಗೆ ಮೀರಿದ್ದು ಈದ್-ಉಲ್-ಅದಾ ಪ್ರಾರ್ಥನೆ ಎಂದು ಧರ್ಮಗುರುಗಳು ತಿಳಿಸಿದರು.

ಕಲಾಸಿಪಾಳ್ಯ, ಚಾಮರಾಜಪೇಟೆ, ಶಿವಾಜಿನಗರ, ಬಿ.ಟಿ.ಎಂ ಲೇಔಟ್, ಪಾದರಾಯನಪುರ, ಹೆಬ್ಬಾಳ, ಆರ್.ಟಿ. ನಗರ, ಶಾಂತಿನಗರ, ಮೈಸೂರು ರಸ್ತೆ, ಜಯನಗರ, ಲಾಲ್‌ಬಾಗ್ ರಸ್ತೆ, ಮಾಗಡಿ ರಸ್ತೆ, ಕಮ್ಮಗೊಂಡನಹಳ್ಳಿ ಸೇರಿದಂತೆ ನಗರದ ವಿವಿಧೆಡೆಯ ಪ್ರಮುಖ ಮಸೀದಿಗಳಲ್ಲಿ ಪ್ರಾರ್ಥನೆ ಸಲ್ಲಿಸಲಾಯಿತು.

ಮಸೀದಿಗಳ ಎದುರು ಗುಲಾಬಿ ಹೂವಿನ ಮಾರಾಟದ ವ್ಯವಸ್ಥೆಯಿತ್ತು. ಪುಟ್ಟ ಮಕ್ಕಳು, ದೊಡ್ಡವರು ಹೊಸಬಟ್ಟೆ, ಟೋಪಿಯೊಂದಿಗೆ ಕಂಗೊಳಿಸಿದರು. ಮಕ್ಕಳು ಪರಸ್ಪರ ಆಲಿಂಗಿಸಿಕೊಂಡು ಶುಭಾಶಯ ವಿನಿಮಯ ಮಾಡಿಕೊಂಡರು. ಸಮಾಜದ ಬಡವರಿಗೆ ದಾನ ನೀಡಲಾಯಿತು.

ಹೊಸ ಬಟ್ಟೆ ತೊಟ್ಟು ಶುಭ ಕೋರಿದರು. ಈ ಹಬ್ಬ ತ್ಯಾಗದ ಪ್ರತೀಕವಾಗಿದ್ದು, ಕುರಿ ಬಲಿ ನೀಡಲಾಯಿತು. ನೆರೆ ಹೊರೆಯವರು, ಬಡವರಿಗೆ ತಮ್ಮ ಶಕ್ತಿಗೆ ಅನುಸಾರವಾಗಿ ಮಾಂಸ ದಾನ ಮಾಡಿದರು. ಹಬ್ಬದೂಟ ಮಾಡಿ ಸಂಬಂಧಿಕರ ಜೊತೆಗೆ, ಸ್ನೇಹಿತರ ಜೊತೆಗೆ ಹಂಚಿಕೊಂಡರು.

ಈದ್–ಉಲ್–ಅದಾ (ಬಕ್ರೀದ್) ಹಬ್ಬದ ಪ್ರಯುಕ್ತ ಮೈಸೂರು ರಸ್ತೆಯಲ್ಲಿರುವ ಈದ್ಗಾ ಮೈದಾನದಲ್ಲಿ ಗುರುವಾರ ಮುಸಲ್ಮಾನರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು

ಪ್ರಜಾವಾಣಿ ಚಿತ್ರಗಳು: ರಂಜು ಪಿ.

ಪ್ರಾರ್ಥನಾನಿರತ ಬಾಲಕಿ

ಜೆ.ಎಂ. ವೀರಸಂಗಯ್ಯಗೆ 'ಶಾಂತವೇರಿ ಗೋಪಾಲಗೌಡ ಸ್ಮಾರಕ ಪ್ರಶಸ್ತಿ' ಪ್ರದಾನ

'ಪ್ರಜಾಪ್ರಭುತ್ವದ ಪತನಮುಖಿ ಸಂದರ್ಭ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜಕೀಯ ಪಕ್ಷಗಳಿಗೆ ತತ್ವನಿಷ್ಠೆ, ಪಾರದರ್ಶಕ ಶುದ್ಧತೆ ಇಲ್ಲದ ಪರಿಣಾಮ ನಮ್ಮ ಪ್ರಜಾಪ್ರಭುತ್ವ ಅವನತಿಯ ಹಾದಿಯಲ್ಲಿ ಸಾಗುತ್ತಿದೆ' ಎಂದು ಸಾಹಿತಿ ಎಸ್.ಜಿ. ಸಿದ್ಧರಾಮಯ್ಯ ಹೇಳಿದರು.

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಮೈಕೊ ಕನ್ನಡ ಬಳಗ ಜಂಟಿಯಾಗಿ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ರೈತ ಪರ ಹೋರಾಟಗಾರ ಜೆ.ಎಂ. ವೀರಸಂಗಯ್ಯ ಅವರಿಗೆ 'ಸಮಾಜವಾದಿ ಧುರೀಣ ಶಾಂತವೇರಿ ಗೋಪಾಲಗೌಡ ಸ್ಮಾರಕ ಪ್ರಶಸ್ತಿ' ಪ್ರದಾನ ಮಾಡಿ, ಮಾತನಾಡಿದರು.

'ಅಮೆರಿಕದ ಪ್ರಜಾಪ್ರಭುತ್ವ ಎಷ್ಟು ವಿನಾಶವನ್ನು ಕಂಡಿದೆಯೋ, ಅಷ್ಟೆ ವಿನಾಶವನ್ನು ನಮ್ಮ ದೇಶದ ಪ್ರಜಾಪ್ರಭುತ್ವವೂ ಕಾಣುತ್ತಿದೆ. ಅಲ್ಲಿ ಅವಿವೇಕ ಅದಕ್ಕೆ ಕಾರಣವಾದರೆ, ಇಲ್ಲಿ ಜಾತೀಯತೆ ಮತ್ತು ಕೋಮುದೃಷ್ಟಿ ಕಾರಣವಾಗಿದೆ. ಪ್ರಜಾಪ್ರಭುತ್ವವು ಅವನತಿಯತ್ತ ಸಾಗುತ್ತಿರುವ ಈ ಹೊತ್ತಿನಲ್ಲಿ ಸಮಾಜವಾದಿ ಹೋರಾಟಗಾರ ಶಾಂತವೇರಿ ಗೋಪಾಲಗೌಡ ಅವರು ನೆನಪಿಗೆ ಬರುತ್ತಾರೆ. ಅಂತಹ ತಾತ್ವಿಕ ನಿಲುವಿನ ಚೇತನಗಳು ಯಾವ ಪಕ್ಷದಲ್ಲಿಯೂ ಈಗ ಕಾಣಸಿಗುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಜರ್ಮನಿಯ ರಾಬರ್ಟ್ ಬಾಷ್ ಅವರು ಘನತೆ, ಗೌರವದೊಂದಿಗೆ ಉದ್ಯಮವನ್ನು ಮುನ್ನಡೆಸಿದ್ದರು. ಅವರು ಉದ್ಯಮ ಸ್ಥಾಪಿಸಿದ ಕಡೆ ಸ್ಥಳೀಯರಿಗೆ ಉದ್ಯೋಗ ನೀಡಿ ಮಾದರಿಯಾಗಿದ್ದರು. ಈಗ ಉದ್ಯಮ ದಂಧೆಯಾಗಿದೆ. ಅವರ ಕಾಲದಲ್ಲಿ ಸಮಾಜಮುಖಿಯಾಗಿತ್ತು' ಎಂದು ಸ್ಮರಿಸಿಕೊಂಡರು.

ಮೈಕೊ ಕನ್ನಡ ಬಳಗದ ಗೌರವಾಧ್ಯಕ್ಷೆ ಪದ್ಮಿನಿ ನಾಗರಾಜು, 'ರೈತರ ಸಮಸ್ಯೆ ಬೇರೆ ಬೇರೆಯಿದ್ದು, ರೈತ ಚಳವಳಿ ನಿರಂತರ ನಡೆಯಲಿದೆ. ಸೂಪರ್ ಮಾರುಕಟ್ಟೆಗಳು ಬಂದ ಬಳಿಕ ನಿಜವಾದ ರೈತರನ್ನು ಶೋಷಣೆ ಮಾಡಲಾಗುತ್ತಿದೆ. ಪರಿಣಾಮ ರೈತರು ಕೃಷಿಯಿಂದ ಹಿಂದೆ ಸರಿಯುತ್ತಿದ್ದಾರೆ. ಐಟಿ–ಬಿಟಿ ಉದ್ಯೋಗಿಗಳು ತೋಟ ಮಾಡಲು ಹೋಗಿ, ಬೆಳೆ ಬರುವ ಸಂದರ್ಭದಲ್ಲಿ ಸೂಕ್ತ ಬೆಲೆಯಿಲ್ಲದೆ ಕೈಸುಟ್ಟುಕೊಳ್ಳುತ್ತಿದ್ದಾರೆ' ಎಂದರು.

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ. ಪ್ರಕಾಶಮೂರ್ತಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮೈಕೊ ಕನ್ನಡ ಬಳಗದ ಅಧ್ಯಕ್ಷ ಕೆ.ಎಸ್. ಶ್ರೀರಾಮತೀರ್ಥ, ಬಾಷ್ ಬಿಡದಿ ಘಟಕದ ಮಾನವ ಸಂಪನ್ಮೂಲ ಅಧಿಕಾರಿ ಪ್ರಶಾಂತ್ ಪಾಟೀಲ ಮತ್ತು ಮೈಕೊ ನೌಕರರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಆರ್. ಮಂಜುನಾಥ್ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಜೆ.ಎಂ. ವೀರಸಂಗಯ್ಯ ಅವರಿಗೆ 'ಸಮಾಜವಾದಿ ಧುರೀಣ ಶಾಂತವೇರಿ ಗೋಪಾಲಗೌಡ ಸ್ಮಾರಕ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಕೆ.ಎಸ್. ಶ್ರೀರಾಮತೀರ್ಥ, ಪದ್ಮಿನಿ ನಾಗರಾಜು, ಎಸ್.ಜಿ. ಸಿದ್ಧರಾಮಯ್ಯ, ಎಂ. ಪ್ರಕಾಶಮೂರ್ತಿ, ಪ್ರಶಾಂತ್ ಪಾಟೀಲ ಮತ್ತು ಆರ್. ಮಂಜುನಾಥ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಒಕ್ಕಲಿಗರ ಸಂಘ: 31ಕ್ಕೆ ಸರ್ವ ಸದಸ್ಯರ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಒಕ್ಕಲಿಗರ ಸಂಘವು ಇದೇ 31ರಂದು ಬೆಳಿಗ್ಗೆ 11 ಗಂಟೆಗೆ ಅರಮನೆ ಮೈದಾನದಲ್ಲಿ (ಗಾಯತ್ರಿ ವಿಹಾರ ಮತ್ತು ಗಾಯತ್ರಿ ವೃಕ್ಷ) ಸರ್ವ ಸದಸ್ಯರ ಸಭೆ ಮತ್ತು ವಿಶೇಷ ಸರ್ವ ಸದಸ್ಯರ ಸಭೆಯನ್ನು ಹಮ್ಮಿಕೊಂಡಿದೆ.

ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾತನಾಡಿದ ಸಂಘದ ಅಧ್ಯಕ್ಷ ಎಲ್. ಶ್ರೀನಿವಾಸ್, '11 ವರ್ಷಗಳ ಬಳಿಕ ಸರ್ವ ಸದಸ್ಯರ ಸಭೆಯನ್ನು ಮಾಡಲಾಗುತ್ತಿದೆ. 2016ರ ನಂತರ ಕಾರಣಾಂತರಗಳಿಂದ ಸರ್ವಸದಸ್ಯರ ಸಭೆ ನಡೆದಿರಲಿಲ್ಲ. ಈಗ ಸಮಿತಿಯು ಆಡಳಿತ ವರದಿ ಮಂಡಿಸಲು ಸರ್ವ ಸದಸ್ಯರ ಸಭೆ ಕರೆದಿದೆ. ಅಂದು ಮಧ್ಯಾಹ್ನ 3 ಗಂಟೆಯ ಬಳಿಕ ವಿಶೇಷ ಸರ್ವಸದಸ್ಯರ ಸಭೆ ನಡೆಯಲಿದೆ. ಸಂಘದಲ್ಲಿ 6.5 ಲಕ್ಷ ಸದಸ್ಯರಿದ್ದು, ಅವರು ತಮ್ಮ ಗುರುತಿನ ಚೀಟಿಯೊಂದಿಗೆ ಸಭೆಯಲ್ಲಿ ಭಾಗವಹಿಸಬೇಕು' ಎಂದು ಮನವಿ ಮಾಡಿದರು.

ಸಂಘದ ಗೌರವಾಧ್ಯಕ್ಷ ಕೆಂಚಪ್ಪಗೌಡ, 'ಆಡಳಿತಾತ್ಮಕ ದೃಷ್ಟಿಯಿಂದ ಸಂಘದ ಬೈ–ಲಾದಲ್ಲಿ ಕೆಲ ತಿದ್ದುಪಡಿ ಮಾಡಬೇಕಾಗಿದೆ. ಚುನಾಯಿತ ಅಧ್ಯಕ್ಷರ ಅವಧಿಯನ್ನು 20 ತಿಂಗಳು ನಿಗದಿ ಮಾಡಬೇಕಾಗಿದೆ. ಇಂಥ ವಿವಿಧ ಸಂಗತಿಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗುತ್ತದೆ' ಎಂದರು. ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಜಿ. ಗಂಗಾಧರ್ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ದಲಿತರನ್ನು ಹೊರಗಿಟ್ಟು ಊರಹಬ್ಬ

ಕನಕಪುರ: ಕಸಬಾ ಹೋಬಳಿ ತುಂಗಣಿಯಲ್ಲಿ ಆಚರಿಸಲಾದ ಗ್ರಾಮದೇವತೆ ಮಾರಮ್ಮನ ಹಬ್ಬದ ವೇಳೆ ಅಸ್ಪೃಶ್ಯತೆ ಆಚರಿಸಲಾಗಿದೆ. ಗ್ರಾಮದ ದಲಿತ ಸಮುದಾಯವನ್ನು ಹಬ್ಬದಿಂದ ಹೊರಗಿಡಲಾಗಿದೆ ಎಂದು ದಲಿತ ಸಮುದಾಯದವರು ತಹಶೀಲ್ದಾರ್‌ಗೆ ದೂರು ನೀಡಿದ್ದಾರೆ.

ದೂರಿನ ಕಾರಣದಿಂದಾಗಿ ತಹಶೀಲ್ದಾರ್ ಸಂಜಯ್ ಗ್ರಾಮಕ್ಕೆ ಭೇಟಿ ನೀಡಿ ಎರಡೂ ಸಮುದಾಯಗಳ ಮುಖಂಡರ ಜೊತೆ ಪ್ರತ್ಯೇಕವಾಗಿ ಚರ್ಚಿಸಿದ ಬಳಿಕ ಶಾಂತಿ ಸಭೆ ನಡೆಸಿದ್ದಾರೆ.

ದಲಿತ ಸಮುದಾಯದವರಿಗೆ ಮಾಹಿತಿ ನೀಡದೆ ಹಬ್ಬದ ಆಚರಣೆಗೆ ಸೇರಿಸಿಕೊಳ್ಳದೆ ಕೈ ಬಿಟ್ಟಿರುವುದು ಸರಿಯಲ್ಲ. ಸಮನ್ವಯದಿಂದ ಎಲ್ಲರೂ ಒಟ್ಟಾಗಿ ಹಬ್ಬ ಆಚರಣೆ ಮಾಡಿ ಗ್ರಾಮದಲ್ಲಿ ಅನೋನ್ಯತೆಯಿಂದ ಇರಬೇಕು ಎಂದು ತಹಶೀಲ್ದಾರ್ ಮನವಿ ಮಾಡಿದರು. ಇದಕ್ಕೆ ಎರಡೂ ಸಮುದಾಯದವರು ಒಪ್ಪಿಗೆ ಸೂಚಿಸಿದರು.

ಪೊಲೀಸ್ ಇಲಾಖೆಯ ಸಿಬ್ಬಂದಿಗೆ ಅಪಘಾತ ಸೇರಿದಂತೆ ವಿವಿಧ ವಿಮೆ ಯೋಜನೆಗಳನ್ನು ಒದಗಿಸುವ ಕುರಿತು ಬ್ಯಾಂಕ್ ಆಫ್ ಬರೋಡಾದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ, ಬ್ಯಾಂಕ್‌ನ ಪ್ರಧಾನ ವ್ಯವಸ್ಥಾಪಕ ಅನಿಲ್ ಕುಮಾರ್ ಶ್ರೀವಾತ್ಸವ, ಡಿಐಜಿಗಳಾದ ಟಿ.ಶ್ರೀಧರ, ಕಲಾ ಕೃಷ್ಣಸ್ವಾಮಿ, ಸಂಜೀವ್ ಪಾಟೀಲ, ಬ್ಯಾಂಕ್‌ನ ಡಿಜಿಎಂ ವೆಂಕಟರಮಣಿ ಶ್ರೀಪೂರ್ಣ, ಪ್ರವೀಣ್ ಕುಮಾರ್, ರಾಜೀವ್ ಕುಮಾರ್ ಮಿಶ್ರಾ, ಎಜಿಎಂಗಳಾದ ಪಿ.ಅಮರನಾಥ ರೆಡ್ಡಿ, ಸುನೀಲ್‌ಕುಮಾರ್, ಸಲಹೆಗಾರ ತರುಣ್‌ಕುಮಾರ್ ಸಿನ್ಹಾ ಉಪಸ್ಥಿತರಿದ್ದರು

ನಗರದಲ್ಲಿ ಇಂದು

45ನೇ ವಾರ್ಷಿಕೋತ್ಸವ ಸಮಾರಂಭ: ಅತಿಥಿ: ಸಿ.ಪಿ. ರಾಧಾಕೃಷ್ಣನ್, ಸಾನ್ನಿಧ್ಯ: ಶ್ರೀ ಶ್ರೀ ರವಿಶಂಕರ್ ಗುರೂಜಿ, ಆಯೋಜನೆ ಹಾಗೂ ಸ್ಥಳ: ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರ, ಬೆಳಿಗ್ಗೆ 9

ಸಿ.ಪಿ. ರಾಧಾಕೃಷ್ಣನ್

ವಿ.ಆರ್. ದೇವರಾಜ್ ಅವರಿಗೆ ಬೀಳ್ಕೊಡುಗೆ ಸಮಾರಂಭ: ಅತಿಥಿಗಳು: ಬಿ. ರಮೇಶ್, ನವೀನ್ ಜೋಸೆಫ್, ರಮೇಶ್ ಕುಡೇನಟ್ಟಿ, ವಿಜಯಲಕ್ಷ್ಮಿ ಎಂ.ವಿ., ಅಧ್ಯಕ್ಷತೆ: ಪಿ.ಆರ್. ಚೇತನಾ, ಆಯೋಜನೆ: ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ರಸಾಯನ ವಿಜ್ಞಾನ ಮತ್ತು ಜೀವರಸಾಯನ ವಿಜ್ಞಾನ ವಿಭಾಗ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಳಿಗ್ಗೆ 11

ಕಲಾಕೃತಿ ಸಮ್ಮೇಳನ: ಶಾಸ್ತ್ರೀಯ ಸಂಗೀತ ಗಾಯನ ಮತ್ತು ನೃತ್ಯ ಸಾಧಕರಿಗೆ ಪ್ರಶಸ್ತಿ ಪ್ರದಾನ, ಆಯೋಜನೆ: ಹೆರಿಟೇಜ್ ಫೌಂಡೇಷನ್ ಆಫ್ ಆರ್ಟ್ ಆ್ಯಂಡ್ ಕಲ್ಚರ್, ಸ್ಥಳ: ಬಾಲ ಭವನ ಸಭಾಂಗಣ, ಕಬ್ಬನ್ ಉದ್ಯಾನ, ಮಧ್ಯಾಹ್ನ 2.15

ಅಂಗಳದಲ್ಲಿ ತಿಂಗಳ ಪುಸ್ತಕ: ಅ.ನ.ಕೃಷ್ಣರಾಯರ ಜನ್ಮದಿನದ ಅಂಗವಾಗಿ 'ಸಂಧ್ಯಾರಾಗ' ಕೃತಿ ಬಗ್ಗೆ ಉಪನ್ಯಾಸ: ಬೈರಮಂಗಲ ರಾಮೇಗೌಡ, ಉದ್ಘಾಟನೆ: ಮಾನಸ, ಅಧ್ಯಕ್ಷತೆ: ಎನ್.ಎಸ್. ವಿಜಯ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರ, ಸ್ಥಳ: ಭಾರತ್ ವಿದ್ಯಾ ಸಂಸ್ಥೆ, ಜಯನಗರ 4ನೇ ಬಡಾವಣೆ, ಬೆಳಿಗ್ಗೆ 11

ಸಂತೋಷ್ ಹೆಗ್ಡೆ

ಪದವಿ ಪ್ರದಾನ ಸಮಾರಂಭ: ಮುಖ್ಯ ಅತಿಥಿ: ಸಂತೋಷ್ ಹೆಗ್ಡೆ, ಅಧ್ಯಕ್ಷತೆ: ಎನ್. ರಾಮಾನುಜ, ಆಯೋಜನೆ: ಎಂ.ಪಿ. ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಸ್ಥಳ: ಖಿಂಚ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10.30

'ಕಲಾದರ್ಪಣ' ವರ್ಣಚಿತ್ರ ಪ್ರದರ್ಶನ ಮತ್ತು ಕಲಾಕೃತಿಗಳ ಮಾರಾಟ ಉದ್ಘಾಟನೆ: ಆಯೋಜನೆ: ಕಲಾದರ್ಪಣ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 4

'ಉತ್ಪಾದನಾ ಶ್ರೇಷ್ಠತೆಯತ್ತ ಮೂಲಭೂತ ಹೆಜ್ಜೆಗಳು' ವಿಷಯದ ಬಗ್ಗೆ ಉಪನ್ಯಾಸ: ಸಿ. ನರೇಂದ್ರ, ಸೀತಾರಾಮು ಎಸ್., ಎಚ್.ಕೆ. ರಾಮರಾಜು, ಕೆ.ಆರ್. ನಟರಾಜ್, ಆಯೋಜನೆ ಹಾಗೂ ಸ್ಥಳ: ದಿ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್, ಡಾ.ಬಿ.ಆರ್. ಅಂಬೇಡ್ಕರ್ ವೀದಿ, ಸಂಜೆ 5.30

'ರಂಗ ರಂಗೋಲಿ' ನಾಟಕಗಳ ಉತ್ಸವ: ವೇದಿಕೆ ಫೌಂಡೇಷನ್ ತಂಡದಿಂದ 'ತುಘಲಕ್' ನಾಟಕ ಪ್ರದರ್ಶನ, ರಚನೆ: ಗಿರೀಶ ಕಾರ್ನಾಡ, ಮರು ನಿರ್ದೇಶನ: ಋತ್ವಿಕ್ ಸಿಂಹ, ಅತಿಥಿ: ಮಂಡ್ಯ ರಮೇಶ್, ಆಯೋಜನೆ:ಅಕಾಡಮಿ ಆಫ್ ಮ್ಯೂಸಿಕ್, ಸ್ಥಳ: ಚೌಡಯ್ಯ ಸ್ಮಾರಕ ಭವನ, ಮಲ್ಲೇಶ್ವರ, ಸಂಜೆ 6.30

ಮಂಟೇಸ್ವಾಮಿ ಕಾವ್ಯ ಲೈವ್: ಭಾಗವಹಿಸುವವರು: ಮೈಸೂರು ಜಿ. ಗುರುರಾಜ್, ಸಿ. ಬಸವರಾಜು (ಸಹಗಾನ), ಬಿ. ಜಗದೀಶ್ (ಡಕ್ಕಿ), ಜಿ. ಪೃಥ್ವಿರಾಜ್ (ಕಂಜರಿ), ಕಾಂತರಾಜು (ತಾಳ),ಜಿ. ಸಿದ್ದರಾಜು (ಘಟ), ಆಯೋಜನೆ ಹಾಗೂ ಸ್ಥಳ: ಇಂಡಿಯನ್ ಹೆರಿಟೇಜ್ ಅಕಾಡೆಮಿ, ಕೋರಮಂಗಲ, ಸಂಜೆ 6.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

'ಹೆಚ್ಚಿನ ಶುಲ್ಕ ಕೇಳಿದರೆ ದೂರು ನೀಡಿ'

ಬೆಂಗಳೂರು: ಪ್ರವೇಶ ಪಡೆಯುವಾಗ ಖಾಸಗಿ ಶಿಕ್ಷಣ ಸಂಸ್ಥೆಗಳು ಹೆಚ್ಚಿನ ಶುಲ್ಕಕ್ಕೆ ಬೇಡಿಕೆಯಿಟ್ಟರೆ ದೂರು ನೀಡುವಂತೆ ಶುಲ್ಕ ನಿಯಂತ್ರಣ ಸಮಿತಿ ವಿದ್ಯಾರ್ಥಿಗಳಿಗೆ ಸೂಚಿಸಿದೆ.

ರಾಜ್ಯದಲ್ಲಿರುವ ಅನುದಾನಿತ, ಅನುದಾನರಹಿತ, ಧಾರ್ಮಿಕ, ಭಾಷಾ ಅಲ್ಪಸಂಖ್ಯಾತ ಸಂಸ್ಥೆಗಳಲ್ಲಿನ ವಿವಿಧ ಕೋರ್ಸ್‌ಗಳಿಗೆ ಸರ್ಕಾರದ ಕೋಟಾದಡಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ)ಸೀಟುಗಳನ್ನು ಹಂಚಿಕೆ ಮಾಡಿದೆ. ಸರ್ಕಾರ ನಿಗದಿಪಡಿಸಿರುವ ಬೋಧನಾ ಶುಲ್ಕ, ಕಾನೂನಿನ ಅಡಿಯಲ್ಲಿ ನಿಗದಿಪಡಿಸಿರುವ ಇನ್ನಿತರೆ ಶುಲ್ಕಗಳನ್ನು ಹೊರತುಪಡಿಸಿ ಹೆಚ್ಚಿನ ಶುಲ್ಕಕ್ಕೆ ಬೇಡಿಕೆ ಇಡುವಂತಿಲ್ಲ ಎಂದು ಸಮಿತಿ ಅಧ್ಯಕ್ಷರಾದ ನ್ಯಾಯಮೂರ್ತಿ ಬಿ.ಶ್ರೀನಿವಾಸಗೌಡ ತಿಳಿಸಿದ್ದಾರೆ. ಹೆಚ್ಚುವರಿ ಶುಲ್ಕ ಕೇಳಿದರೆ ಕೆಇಎಯ ಶುಲ್ಕ ನಿಯಂತ್ರಣ ಸಮಿತಿಗೆ ಲಿಖಿತವಾಗಿ ದೂರು ನೀಡಬಹುದು ಎಂದು ತಿಳಿಸಿದ್ದಾರೆ. ಮಾಹಿತಿಗೆ ಸಂಪರ್ಕ ಸಂಖ್ಯೆ: 080– 23442599

COFFEE DAY ENTERPRISES LTD.

Coffee Day® Brewing new possibilities.

Registered Office: 165, R.V. Road, (Near Minerva Circle), Bengaluru - 560 004, Karnataka, India.
Tel: + 91 80 4001 2345; **Fax:** + 91 80 4001 2650;
Website: www.coffeeday.com
Corporate Identification Number: L55101KA2008PLC046866

Financial Results for the Quarter/Year ended 31st March, 2026

(₹ in Crores except per share data)

Particulars	Quarter ended 31st March, 2026 (Audited)	Year ended 31st March, 2026 (Audited)	Quarter ended 31st March, 2025 (Audited)	Year ended 31st March, 2025 (Audited)
Total income from operations (net)	293.48	1,154.40	279.23	1,125.64
Net Profit/(loss) from ordinary activities after tax	132.07	210.14	(114.16)	(143.20)
Net Profit/(loss) for the period after tax (after Extraordinary items)	132.07	210.14	(114.16)	(143.20)
Equity Share Capital	211.25	211.25	211.25	211.25
Reserves (excluding Revaluation Reserve as shown in the Balance Sheet of previous year)		2,582.84		2,379.21
Earnings Per Share (before extraordinary items) (of ₹ 10/- each)				
Basic :	6.25	9.61	(1.56)	(2.75)
Diluted :	6.25	9.61	(1.56)	(2.75)
Earnings Per Share (after extraordinary items) (of ₹ 10/- each)				
Basic :	6.25	9.61	(1.56)	(2.75)
Diluted :	6.25	9.61	(1.56)	(2.75)

Notes:
1. The above is an extract of the detailed format of Financial Results filed with the Stock Exchanges under Regulation 33 of the SEBI (Listing and other Disclosure Requirements) Regulations, 2015. The full format of the Financial Results are available on the website of BSE (www.bseindia.com) and NSE (www.nseindia.com) and on the Company's website www.coffeeday.com
2. The above results were reviewed by the Audit Committee and thereafter approved by the Board of Directors in their meeting held on 27th May, 2026 and have been subjected to Audit by the Statutory Auditors of the Company.
3. **Audited financial results of Coffee Day Enterprises Limited (Standalone Information)**

(₹ in Crores)

Particulars	Quarter ended 31st March, 2026 (Audited)	Year ended 31st March, 2026 (Audited)	Quarter ended 31st March, 2025 (Audited)	Year ended 31st March, 2025 (Audited)
Total income from operations (net)	4.66	25.28	5.07	25.76
Proift/(Loss) before tax and exceptional items	130.50	173.93	(246.52)	(241.59)
Profit/(Loss) after tax and exceptional items	130.50	173.93	(246.52)	(241.59)

Place : Bengaluru
Date : 27th May, 2026

For and Behalf of Board of Directors
Malavika Hegde
CEO and Whole Time Director

ಟೆಕಿಗೆ ₹1.66 ಕೋಟಿ ವಂಚಿಸಿದ ಯುವತಿ

ಡೇಟಿಂಗ್ ಆ್ಯಪ್ ಮೂಲಕ ಪರಿಚಯ: ವಂಚಕಿಯ ಮಾತಿಗೆ ಮರುಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೇಟಿಂಗ್ ಆ್ಯಪ್ ಮೂಲಕ ಪರಿಚಯವಾದ ಯುವತಿ, ಸಾಫ್ಟ್‌ವೇರ್ ಎಂಜಿನಿಯರ್‌ಗೆ ₹1.66 ಕೋಟಿ ವಂಚಿಸಿದ್ದಾರೆ.

ನೀಲಾದ್ರಿ ನಗರ ನಿವಾಸಿ ಸೌರವ್ ದುಬೆ ಅವರ ದೂರು ಆಧರಿಸಿ ರಿಯಾ ಅಗರ್ವಾಲ್ ಎಂಬಾಕೆಯ ವಿರುದ್ಧ ಬೆಂಗಳೂರಿನ ಆಗ್ನೇಯ ವಿಭಾಗದ ಸೆನ್ ಸೈಬರ್ ಕ್ರೈಮ್ ಪೊಲೀಸ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಖಾಸಗಿ ಕಂಪನಿ ಉದ್ಯೋಗಿಯಾಗಿರುವ ಸೌರವ್ ದುಬೆಗೆ ಫೆಬ್ರುವರಿ 15ರಂದು ಡೇಟಿಂಗ್ ಆ್ಯಪ್‌ವೊಂದರಲ್ಲಿ ರಿಯಾ ಅಗರ್ವಾಲ್ ಎಂಬಾಕೆಯ ಪರಿಚಯವಾಗಿದೆ. ಮೊಬೈಲ್ ನಂಬರ್‌ಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡು, ಆಡಿಯೊ ಹಾಗೂ ವಿಡಿಯೊ ಕರೆ ಮಾಡಿ ಮಾತನಾಡುತ್ತಿದ್ದರು. ಸೌರವ್‌ನನ್ನು ಮದುವೆಯಾಗುವುದಾಗಿ ನಂಬಿಸಿದ್ದಳು ಎಂದು ಪೊಲೀಸರು ತಿಳಿಸಿದ್ದಾರೆ.

‘ಆನ್‌ಲೈನ್ ಟ್ರೇಡಿಂಗ್‌ನಲ್ಲಿ ಹಣ ಹೂಡಿಕೆ ಮಾಡಿದರೆ, ಕಡಿಮೆ ಅವಧಿಯಲ್ಲಿ ಕೋಟ್ಯಂತರ ರೂಪಾಯಿ ಲಾಭ ಗಳಿಸಬಹುದು’ ಎಂಬ ರಿಯಾ ಮಾತನ್ನು ನಂಬಿದ ಸೌರವ್, ಮುಂದೆ ಮದುವೆಯಾಗಿ ಇಬ್ಬರೂ ಸಂತೋಷವಾಗಿ ಜೀವನ ಸಾಗಿಸಬಹುದು ಅಂದುಕೊಂಡರು. ಹಾಗಾಗಿ ಮೂರು ತಿಂಗಳ ಅವಧಿಯಲ್ಲಿ ಹಂತ ಹಂತವಾಗಿ ವಿವಿಧ ಬ್ಯಾಂಕ್ ಖಾತೆಗಳ ಮೂಲಕ ₹1.66 ಕೋಟಿ ರಿಯಾಗೆ ನೀಡಿದ್ದರು. ಇದಾದ ಬಳಿಕ ಸೌರವ್ ಬ್ಯಾಂಕ್ ಖಾತೆಗೆ ಕೇವಲ ₹4,250 ಲಾಭಾಂಶ ಬಂದಿತ್ತು. ಇದರಿಂದ ಅನುಮಾನಗೊಂಡು, ತನಗೆ ಬರಬೇಕಾದ ಲಾಭದ ಹಣ ಮತ್ತು ಅಸಲು ವಾಪಸ್ ನೀಡುವಂತೆ ಕೇಳಿದರು’ ಎಂದು ಹೇಳಿದ್ದಾರೆ.

ಸೌರವ್ ಹಣ ಹಿಂತಿರುಗಿಸುವಂತೆ ಒತ್ತಾಯಿಸುತ್ತಿದ್ದಂತೆ ರಿಯಾ ಮೊಬೈಲ್ ನಂಬರ್ ಸ್ವಿಚ್ ಆಫ್ ಮಾಡಿಕೊಂಡು ನಾಪತ್ತೆಯಾಗಿದ್ದಾರೆ. ಬಳಿಕ ತಾನು ವಂಚನೆಗೆ ಒಳಗಾಗಿರುವುದನ್ನು ಅರಿತ ಟೆಕಿ, ಪೊಲೀಸರಿಗೆ ದೂರು ನೀಡಿದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ವಂಚನೆ ಮಾಡಿರುವ ಯುವತಿ, ಬ್ಯಾಂಕ್ ಖಾತೆಗಳ ಮಾಹಿತಿ ಸಂಗ್ರಹಿಸುತ್ತಿದ್ದಾರೆ.

ದ್ವಿಚಕ್ರ ವಾಹನ, ಸಿಲಿಂಡರ್ ಕಳ್ಳರ ಬಂಧನ

ಮಾರಕಾಸ್ತ್ರ ತೋರಿಸಿ ನಗದು ಸುಲಿಗೆ ಹಾಗೂ ಸಿಲಿಂಡರ್, ದ್ವಿಚಕ್ರ ವಾಹನಗಳನ್ನು ಕಳವು ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಪುಟ್ಟೇನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಾಯಚೂರಿನ ಸಯ್ಯದ್ ದೋರದ್ (26) ಮತ್ತು ಸಯ್ಯದ್ ಅಶ್ಫಲ್ (28) ಎಂಬುವರನ್ನು ಬಂಧಿಸಿ, ₹2.65 ಲಕ್ಷ ಮೌಲ್ಯದ ಐದು ದ್ವಿಚಕ್ರ ವಾಹನ ಹಾಗೂ ಎಂಟು ಗ್ಯಾಸ್ ಸಿಲಿಂಡರ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ.

ನೃಪತುಂಗ ರಸ್ತೆಯ ಶೆಡ್‌ವೊಂದರಲ್ಲಿ ವಾಸವಿದ್ದ ಗಾರೆ ಕೆಲಸಗಾರರೊಬ್ಬರಿಗೆ ಮಾರ್ಚ್ 28ರಂದು ಆರೋಪಿಗಳು ಮಾರಕಾಸ್ತ್ರ ತೋರಿಸಿ, ₹5 ಸಾವಿರ ಸುಲಿಗೆ ಮಾಡಿ ಪರಾರಿಯಾಗಿದ್ದರು. ಈ ಬಗ್ಗೆ ಗಾರೆ ಕೆಲಸಗಾರ ಪೊಲೀಸರಿಗೆ ದೂರು ನೀಡಿದ್ದರು.

ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು ಬಾತ್ಮೀದಾರರ ಮಾಹಿತಿ ಮೇರೆಗೆ ವಿನಾಯಕನಗರ ಸರ್ಕಲ್ ಬಳಿ ಇಬ್ಬರು ವ್ಯಕ್ತಿಗಳನ್ನು ಕೃತ್ಯಕ್ಕೆ ಬಳಸಿದ ದ್ವಿಚಕ್ರ ವಾಹನ ಸಮೇತ ವಶಕ್ಕೆ ಪಡೆದುಕೊಳ್ಳಲಾಯಿತು. ವಿಚಾರಣೆ ವೇಳೆ ನಗದು ಸುಲಿಗೆ ಮಾಡಿರುವುದನ್ನು ಒಪ್ಪಿಕೊಂಡಿದ್ದಾರೆ. ಅಲ್ಲದೇ ಮಡಿವಾಳ, ಜಯನಗರ, ಕುಮಾರಸ್ವಾಮಿ ಬಡಾವಣೆ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ನಡೆದ ದ್ವಿಚಕ್ರ ವಾಹನ ಹಾಗೂ ಸಿಲಿಂಡರ್‌ಗಳನ್ನು ಕಳವು ಮಾಡಿರುವುದು ಗೊತ್ತಾಗಿದೆ.

ಬನಶಂಕರಿಯ ಪ್ರಗತಿಪುರದ ಪರಿಚಿತ ವ್ಯಕ್ತಿಗೆ ದ್ವಿಚಕ್ರ ವಾಹನಗಳನ್ನು ಮಾರಾಟ ಮಾಡಿದರೆ, ಜೆ.ಪಿ.ನಗರ 5ನೇ ಹಂತದಲ್ಲಿರುವ ಪರಿಚಿತನಿಗೆ ಗ್ಯಾಸ್ ಸಿಲಿಂಡರ್ ನೀಡಿರುವುದಾಗಿ ವಿಚಾರಣೆ ವೇಳೆ ಆರೋಪಿಗಳು ತಿಳಿಸಿದ್ದಾರೆ. ದ್ವಿಚಕ್ರ ವಾಹನಗಳು ಹಾಗೂ ಗ್ಯಾಸ್ ಸಿಲಿಂಡರ್‌ಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಆರೋಪಿಗಳ ಬಂಧನದಿಂದ ಪುಟ್ಟೇನಹಳ್ಳಿ ಪೊಲೀಸ್ ಠಾಣೆಯ 2 ದ್ವಿಚಕ್ರ ವಾಹನ, ಮಡಿವಾಳ, ಕುಮಾರಸ್ವಾಮಿ ಲೇಔಟ್, ಜಯನಗರ ಪೊಲೀಸ್ ಠಾಣೆಯ ತಲಾ ಒಂದು ದ್ವಿಚಕ್ರ ವಾಹನ ಕಳವು ಪ್ರಕರಣ ಸೇರಿ ಐದು ಪ್ರಕರಣ ಪತ್ತೆಯಾಗಿವೆ.

ಪಿಯು ಮುಗಿಯುವ ವೇಳೆಗೆ ಐದು ಕೃತಿ

ಅತಿ ಕಿರಿಯ ಬರಹಗಾರ್ತಿ ಅಮನ ಜೆ.ಕುಮಾರ್ ಸಾಧನೆ

ಪ್ರಜಾವಾಣಿ ವಾರ್ತೆ

ಸಿ.ಎನ್.ಆರ್. ರಾವ್ ಜೊತೆಗೆ ಅಮನ ಜೆ.ಕುಮಾರ್

ಬೆಂಗಳೂರು: ಅತಿ ಕಿರಿಯ ಬರಹಗಾರ್ತಿ ಎಂದು ಹೆಸರು ಮಾಡಿರುವ ಅಮನ ಜೆ. ಕುಮಾರ್ ಅವರ 5ನೇ ಕೃತಿ ‘ದಿ ಮಿಸ್ಟಿಕಲ್ ವೇವ್ಸ್’ ಕೃತಿಯನ್ನು ಜವಾಹರಲಾಲ್ ನೆಹರೂ ಸೆಂಟರ್ ಫಾರ್ ಅಡ್ವಾನ್ಸ್‌ಡ್ ಸೈಂಟಿಫಿಕ್ ರಿಸರ್ಚ್‌ನ ಗೌರವಾಧ್ಯಕ್ಷ ಸಿ.ಎನ್.ಆರ್. ರಾವ್ ಜನಾರ್ಪಣೆ ಮಾಡಿದರು.

‘ದಿ ಮಿಸ್ಟಿಕಲ್ ವೇವ್ಸ್’ ಕವನ ಸಂಕಲನಕ್ಕೆ ಲೇಖಕಿ ಬಾನು ಮುಷ್ತಾಕ್ ಮುನ್ನುಡಿ ಬರೆದಿದ್ದಾರೆ. ವ್ಯಕ್ತಿಯ ಜೀವನ ಪಯಣವನ್ನು ಪ್ರತಿಬಿಂಬಿಸುವ ಕವನಗಳು ಈ ಸಂಕಲನದಲ್ಲಿವೆ. ಅನುಭವ, ನಿರೀಕ್ಷೆ ಮತ್ತು ಆನಂದದ ಸಂಯೋಜನೆ ಯಾಗಿರುವ ಈ ಕೃತಿ ಬ್ಲ್ಯಾಕ್‌ಔಟ್ ಮತ್ತು ಸಾನೆಟ್‌ಗಳ ಸಮನ್ವಯವಾಗಿದೆ ಎಂದು ಲೇಖಕರು ತಿಳಿಸಿದ್ದಾರೆ.

ಬಿಷಪ್ ಕಾಟನ್ ಗರ್ಲ್ಸ್ ಸ್ಕೂಲ್‌ನಲ್ಲಿ 6ನೇ ತರಗತಿಯಲ್ಲಿರುವಾಗ ಅಮನ ಕವನ ಮತ್ತು ಕೃತಿಗಳನ್ನು ಬರೆಯಲು ಆರಂಭಿಸಿದ್ದರು. ಈಗ ದ್ವಿತೀಯ ಪಿಯು ವ್ಯಾಸಂಗ ಮುಗಿಸಿದ್ದಾರೆ. ಈಗಾಗಲೇ ಪ್ರಕಟಗೊಂಡಿರುವ ‘ಇಕೋಸ್ ಆಫ್ ಸೋಲ್‌ಫುಲ್ ಪೋಯಮ್’, ‘ವರ್ಲ್ಡ್ ಅಮಿಡ್‌ಸ್ಟ್ ದಿ ವರ್ಡ್ಸ್’, ‘ಗ್ಯಾಲೊರ್ ಆಫ್ ಮಿಸ್ಟ್ರೀಸ್’ ಇಂಗ್ಲಿಷ್ ಭಾಷೆಯಲ್ಲಿದ್ದರೆ, ‘ಲಫ್‌ಝೋಂ ಕಿ ಮೆಹ್‌ಫಿಲ್’ ಹಿಂದಿ ಕೃತಿಯಾಗಿದೆ.

ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ನಿಂದ, ವರ್ಲ್ಡ್ ರೆಕಾರ್ಡ್ ಯುನಿವರ್ಸಿಟಿಯಿಂದ, ಇಂಟರ್ ನ್ಯಾಷನಲ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್, ವಂಡರ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಮತ್ತು ಗೋಲ್ಡನ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ಗಳಿಂದ ಅತಿ ಕಿರಿಯ ಕವಯಿತ್ರಿ ಎಂಬ ಗೌರವ, ಏಷ್ಯಾ ಬುಕ್ ಆಫ್ ರೆಕಾರ್ಡ್ಸ್‌ನಿಂದ ಗ್ರ್ಯಾಂಡ್ ಮಾಸ್ಟರ್ ಪ್ರಶಸ್ತಿ, ನೊಬೆಲ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್‌ನಿಂದ ಅತಿ ಹೆಚ್ಚು ಕವನ ರಚಿಸಿದ ಕವಯಿತ್ರಿ ಗೌರವ (2020ರ ಏಪ್ರಿಲ್‌ನಿಂದ ಒಂದೂವರೆ ವರ್ಷದಲ್ಲಿ 337 ಕವನ) ಸೇರಿದಂತೆ ಅನೇಕ ಗೌರವಗಳಿಗೆ ಪಾತ್ರರಾಗಿದ್ದಾರೆ.

ಗುಜರಿ ವ್ಯಾಪಾರಿ ಕೊಲೆ: ನಾಲ್ವರ ಸೆರೆ

ಬೆಂಗಳೂರು: ಮಾಜಿ ಪ್ರಿಯತಮೆಯ ಭೇಟಿಗೆ ಬಂದು ಆಕೆಯ ಕುಟುಂಬಸ್ಥರಿಂದ ಹಲ್ಲೆಗೊಳಗಾಗಿ ಗುಜರಿ ವ್ಯಾಪಾರಿ ಮೃತಪಟ್ಟ ಪ್ರಕರಣ ಸಂಬಂಧ ನಾಲ್ವರು ಆರೋಪಿಗಳನ್ನು ಬ್ಯಾಟರಾಯನಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಾಮನಗರದಲ್ಲಿ ಗುಜರಿ ವ್ಯಾಪಾರ ಮಾಡಿಕೊಂಡಿದ್ದ ಮೊಹಮ್ಮದ್ ಖಾಸೀಂ (27) ಕೊಲೆಯಾದ ವ್ಯಕ್ತಿ. ಖಾಸೀಂ ಪೋಷಕರು ನೀಡಿದ ದೂರಿನ ಮೇರೆಗೆ ಅರ್ಬಿಯಾ ಕೌಸರ್, ಆಕೆಯ ಪತಿ ಮೊಹಮ್ಮದ್ ಅಕ್ಬರ್, ಸಂಬಂಧಿಕರಾದ ಓವೈಸ್ ಪಾಶಾ ಹಾಗೂ ಮೊಹಮ್ಮದ್ ಚಾಂದ್ ಪಾಶಾ ಎಂಬುವರನ್ನು ಪೊಲೀಸರು ಬಂಧಿಸಿ, ವಿಚಾರಣೆ ನಡೆಸುತ್ತಿದ್ದಾರೆ.

ಮೊಹಮ್ಮದ್ ಖಾಸೀಂ ಅವರು ಅರ್ಬಿಯಾ ಅವರನ್ನು ಪ್ರೀತಿಸುತ್ತಿದ್ದರು. ಆದರೆ, ಮೂರು ವರ್ಷಗಳ ಹಿಂದೆ ಬೇರೊಬ್ಬ ಯುವಕನ ಜತೆಗೆ ಯುವತಿಯ ಮದುವೆಯಾಗಿತ್ತು. ದಂಪತಿ ಶಾಮಣ್ಣ ಗಾರ್ಡನ್‌ನಲ್ಲಿ ವಾಸವಾಗಿದ್ದರು.

ಈ ಮಧ್ಯೆ ಖಾಸೀಂ ಅವರು ಮಾಜಿ ಪ್ರೇಯಸಿ ಮನೆಗೆ ಬಂದು ಹೋಗುತ್ತಿದ್ದರು. ಈ ವಿಷಯ ಗೊತ್ತಾಗಿ ಆಕೆಯ ಪತಿ ಹಾಗೂ ಅವರ ಕುಟುಂಬದ ಸದಸ್ಯರು ಗಲಾಟೆ ಮಾಡಿದ್ದರು. ಮೇ 25ರಂದು ಅರ್ಬಿಯಾ ಮನೆಗೆ ಬಂದಿದ್ದ ವೇಳೆ ಹಲ್ಲೆ ನಡೆಸಲಾಗಿತ್ತು. ಹಲ್ಲೆಗೊಳಗಾಗಿದ್ದ ಖಾಸೀಂ ಅವರನ್ನು ಮನೆಯವರು ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಬಳಿಕ ಮೃತನ ಪೋಷಕರು ಬ್ಯಾಟರಾಯನಪುರ ಠಾಣೆಗೆ ದೂರು ನೀಡಿದ್ದರು.

ದ್ವಿಚಕ್ರ ವಾಹನಗಳಿಗೆ ಹಾನಿ: ಮೂವರ ಸೆರೆ

ಬೆಂಗಳೂರು: ಮನೆ ಎದುರು ನಿಲುಗಡೆ ಮಾಡಿದ್ದ ದ್ವಿಚಕ್ರ ವಾಹನಗಳ ಮೇಲೆ ಕಲ್ಲು ಎಸೆದು ಜಖಂಗೊಳಿಸಿದ್ದ ಮೂವರನ್ನು ವಿ.ವಿ.ಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವಿ.ವಿ.ಪುರ ಠಾಣಾ ವ್ಯಾಪ್ತಿಯ ವೆಂಕಟಪ್ಪ ಗಲ್ಲಿಯಲ್ಲಿ ಮೇ 20ರ ಬೆಳಗಿನ ಜಾವ ಆರೋಪಿಗಳಾದ ಅಭಿಷೇಕ್, ಪುನೀತ್, ಉಮೇಶ್ ಎಂಬವರು ದ್ವಿಚಕ್ರ ವಾಹನಗಳಿಗೆ ದೊಣ್ಣೆಯಿಂದ ಹೊಡೆದು ಹಾನಿಗೊಳಿಸಿದ್ದರು.

ಈ ವೇಳೆ ಬೈಕ್ ಸವಾರ ವಿಘ್ನೇಶ್ ಎಂಬಾತನನ್ನು ಅಡ್ಡಗಟ್ಟಿ, ನಿಂದಿಸಿ ಹಲ್ಲೆ ಮಾಡಿದ್ದರು. ಘಟನೆಯ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು.

ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ಹರಿದಾಡಿದ ಬೆನ್ನಲ್ಲೇ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡ ಪೊಲೀಸರು, ಆರೋಪಿಗಳನ್ನು ಬಂಧಿಸಿ ವಿಚಾರಣೆ ನಡೆಸಿದಾಗ ಅಭಿಷೇಕ್ ತನ್ನ ಸಹೋದರನ ಪತ್ನಿಯನ್ನು ಬೆದರಿಸಲು ಸಹಚರರನ್ನು ಒಗ್ಗೂಡಿಸಿ ಕೃತ್ಯ ಎಸಗಿದ್ದ ಎಂಬುದು ಗೊತ್ತಾಗಿದೆ. ಪ್ರತ್ಯೇಕ ಪ್ರಕರಣ ದಾಖಲಿಸಿ ತನಿಖೆ ಮಾಡಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾಣೆಯಾಗಿದ್ದ ಬಾಲಕನ ರಕ್ಷಣೆ

ಬೆಂಗಳೂರು: ಕಾಣೆಯಾಗಿದ್ದ ಎಂಟು ವರ್ಷದ ಬಾಲಕನನ್ನು 112 ಸಹಾಯವಾಣಿ ನೆರವಿನಿಂದ ಹೊಯ್ಸಳ ಪೊಲೀಸರು ಪತ್ತೆಹಚ್ಚಿ, ತಾಯಿ ಮಡಿಲಿಗೆ ಸೇರಿಸಿದ್ದಾರೆ.

ಮೇ 26ರಂದು ಬೆಳಿಗ್ಗೆ 10ರ ಸುಮಾರಿಗೆ ಸಾರ್ವಜನಿಕರೊಬ್ಬರು ಸಹಾಯವಾಣಿಗೆ ಕರೆ ಮಾಡಿ, ಯಶವಂತಪುರ ಪೊಲೀಸ್ ಠಾಣೆ ವ್ಯಾಪ್ತಿಯ ಎಂ.ಎಸ್. ರಾಮಯ್ಯ ಕಾಲೇಜಿನ ಬಳಿ ಬಾಲಕ ಪತ್ತೆ ಆಗಿರುವುದಾಗಿ ಮಾಹಿತಿ ನೀಡಿದ್ದರು. ಕಾರ್ಯಪ್ರವೃತ್ತರಾದ ಸಿಬ್ಬಂದಿ, ಸದಾಶಿವನಗರದ ಪೊಲೀಸ್ ಠಾಣೆಯ ‘ಹೊಯ್ಸಳ’ದ ಕರ್ತವ್ಯದಲ್ಲಿದ್ದ ಸಹಾಯಕ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ನರಸಿಂಹ ಮೂರ್ತಿ ಮತ್ತು ಸಹಾಯಕ ಹೆಡ್ ಕಾನ್‌ಸ್ಟೆಬಲ್ ನವೀನ್ ಕುಮಾರ್ ಅವರಿಗೆ ಮಾಹಿತಿ ರವಾನಿಸಿದ್ದಾರೆ. ಹೊಯ್ಸಳ ಪೊಲೀಸರು 14 ನಿಮಿಷದೊಳಗೆ ಸ್ಥಳಕ್ಕೆ ತೆರಳಿ ಎಂಟು ವರ್ಷದ ತೇಜಸ್‌ನನ್ನು ರಕ್ಷಿಸಿದರು. ಬಾಲಕ ಮನೆಯಿಂದ ತಪ್ಪಿಸಿಕೊಂಡು ಬಂದಿರುವುದು ಗೊತ್ತಾಗಿದೆ. ತಾಯಿ ಬಾಲಕನನ್ನು ಹುಡುಕಿಕೊಂಡು ಮತ್ತಿಕೆರೆ ಕಡೆಗೆ ಹೋಗಿದ್ದರು. ಬಾಲಕನ ತಾಯಿಯನ್ನು ಪತ್ತೆ ಮಾಡಿ, ಅವರಿಗೆ ಒಪ್ಪಿಸಿದ್ದಾರೆ.

ಶ್ರೀರಾಮಪುರ ರೆಫರಲ್ ಆಸ್ಪತ್ರೆ ನೆಲಸಮ

ಬೆಂಗಳೂರು: ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ವಾರ್ಡ್ ಸಂಖ್ಯೆ 139ರಲ್ಲಿರುವ ಶ್ರೀರಾಮಪುರ ರೆಫರಲ್ ಆಸ್ಪತ್ರೆಯು ಹಳೆಯದಾಗಿದ್ದು, ಪ್ರಸ್ತುತ ಆಸ್ಪತ್ರೆಯನ್ನು ನೆಲಸಮ ಮಾಡಲಾಗುತ್ತದೆ. ಬ್ರ್ಯಾಂಡ್ ಬೆಂಗಳೂರು ಯೋಜನೆ ಅಡಿಯಲ್ಲಿ 50 ಹಾಸಿಗೆಗಳುಳ್ಳ ನಗರ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ (ಯುಸಿಎಚ್‌ಸಿ) ಮೇಲ್ದರ್ಜೆಗೇರಿಸಲಾಗುತ್ತದೆ ಎಂದು ಪಾಲಿಕೆ ತಿಳಿಸಿದೆ.

ಸರ್ಕಾರದ ಆದೇಶ ಬಂದಮೇಲೆ ನಿರ್ಮಾಣ ಕಾರ್ಯ, ಮೇಲ್ದರ್ಜೆಗೇರಿಸುವ ಕಾಮಗಾರಿ ಆರಂಭವಾಗಲಿದೆ ಎಂದು ತಿಳಿಸಲಾಗಿದೆ. ವಲಯದ ಮಹಾಲಕ್ಷ್ಮೀಪುರಂ ರೆಫರಲ್ ಆಸ್ಪತ್ರೆಯಲ್ಲಿ ‘ವಿಶೇಷ ನವಜಾತ ಶಿಶು ಆರೈಕೆ ಘಟಕ (ಎಸ್‌ಎನ್‌ಸಿಯು)’ ಪ್ರಾರಂಭವಾಗಿರುವುದರಿಂದ, ಶ್ರೀರಾಮಪುರ ರೆಫರಲ್ ಆಸ್ಪತ್ರೆಯಲ್ಲಿ ಪ್ರಸ್ತುತ ನೀಡುತ್ತಿರುವ 24/7 ಹೆರಿಗೆ ಸೇವೆಯನ್ನು ಮಹಾಲಕ್ಷ್ಮೀಪುರಂ ರೆಫರಲ್ ಆಸ್ಪತ್ರೆಗೆ ತಾತ್ಕಾಲಿಕವಾಗಿ ಮುಂದಿನ ಆದೇಶದವರೆಗೂ ವರ್ಗಾಯಿಸಲಾಗಿದೆ. ಶ್ರೀರಾಮಪುರ ರೆಫರಲ್ ಆಸ್ಪತ್ರೆಯಲ್ಲಿ ಪ್ರತಿ ದಿನ ಬೆಳಿಗ್ಗೆ 9ರಿಂದ ಸಂಜೆ 4ರವರೆಗೆ ಹಾಗೂ ರಜಾ ದಿನಗಳಲ್ಲಿ ಬೆಳಿಗ್ಗೆ 9ರಿಂದ ಅಪರಾಹ್ನ 1ರ ವರೆಗೆ ಹೆರಿಗೆ ಸೇವೆ ಮುಂದುವರಿಯುತ್ತದೆ ಎಂದು ಪಾಲಿಕೆ ಪ್ರಕಟಣೆ ತಿಳಿಸಿದೆ.

‘ಸಿಂಡ್ರೆಲಾ’ ನೃತ್ಯ ನಾಟಕ ಪ್ರದರ್ಶನ

ಬೆಂಗಳೂರು: ‘ಪ್ರಭಾತ್ ಕಲಾವಿದರು’ ತಂಡದಿಂದ ‘ಸಿಂಡ್ರೆಲಾ’ ನೃತ್ಯ ನಾಟಕ ಮರು ಪ್ರದರ್ಶನವನ್ನು ರವೀಂದ್ರ ಕಲಾ ಕ್ಷೇತ್ರದಲ್ಲಿ ಜೂನ್ 13ರ ಸಂಜೆ 7ಕ್ಕೆ ಹಮ್ಮಿಕೊಳ್ಳಲಾಗಿದೆ.

ಹರಿಕಥಾ ವಿದ್ವಾನ್ ಗೋಪಿನಾಥ ದಾಸರು 90 ವರ್ಷಗಳ ಹಿಂದೆ ಸ್ಥಾಪಿಸಿದ ‘ಪ್ರಭಾತ್ ಕಲಾವಿದರು’ ಸಂಸ್ಥೆ ಪ್ರಮುಖ ಸಾಂಸ್ಕೃತಿಕ ಸಂಸ್ಥೆಗಳಲ್ಲಿ ಒಂದಾಗಿದ್ದು, ನಿರಂತರ ಪ್ರಯೋಗದಿಂದ ಗಮನ ಸೆಳೆದಿದೆ. 1978ರಲ್ಲಿ ಮೊದಲ ಬಾರಿಗೆ ಪ್ರದರ್ಶನಗೊಂಡ ‘ಸಿಂಡ್ರೆಲಾ’ ರೂಪಕವು ಕರ್ನಾಟಕದ ಪ್ರಮುಖ ನೃತ್ಯ ನಾಟಕವಾಗಿದ್ದು, ಭಾರತದಾದ್ಯಂತ 1,000ಕ್ಕೂ ಹೆಚ್ಚು ಪ್ರದರ್ಶನ ಕಂಡಿದೆ.

ನೃತ್ಯ ನಾಟಕ ಪಾಶ್ಚಾತ್ಯ ಕಥೆ ಆಧರಿಸಿದ್ದರೂ, ನಮ್ಮ ಮಣ್ಣಿನ ಸೊಗಡಿಗೆ ತಕ್ಕ ಭಾರತೀಯ ಪಾತ್ರ ಅಳವಡಿಸಿಕೊಳ್ಳಲಾಗಿದೆ. ಪ್ರೇಕ್ಷಕರಿಗೆ ವಿಭಿನ್ನ ಅನುಭವ ನೀಡಲು ಯುವಿಲೈಟ್ ಎಫೆಕ್ಟ್ಸ್, ಏರಿಯಲ್ ಆಕ್ಟ್, ಸುಧಾರಿತ 3ಡಿ ವಿಶ್ಯುಯಲ್ಸ್ ತಂತ್ರಜ್ಞಾನ ಬಳಸಲಾಗಿದೆ.

ಮೈಸೂರು ಅನಂತಸ್ವಾಮಿ ಸಂಯೋಜಿಸಿದ ಸಂಗೀತಕ್ಕೆ ಪ್ರವೀಣ್ ಡಿ.ರಾವ್ ಮರುಜೀವ ನೀಡಿದ್ದಾರೆ. ಎಸ್. ಪಿ. ಬಾಲಸುಬ್ರಹ್ಮಣ್ಯಂ ಅವರ ಧ್ವನಿಯೂ ಈ ರೂಪಕಕ್ಕೆ ಇದೆ ಎಂದು ಪ್ರಕಟಣೆ ತಿಳಿಸಿದೆ.

ಇ-ಖಾತಾ ಬಗ್ಗೆ ತಪ್ಪು ಮಾಹಿತಿ: ಮುನೀಶ್ ಮೌದ್ಗಿಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಂದೆ ಇದ್ದ ಕೈಬರಹದ ವ್ಯವಸ್ಥೆಯಿಂದ ಲಾಭ ಪಡೆಯುತ್ತಿದ್ದ ಕೆಲವು ಹಿತಾಸಕ್ತ ಗುಂಪುಗಳು, ಕಾನೂನು–ಆಡಳಿತಾತ್ಮಕ ಚೌಕಟ್ಟಿನ ಬಗ್ಗೆ ಅರಿವಿಲ್ಲದೆ ಇ-ಖಾತಾ ಮತ್ತು ಅದರ ನೋಂದಣಿ ವ್ಯವಸ್ಥೆಯೊಂದಿಗಿನ ಸಂಯೋಜನೆ ಕುರಿತು ತಪ್ಪು ಮಾಹಿತಿ ಹರಡುತ್ತಿದ್ದಾರೆ’ ಎಂದು ಜಿಬಿಎ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಹೇಳಿದ್ದಾರೆ.

‘ಇ-ಖಾತೆ ಸಂಯೋಜನೆಗೂ ಮುನ್ನ, ಬೆಂಗಳೂರಿನ ಆಸ್ತಿಗಳ ನಿರ್ವಹಣೆ ಅವ್ಯವಸ್ಥೆಯಿಂದ ಕೂಡಿತ್ತು. ಕಾವೇರಿ ವ್ಯವಸ್ಥೆಗೆ ಸೇರುತ್ತಿದ್ದ ವಹಿವಾಟುಗಳಲ್ಲಿ ಸುಮಾರು ಶೇ 85ರಷ್ಟು ಅನಧಿಕೃತ ಬಡಾವಣೆಗಳು, ಅಕ್ರಮ ಕಂದಾಯ ನಿವೇಶನಗಳು, ಅನುಮೋದಿಸದ ಉಪ ವಿಭಾಗಗಳು ಅಥವಾ ದೋಷಪೂರಿತ ಮಾಲೀಕತ್ವ ದಾಖಲೆಗಳಿಗೆ ಸಂಬಂಧಿಸಿದ್ದಾಗಿದ್ದವು. 2024-25ನೇ ಸಾಲಿನಲ್ಲೇ ಇ-ಖಾತಾ ಸಂಯೋಜನೆಗೂ ಮುನ್ನ ಇಂತಹ 75,000ಕ್ಕೂ ಹೆಚ್ಚು ವಹಿವಾಟು ನಡೆದಿದ್ದವು. ಇದೀಗ ಇಂತಹ ವಹಿವಾಟುಗಳು ಬಹುತೇಕ ಶೂನ್ಯಕ್ಕೆ ಇಳಿದವು’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಯೋಜನಾ ಅನುಮೋದನೆ ಅಥವಾ ನಗರ ಪಾಲಿಕೆಯ ಮಾನ್ಯತೆಗಳಿಲ್ಲದ ಆಸ್ತಿಗಳನ್ನು ಖರೀದಿಸುವಂತೆ ನಾಗರಿಕರ ದಾರಿ ತಪ್ಪಿಸಲಾಗುತ್ತಿತ್ತು. ಇ-ಖಾತಾ ಸಂಯೋಜನೆಯನ್ನು ಪ್ರಶ್ನಿಸಿ ಅನೇಕ ರಿಟ್ ಅರ್ಜಿಗಳು ಹೈಕೋರ್ಟ್ ಮುಂದೆ ಬಂದಿವೆ. ಇ-ಖಾತಾ ವ್ಯವಸ್ಥೆಯನ್ನು ನ್ಯಾಯಾಲಯವು ಎತ್ತಿಹಿಡಿದಿದೆ’ ಎಂದಿದ್ದಾರೆ.

‘ಡಿಜಿಟಲೀಕರಣ ಮತ್ತು ಸಂಯೋಜನೆಯು ದಶಕಗಳಿಂದ ಮಧ್ಯವರ್ತಿಗಳು, ಅಕ್ರಮ ಬಡಾವಣೆ ನಿರ್ವಾಹಕರು, ದಾಖಲೆಗಳ ದುರ್ಬಳಕೆದಾರರು ಮತ್ತು ಊಹಾತ್ಮಕ ರಿಯಲ್ ಎಸ್ಟೇಟ್ ವ್ಯವಹಾರಗಳಿಗೆ ಅನುಕೂಲವಾಗಿದ್ದ ಅಪಾರದರ್ಶಕ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಿರುವುದರಿಂದ ಕೆಲವು ವರ್ಗಗಳಿಗೆ ಅಸಮಾಧಾನ ಉಂಟಾಗಿದೆ’ ಎಂದು ಅವರು ಹೇಳಿದ್ದಾರೆ.

AXISCADES

AXISCADES Technologies Limited

CIN : L72200KA1990PLC084435

Regd. Office : Block C, Second Floor, Kirloskar Business Park, Bengaluru - 560024, Karnataka, India
Website: www.axiscades.com | Email: info@axiscades.com | Tel : +91 80 4193 9000 | Fax : +91 80 4193 9099

Statement of Audited Consolidated Financial Results for the Quarter and Year Ended March 31, 2026

(₹ in Lacs)

Particulars	Quarter Ended			Year Ended	
	31 Mar. 2026	31 Dec. 2025	31 Mar. 2025	31 Mar. 2026	31 Mar. 2025
	Audited	(Unaudited)	Audited	Audited	Audited
Total income	27,730.32	34,512.65	27,186.22	1,18,173.35	1,05,157.27
EBITDA*	3,360.91	6,275.08	3,745.38	17,750.70	14,244.49
Finance Costs	1,006.75	703.58	836.54	3,097.39	3,229.70
Depriciation and amortisation expense	1,381.48	1,099.30	955.98	4,437.80	3,959.88
Net Profit for the period (before tax, Exceptional and/or Extraordinary items)	1,402.07	4,667.00	2,341.82	12,493.62	9,139.81
Share in Net Loss of Associate	(16.93)	(0.49)	(0.77)	(17.95)	(2.37)
Exceptional Items, Net	(334.70)	(782.14)	(199.28)	(1,116.84)	(385.87)
Net Profit / (Loss) for the period before tax (after Exceptional and /or Extraordinary items)	1,050.44	3,884.37	2,141.77	11,358.83	8,751.57
Net Profit / (Loss) for the period after tax (after Exceptional and /or Extraordinary items)	41.36	2,766.35	3,149.61	7,206.50	7,528.40
Total Comprehensive Income for the period [Comprising Profit/(Loss) for the period (after tax) and Other Comprehensive Income (after tax)]	290.89	2,880.90	2,878.38	7,266.73	7,202.80
Equity Share Capital	2,127.40	2,127.40	2,126.41	2,127.40	2,126.41
Reserves (Excluding Revaluation Reserve as shown in the Audited Balance Sheet of the previous year)	-	-	-	70,627.04	62,779.30
Earnings Per Share (of Rs. 5/- each) (For continuing and discontinued operations) -					
1. Basic:	0.10	6.52	7.24	16.92	17.76
2. Diluted:	0.10	6.49	7.16	16.83	17.22

1. In terms of Regulation 33 of the SEBI (Listing Obligations and Disclosure Requirements) Regulations 2015, the aforesaid Statement of audited consolidated financial results for the quarter and year ended March 31, 2026 of the AXISCADES Technologies Limited (the “Holding Company” or the “Company”) and its subsidiaries (the Holding Company and its subsidiaries together hereinafter referred to as “the Group”) and its associate has been reviewed by the Audit Committee and approved by the Board of Directors at their meeting held on May 27, 2026. The aforesaid audited consolidated financial results for the quarter and year ended March 31, 2026 have been audited by the statutory auditors of the Company.
2. The audited consolidated financial results have been prepared in accordance with the recognition and measurement principles laid down in the applicable Indian Accounting Standards (“Ind AS”) as prescribed under Section 133 of the Companies Act, 2013, as amended, read with relevant rules issued thereunder and in terms of Regulation 33 of the SEBI (Listing Obligations and Disclosure Requirements) Regulations, 2015, as amended from time to time.
3. The previous period / year figures have been regrouped / rearranged wherever necessary to conform with the current period presentation.
4. Additional information on Standalone Financial Results is as follows:

(₹ in Lacs)

Particulars	Quarter Ended			Year Ended	
	31 Mar. 2026	31 Dec. 2025	31 Mar. 2025	31 Mar. 2026	31 Mar. 2025
	Audited	(Unaudited)	Audited	Audited	Audited
Total Revenue (including other income)	12,574.16	12,467.94	10,184.05	46,743.16	41,210.99
EBITDA*	1,232.62	1,957.27	1,250.34	5,442.59	6,697.53
Profit / (Loss) before tax	270.06	535.11	286.67	1,735.84	3,117.52
Profit / (Loss) after tax	109.89	317.26	1,902.23	1,117.55	4,059.41
Total Comprehensive Income / (Loss)	(26.14)	284.12	1,785.56	338.17	3,813.24

* Excluding other income.

5. The above audited consolidated financial results of the Group are available on the Company's website (www.axiscades.com) and also on the website of BSE (www.bseindia.com) and NSE (www.nseindia.com), where the shares of the Company are listed. It can also be accessed by scanning the Quick Response (QR) code provided below.

For **AXISCADES Technologies Limited**
Sd/-
Dr. Sampath Ravinarayanan
Founder Chairman and Managing Director

Place : Bengaluru
Dated : May 27, 2026

U.B.D.T. COLLEGE OF ENGINEERING DAVANGERE

ವಿಶ್ವವಿದ್ಯಾಲಯ ಬಿಡಿಟಿ ಕಾಲೇಜ್ ಆಫ್ ಇಂಜಿನಿಯರಿಂಗ್

ದಾವಣಗೆರೆ – 577 004, ಕರ್ನಾಟಕ

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿಯ ಘಟಕ ಕಾಲೇಜು

75ನೇ ವರ್ಷದ ಅಮೃತ ಮಹೋತ್ಸವ
1951-2026

ದಿನಾಂಕ: 29ನೇ ಮತ್ತು 30ನೇ, ಮೇ 2026

ಉದ್ಘಾಟನಾ ಸಮಾರಂಭ

ಮುಖ್ಯ ಅತಿಥಿಗಳು

ಶ್ರೀ ಸಿ.ಪಿ. ರಾಧಾ ಕೃಷ್ಣನ್
ಭಾರತದ ಗೌರವಾನ್ವಿತ ಉಪರಾಷ್ಟ್ರಪತಿ

ಶ್ರೀ ಥಾವರಚಂದ್ ಗೆಹ್ಲೋಟ್
ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರು, ವಿಶ್ವವಿದ್ಯಾಲಯದ ಕುಲಾಧಿಪತಿಗಳು

ಅತಿಥಿಗಳು

ಡಾ. ಎಸ್. ವಿದ್ಯಾಶಂಕರ್
ಗೌರವಾನ್ವಿತ ಕುಲಪತಿಗಳು, ವಿಟಿಯು, ಬೆಳಗಾವಿ

ಡಾ. ಪ್ರಸಾದ್ ಬಿ. ರಾಂಪುರೆ
ಕುಲಸಚಿವರು, ವಿಟಿಯು, ಬೆಳಗಾವಿ

ಪ್ರೊ. ಉಜ್ವಲ್ ಯು.ಜೆ.
ಕುಲಸಚಿವರು (ಮೌಲ್ಯಮಾಪನ), ವಿಟಿಯು, ಬೆಳಗಾವಿ

ಡಾ. ಪ್ರಶಾಂತ ನಾಯಕ. ಜಿ
ಹಣಕಾಸು ಅಧಿಕಾರಿಗಳು, ವಿಟಿಯು, ಬೆಳಗಾವಿ

ಡಾ. ಡಿ.ಪಿ. ನಾಗರಾಜಪ್ಪ
ಯುಬಿಡಿಟಿಸಿಇ, ದಾವಣಗೆರೆ

ದಿನಾಂಕ: ಶುಕ್ರವಾರ, 29ನೇ ಮೇ 2026 | ಸಮಯ: ಬೆಳಿಗ್ಗೆ 11:00 ರಿಂದ

ಸ್ಥಳ: ವಿಶ್ವವಿದ್ಯಾಲಯ ಬಿಡಿಟಿ ಕಾಲೇಜ್ ಆಫ್ ಇಂಜಿನಿಯರಿಂಗ್, ದಾವಣಗೆರೆ

ಟೈರ್ ಸ್ಫೋಟ; ನಿಂತ ಲಾರಿಗೆ ಕಾರು ಡಿಕ್ಕಿ: ಐವರು ಸಾವು

ಪ್ರಜಾವಾಣಿ ವಾರ್ತೆ

ಮೊಳಕಾಲ್ಮುರು (ಚಿತ್ರದುರ್ಗ ಜಿಲ್ಲೆ): ತಾಲ್ಲೂಕಿನ ತುಮಕೂರ್ಲಹಳ್ಳಿ ಗೇಟ್ ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ಗುರುವಾರ ರಾತ್ರಿ ಲಾರಿಗೆ ಕಾರು ಡಿಕ್ಕಿ ಹೊಡೆದದ್ದರಿಂದ ಕಾರಿನಲ್ಲಿದ್ದ ಐವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮೃತಪಟ್ಟವರೆಲ್ಲಾ ಚಳ್ಳಕೆರೆಯವರಾಗಿದ್ದು, ಛಾಯಾಗ್ರಾಹಕ ರಾಘವೇಂದ್ರ, ರುದ್ರೇಶ್, ಪ್ರಮೋದ್, ಸೋಮು ಮತ್ತು ಮಲ್ಲಿಕಾರ್ಜುನ್ ಎಂದು ಗುರುತಿಸಲಾಗಿದೆ.

ಕಾರಿನ ಟೈರ್ ಸ್ಫೋಟಗೊಂಡು ರಸ್ತೆ ಬದಿ ನಿಂತಿದ್ದ ಲಾರಿಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಕಾರು ಛಿದ್ರವಾಗಿದೆ.

ಘಟನೆಯ ಸುದ್ದಿ ತಿಳಿದು ಸಬ್ ಇನ್‌ಸ್ಪೆಕ್ಟರ್ ಮಹೇಶ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಮೃತದೇಹಗಳನ್ನು ಆಸ್ಪತ್ರೆಗೆ ರವಾನಿಸಿದರು. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬುಧವಾರ ಇದೇ ರಸ್ತೆಯಲ್ಲಿ ಬೈರಾಪುರ ಬಳಿ ಇದೇ ರೀತಿ ನಿಂತಿದ್ದ ಲಾರಿಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಕಾರಿನಲ್ಲಿದ್ದ ಐವರೂ ಮೃತಪಟ್ಟಿದ್ದರು.

ಪಶುವೈದ್ಯಕೀಯ ವಿ.ವಿ ಜಮೀನು ಅನ್ಯಕಾರ್ಯಕ್ಕೆ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳದ ಪಶುವೈದ್ಯಕೀಯ ವಿಶ್ವವಿದ್ಯಾಲಯದ ಕ್ಯಾಂಪಸ್ ಜಮೀನನ್ನು ನ್ಯಾಯಮೂರ್ತಿಗಳ ವಸತಿ ಗೃಹಗಳಿಗಾಗಿ ಹಾಗೂ ಆಸ್ಪತ್ರೆಗಾಗಿ ಬಳಸುವುದನ್ನು ವಿರೋಧಿಸಿ ಪಶುವೈದ್ಯಕೀಯ ವಿದ್ಯಾರ್ಥಿಗಳು ಶಾಂತಿಯುತ ಪ್ರತಿಭಟನೆ ನಡೆಸಿದರು.

ರಾಜ್ಯ ಸರ್ಕಾರದ ಆದೇಶದಂತೆ ವಿಶ್ವವಿದ್ಯಾಲಯದ ಆವರಣದಲ್ಲಿ 4 ಎಕರೆಯನ್ನು ಹೈಕೋರ್ಟ್ ನ್ಯಾಯಮೂರ್ತಿಗಳ ವಸತಿ ಗೃಹಗಳಿಗಾಗಿ ಹಾಗೂ 3 ಎಕರೆಯನ್ನು ಆಸ್ಪತ್ರೆಗಾಗಿ ಸ್ವಾಧೀನಪಡಿಸಿಕೊಳ್ಳಲು ಅಧಿಸೂಚನೆ ಹೊರಡಿಸಲಾಗಿದೆ. ಮೈಸೂರಿನ ಮಹಾರಾಜರು ಕೃಷಿ ಮತ್ತು ಪಶುಸಂಗೋಪನಾ ಚಟುವಟಿಕೆಗಾಗಿ ಮಾತ್ರ ದಾನ ನೀಡಿದ್ದರು. ಇದನ್ನು ಬೇರೆ ಉದ್ದೇಶಗಳಿಗೆ ಬಳಸುವುದು ದಾನಿಗಳ ಷರತ್ತುಗಳ ಉಲ್ಲಂಘನೆಯಾಗುತ್ತದೆ ಎಂದು ಪ್ರತಿಭಟನಕಾರರು ತಿಳಿಸಿದರು.

ಭಾರತೀಯ ಪಶುವೈದ್ಯಕೀಯ ಮಂಡಳಿಯ ಕನಿಷ್ಠ ಮಾನದಂಡಗಳ ಪ್ರಕಾರ, ಪ್ರಸ್ತುತ ಲಭ್ಯವಿರುವ ಜಮೀನು ರೈತರಿಗೆ ತರಬೇತಿ ನೀಡಲು, ಪ್ರಾತ್ಯಕ್ಷಿಕೆ ನಡೆಸಲು, ಬಿ.ಟೆಕ್, ಬಿ.ವಿ.ಎಸ್‌ಸಿ ಪದವಿ ಕೋರ್ಸ್ ವಿದ್ಯಾರ್ಥಿಗಳಿಗೆ ಸಾಕಾಗುತ್ತದೆ. ಎಂ.ವಿ.ಎಸ್‌ಸಿ, ಎಂ.ಟೆಕ್, ಪಿಎಚ್.ಡಿ ವಿದ್ಯಾರ್ಥಿಗಳಿಗೆ ಜಾಗದ ಕೊರತೆ ಇದೆ ಎಂದು ಹೇಳಿದರು.

ಸೂಪರ್ ಸ್ಪೆಷಾಲಿಟಿ ಪಶುವೈದ್ಯಕೀಯ ಆಸ್ಪತ್ರೆ ಮತ್ತು ಪೆಟ್ ಪಾರ್ಕ್ ನಿರ್ಮಿಸಲು ಯೋಜಿಸಿರುವುದಕ್ಕೂ ಜಮೀನು ಇಲ್ಲದಾಗಲಿದೆ. ಕ್ಯಾಂಪಸ್‌ನಲ್ಲಿ ಡೈರಿ ಸೈನ್ಸ್ ಕಾಲೇಜು, ಇನ್‌ಸ್ಟಿಟ್ಯೂಟ್ ಆಫ್ ಅನಿಮಲ್ ಹೆಲ್ತ್ ಅಂಡ್ ವೆಟರ್ನರಿ ಬಯೋಲಾಜಿಕಲ್ಸ್, ಮೀನುಗಾರಿಕಾ ಸಂಶೋಧನಾ ಕೇಂದ್ರ ಮತ್ತು ಪ್ರಾದೇಶಿಕ ರೋಗ ನಿರ್ಣಯ ಪ್ರಯೋಗಾಲಯಗಳಿವೆ. ಸಂಶೋಧನೆಗಳಿಗೆ ಇನ್ನೂ 100 ಎಕರೆಗಿಂತ ಹೆಚ್ಚು ಜಮೀನು ಅಗತ್ಯವಿದೆ. ಇಂಥ ಸಮಯದಲ್ಲಿ ಇರುವ ಜಮೀನನ್ನು ಬೇರೆ ಉದ್ದೇಶಕ್ಕೆ ಬಳಸುವುದು ಸರಿಯಲ್ಲ. ಸರ್ಕಾರ ಅಧಿಸೂಚನೆಯನ್ನು ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದರು.

ಸಂಜಯ್, ಕಾರ್ತಿಕ್, ಸುಹಾಸ್, ಬಸನಗೌಡ ಸೇರಿದಂತೆ ಹಲವು ವಿದ್ಯಾರ್ಥಿಗಳು ಮಾತನಾಡಿದರು.

ಹೆಬ್ಬಾಳದ ಪಶುವೈದ್ಯಕೀಯ ವಿಶ್ವವಿದ್ಯಾಲಯದ ಕ್ಯಾಂಪಸ್ ಜಮೀನಿನನ್ನು ಬೇರೆ ಉದ್ದೇಶಕ್ಕೆ ಬಳಸುವುದನ್ನು ವಿರೋಧಿಸಿ ಪಶುವೈದ್ಯಕೀಯ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು

ರಸ್ತೆ ಗುಡಿಸಲು 'ಗಾಬ್ಲರ್' ಯಂತ್ರ

ಮೂರು ಗಂಟೆ ಚಾರ್ಜ್ ಮಾಡಿದರೆ, 8 ಗಂಟೆ ನಿರಂತರವಾಗಿ ಕಾರ್ಯನಿರ್ವಹಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪ್ರಮುಖ ರಸ್ತೆಗಳಲ್ಲಿ 'ಗಾಬ್ಲರ್' (ಸ್ಮಾರ್ಟ್ ಕಸ ಸಂಗ್ರಹಿಸುವ ಯಂತ್ರ) ಯಂತ್ರವನ್ನು ಪ್ರಾಯೋಗಿಕವಾಗಿ ಬಳಸಿ ವರದಿ ನೀಡಲು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಬೆಂಗಳೂರು ಕೇಂದ್ರ ನಗರ ಪಾಲಿಕೆಯ ಶಿವಾಜಿನಗರ ವಿಭಾಗದ ಕಮರ್ಷಿಯಲ್ ಸ್ಟ್ರೀಟ್ ರಸ್ತೆಯಲ್ಲಿ ಗಾಬ್ಲರ್ ಯಂತ್ರವನ್ನು ಪರಿಶೀಲಿಸಿ, ಚಲಾಯಿಸಿದರು.

ನಂತರ ಮಾತನಾಡಿದ ಅವರು, 'ಸ್ಮಾರ್ಟ್ ತಂತ್ರಜ್ಞಾನವನ್ನು ಬಳಸಿಕೊಂಡು ಪರಿಣಾಮಕಾರಿಯಾಗಿ ನಗರದ ರಸ್ತೆಗಳನ್ನು ಸ್ವಚ್ಛವಾಗಿಡಬೇಕು. ಈ ನಿಟ್ಟಿನಲ್ಲಿ ಗಾಬ್ಲರ್ ಯಂತ್ರವನ್ನು ಪ್ರಾಯೋಗಿಕವಾಗಿ ಬಳಸಿ, ಅದರ ಕಾರ್ಯನಿರ್ವಹಣೆಯ ಆಧಾರದ ಮೇಲೆ ಎಲ್ಲಾ ನಗರ ಪಾಲಿಕೆಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಬೇಕು' ಎಂದು ನಿರ್ದೇಶನ ನೀಡಿದರು.

'ಗಾಬ್ಲರ್ ಯಂತ್ರ' ಸ್ಮಾರ್ಟ್ ಯಂತ್ರವಾಗಿದ್ದು, ಸರಿಯಾದ ತರಬೇತಿ ಪಡೆದ ಚಾಲಕನು ಅದರ ಮೇಲೆ ನಿಂತುಕೊಂಡೇ ಚಾಲನೆ ಮಾಡಬಹುದು. ಅಲ್ಲದೆ, ಚಾಲಕನು ನಡೆದುಕೊಂಡು ಹೋಗುತ್ತಾ ಯಂತ್ರವನ್ನು ನಿಯಂತ್ರಿಸಬಹುದಾದ ವ್ಯವಸ್ಥೆಯೂ ಇದರಲ್ಲಿದೆ. ಒಬ್ಬ ವ್ಯಕ್ತಿ ಇದನ್ನು ಸುಲಭವಾಗಿ ನಿರ್ವಹಿಸಬಹುದಾಗಿದೆ. ಈ ಯಂತ್ರವು ವಿದ್ಯುತ್ ಬ್ಯಾಟರಿ ಮೂಲಕ ಕಾರ್ಯನಿರ್ವಹಿಸುತ್ತದೆ. ಮೂರು ಗಂಟೆ ಚಾರ್ಜ್ ಮಾಡಿದರೆ, 8 ಗಂಟೆ ನಿರಂತರವಾಗಿ ಕಾರ್ಯನಿರ್ವಹಿಸಲಿದೆ. ಯಂತ್ರಕ್ಕೆ ಜಿಪಿಎಸ್ ವ್ಯವಸ್ಥೆ ಅಳವಡಿಸಲಾಗಿದ್ದು, ಮೇಲ್ವಿಚಾರಣೆ ಮಾಡಲು ಅನುಕೂಲವಾಗಲಿದೆ. ಇದು ಕಿರಿದಾದ ಜಾಗಗಳಲ್ಲಿಯೂ ಸುಲಭವಾಗಿ ಬಳಸಬಹುದಾಗಿದೆ.

ಗಾಬ್ಲರ್ ಯಂತ್ರದಲ್ಲಿ 240 ಲೀಟರ್ ತ್ಯಾಜ್ಯ ಸಂಗ್ರಹಿಸುವ ಕಂಟೈನರ್, ದೂಳಿನ ಫಿಲ್ಟರ್, ಕಂಟ್ರೋಲ್ ಬಟನ್‌ಗಳು, ಕಸ ಹೆಕ್ಕಲು ಜಾಯ್‌ಸ್ಟಿಕ್, ಫ್ಲಾಷಿಂಗ್ ಎಚ್ಚರಿಕೆ ದೀಪ, ರಾತ್ರಿ ವೇಳೆ ಕಾರ್ಯನಿರ್ವಹಿಸಲು ಎಲ್.ಇ.ಡಿ ದೀಪ, ಹಿಂಬದಿ ಚಲನೆಯ ಎಚ್ಚರಿಕೆಯ ಅಲಾರ್ಮ್ ಹಾಗೂ ಅಗ್ನಿಶಾಮಕ ಸಾಧನಗಳಿವೆ. ಕಸ ಸಂಗ್ರಹವಾದ ಬಳಿಕ ಬಯೋ-ಡಿಗ್ರೇಡಬಲ್ ಬ್ಯಾಗ್‌ಗಳ ಮೂಲಕ ಕಸವನ್ನು ಸಂಗ್ರಹಿಸಿ ವಿಲೇವಾರಿ ಮಾಡಬಹುದಾಗಿದೆ.

ಯಂತ್ರವು ರಸ್ತೆ ಬದಿಯಲ್ಲಿ ಸಂಗ್ರಹವಾಗಿರುವ ದೂಳು, ಮರದ ತುಂಡುಗಳು, ಪ್ಲಾಸ್ಟಿಕ್, ಅಲ್ಯೂಮಿನಿಯಂ, ಕಾಗದ, ಗಾಜು, ಒಣ ಎಲೆಗಳು, ಪ್ಲಾಸ್ಟಿಕ್ ಚೀಲಗಳು, ರ್‍ಯಾಪರ್‌ಗಳು ಹಾಗೂ ಪ್ಲಾಸ್ಟಿಕ್ ಮತ್ತು ಲೋಹದ ಬಾಟಲಿಗಳು ಸೇರಿದಂತೆ ಇತರೆ ತ್ಯಾಜ್ಯವನ್ನು ಸುಲಭವಾಗಿ ಹೀರಿಕೊಂಡು ರಸ್ತೆಗಳನ್ನು ಸ್ವಚ್ಛಗೊಳಿಸಲಿದೆ. ಅಲ್ಲದೆ, 12 ಲೀಟರ್ ನೀರನ್ನು ಸಂಗ್ರಹಿಸುವ ಸಾಮರ್ಥ್ಯವಿದ್ದು, ಪ್ರೆಶರ್ ಪೈಪ್ ಮೂಲಕ ಸ್ವಚ್ಛಗೊಳಿಸುವ ವ್ಯವಸ್ಥೆಯೂ ಇದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಮಾತನಾಡಿ, 'ಕೆ.ಆರ್. ಮಾರುಕಟ್ಟೆ, ರಸಲ್ ಮಾರುಕಟ್ಟೆ, ಕಮರ್ಷಿಯಲ್ ಸ್ಟ್ರೀಟ್, ಎಂ.ಜಿ ರಸ್ತೆ, ಚರ್ಚ್ ಸ್ಟ್ರೀಟ್ ಸೇರಿದಂತೆ ಇತರೆ ಸಿಬಿಡಿ ರಸ್ತೆಗಳಲ್ಲಿ ಪ್ರಾಯೋಗಿಕವಾಗಿ ಬಳಸಿ, ಯಾವ ರೀತಿಯಲ್ಲಿ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ಪರಿಶೀಲಿಸಬೇಕು. ಗಾಬ್ಲರ್ ಯಂತ್ರದ ಕಾರ್ಯಕ್ಷಮತೆ ಪರಿಶೀಲಿಸಿ ಯಾವುದೇ ಸಮಸ್ಯೆ ಇಲ್ಲದಿದ್ದಲ್ಲಿ ಅಳವಡಿಸಿಕೊಳ್ಳಬೇಕು' ಎಂದರು.

ಕಮರ್ಷಿಯಲ್ ಸ್ಟ್ರೀಟ್ ರಸ್ತೆಯಲ್ಲಿ ಗಾಬ್ಲರ್ ಯಂತ್ರದ ಕಾರ್ಯನಿರ್ವಹಣೆಯನ್ನು ಮಹೇಶ್ವರ್ ರಾವ್ ಪರಿಶೀಲಿಸಿದರು

'ನ್ಯೂಸ್‌ಫಸ್ಟ್ ಪ್ರಾಪರ್ಟಿ ಹಬ್ಬ' ನಾಳೆಯಿಂದ

ಬೆಂಗಳೂರು: ಮನೆ ಖರೀದಿದಾರರು, ಹೂಡಿಕೆದಾರರು ಹಾಗೂ ರಿಯಲ್ ಎಸ್ಟೇಟ್ ಕ್ಷೇತ್ರದ ಪ್ರಮುಖ ಸಂಸ್ಥೆಗಳನ್ನು 'ನ್ಯೂಸ್ ಫಸ್ಟ್ ಪ್ರಾಪರ್ಟಿ ಹಬ್ಬ' ಮೇ 30 ಮತ್ತು 31ರಂದು ಒಂದೇ ವೇದಿಕೆಗೆ ತರಲಿದೆ. ಮನೆ ಅಥವಾ ಜಾಗ ಖರೀದಿಸಲು ಜನರು ನಗರದ ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ ಸುತ್ತಾಡಬೇಕು ಮತ್ತು ಪ್ರತ್ಯೇಕ ಡೆವಲಪರ್ ಕಚೇರಿಗಳಿಗೆ ಭೇಟಿ ನೀಡಬೇಕು. ಬಜೆಟ್, ಲೊಕೇಶನ್ ಹಾಗೂ ಸೌಲಭ್ಯಗಳ ಹೋಲಿಕೆ ಮಾಡಲು ದಿನ ಮೀಸಲಿಡಬೇಕು. ಆದರೆ ಈ 'ಪ್ರಾಪರ್ಟಿ ಹಬ್ಬ'ದಲ್ಲಿ ಈ ಎಲ್ಲವೂ ಒಂದೇ ಕಡೆ ಲಭ್ಯವಾಗಲಿವೆ. ಅರಮನೆ ಮೈದಾನದಲ್ಲಿರುವ ರಾಯಲ್ ಸೆನೆಟ್‌ನಲ್ಲಿ ಈ ಹಬ್ಬ ನಡೆಯಲಿದೆ.

ನಿವೇಶನ, ಅಪಾರ್ಟ್‌ಮೆಂಟ್, ವಿಲ್ಲಾ, ಲಕ್ಷುರಿ ಹೋಮ್, ಫಾರ್ಮ್ ಲ್ಯಾಂಡ್ ಹಾಗೂ ಗೇಟೆಡ್ ಕಮ್ಯುನಿಟಿಗಳು ಇಲ್ಲಿ ಲಭ್ಯವಿವೆ. ಮಧ್ಯಮ ವರ್ಗದ ಕುಟುಂಬಗಳಿಂದ ಹಿಡಿದು ಪ್ರೀಮಿಯಂ ಹೂಡಿಕೆದಾರರ ತನಕ ಎಲ್ಲರ ಬಜೆಟ್‌ಗೆ ಹೊಂದುವ ಆಯ್ಕೆಗಳು ಇಲ್ಲಿರಲಿವೆ. ಒಂದು ಮನೆ ಕಟ್ಟಲು ಅಥವಾ ಖರೀದಿಸಲು ಬೇಕಾಗುವ ಬಹುತೇಕ ಎಲ್ಲಾ ಸೇವೆಗಳು ಸಿಗಲಿವೆ.

ಪ್ರಮುಖ ನಿರ್ಮಾಣ ಕಂಪನಿಗಳು, ಒಳಾಂಗಣ ವಿನ್ಯಾಸ ಸಂಸ್ಥೆಗಳು, ಹೋಮ್ ಆಟೋಮೇಶನ್, ಬ್ಯಾಂಕ್ ಹಾಗೂ ಗೃಹ ಸಾಲ ಸಲಹೆಗಾರರು, ವಾಸ್ತು ಹಾಗೂ ವಿನ್ಯಾಸ ತಜ್ಞರು ಸಹ ಲಭ್ಯವಿರುತ್ತಾರೆ. ಮಕ್ಕಳಿಂದ ಹಿರಿಯರ ತನಕ ಎಲ್ಲರಿಗೂ ಅನುಕೂಲವಾಗುವ ವ್ಯವಸ್ಥೆಗಳಿರಲಿವೆ. ವಿಶೇಷವಾಗಿ ಎಕ್ಸ್‌ಪೋದಲ್ಲಿ ಆಹಾರ ಮೇಳ ಹಾಗೂ 'ಕಿಡ್ಸ್ ಪ್ಲೇ ಜೋನ್' ಕೂಡ ಇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ಚನ್ನಮ್ಮನಕೆರೆ ಅಚ್ಚುಕಟ್ಟು ಪ್ರದೇಶದಲ್ಲಿ ಗುರುವಾರ ಸಂಜೆ ಸುರಿದ ಗಾಳಿಮಳೆಗೆ ಮರ ಬಿದ್ದು ವಾಹನಗಳು ಜಖಂಗೊಂಡವು

'ಬಕ್ರೀದ್ ದಿನವೇ ಪ್ರಾರ್ಥನೆ ಫಲಿಸಿತು'

ಪ್ರಜಾವಾಣಿ ವಾರ್ತೆ

ರಾಮನಗರ: 'ಕಡೆಗೂ ನಮ್ಮ ನಾಯಕ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗುವ ಕಾಲ ಕೂಡಿ ಬಂತು. ಇದಕ್ಕಾಗಿ ಭಗವಂತನಲ್ಲಿ ನಾನು ಪ್ರಾರ್ಥನೆ ಮಾಡುತ್ತಿದ್ದೆ. ಬಕ್ರೀದ್ ಹಬ್ಬದ ದಿನವೇ ಭಗವಂತ ಬೇಡಿಕೆ ಈಡೇರಿಸಿದ್ದಾನೆ' ಎಂದು ಶಾಸಕ ಎಚ್.ಎ. ಇಕ್ಬಾಲ್ ಹುಸೇನ್ ಸಂತಸ ವ್ಯಕ್ತಪಡಿಸಿದರು.

ಇಕ್ಬಾಲ್ ಹುಸೇನ್

ಬಕ್ರೀದ್ ಪ್ರಯುಕ್ತ ನಗರದ ಈದ್ಗಾ ಮೈದಾನದಲ್ಲಿ ಗುರುವಾರ ವಿಶೇಷ ಪ್ರಾರ್ಥನೆ ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಬೇಕು ಎಂದು ಪಕ್ಷದ ಲಕ್ಷಾಂತರ ಕಾರ್ಯಕರ್ತರು ಹಾಗೂ ಮುಖಂಡರು ಆಸೆಪಟ್ಟಿದ್ದರು. ನಾಯಕತ್ವ ಬದಲಾವಣೆ ಕುರಿತು ನಾನು ಮೌನ ಮುರಿದು ಮಾತನಾಡಿದ್ದೆ. ಉಳಿದವರು ಮೌನವಾಗಿಯೇ ಪ್ರಾರ್ಥಿಸಿದ್ದರು' ಎಂದು ಹೇಳಿದರು.

ಗೃಹ ಸಚಿವ ಜಿ. ಪರಮೇಶ್ವರ ಅವರನ್ನು ಸಿ.ಎಂ ಮಾಡಬೇಕು ಎಂಬ ಒತ್ತಾಯ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿ, 'ಪರಮೇಶ್ವರ ಕೂಡ ನಮ್ಮ ನಾಯಕರೇ. ಅವರು ಕೇಳುವುದರಲ್ಲಿ ತಪ್ಪೇನಿದೆ? ಅವರೂ ಕೆಪಿಸಿಸಿ ಅಧ್ಯಕ್ಷರಾಗಿದ್ದವರು. ಅವಕಾಶ ಕೇಳುವುದು ತಪ್ಪಲ್ಲ. ಅದೇ ರೀತಿ ನಮ್ಮ ಜಿಲ್ಲೆಯವರು ಹಾಗೂ ನಮ್ಮ ನಾಯಕ ಶಿವಕುಮಾರ್ ಅವರಿಗೂ ಅವಕಾಶ ಕೊಡಬೇಕು ಅಂತ ನಾವು ಕೇಳಿದ್ದೆವು. ಅದು ಈಡೇರಿದೆ' ಎಂದರು.

ದಾವಣಗೆರೆಗೆ ಇಂದು ಉಪರಾಷ್ಟ್ರಪತಿ

ಪ್ರಜಾವಾಣಿ ವಾರ್ತೆ

ದಾವಣಗೆರೆ: 1951ರಲ್ಲಿ ಆರಂಭವಾಗಿರುವ ಇಲ್ಲಿನ ಸರ್ಕಾರಿ ಯುಬಿಡಿಟಿ ಎಂಜಿನಿಯರಿಂಗ್ ಕಾಲೇಜಿಗೆ 75 ವಸಂತಗಳು ತುಂಬಿರುವ ಅಂಗವಾಗಿ ಹಮ್ಮಿಕೊಂಡಿರುವ ಅಮೃತ ಮಹೋತ್ಸವ ಸಮಾರಂಭದ ಉದ್ಘಾಟನೆಗೆ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ಮೇ 29ರಂದು ನಗರಕ್ಕೆ ಆಗಮಿಸಲಿದ್ದಾರೆ.

ಸಿ.ಪಿ. ರಾಧಾಕೃಷ್ಣನ್

'ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ(ವಿಟಿಯು) ವ್ಯಾಪ್ತಿಯಲ್ಲಿರುವ ಬಿಡಿಟಿ ಕಾಲೇಜು ರಾಜ್ಯದ ಹಳೆಯ ತಾಂತ್ರಿಕ ಕಾಲೇಜುಗಳಲ್ಲೊಂದು. ಶುಕ್ರವಾರ ಮಧ್ಯಾಹ್ನ 12.20ಕ್ಕೆ ಆಗಮಿಸಲಿರುವ ಉಪರಾಷ್ಟ್ರಪತಿ, ಮಧ್ಯಾಹ್ನ 3.30ಕ್ಕೆ ಶಿವಮೊಗ್ಗಕ್ಕೆ ತೆರಳಲಿದ್ದಾರೆ' ಎಂದು ಕುಲಪತಿ ಎಸ್. ವಿದ್ಯಾಶಂಕರ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಅಮೃತ ಮಹೋತ್ಸವದ ಅಂಗವಾಗಿ ₹10 ಕೋಟಿ ವೆಚ್ಚದಲ್ಲಿ ವಿದ್ಯಾರ್ಥಿ ನಿಲಯ ನಿರ್ಮಿಸಲಾಗುತ್ತಿದೆ. 8 ಎಕರೆ ಪ್ರದೇಶದಲ್ಲಿ ಐಟಿ ಪಾರ್ಕ್ ನಿರ್ಮಿಸುವ ಉದ್ದೇಶವಿದೆ' ಎಂದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

CONNECT ಕ್ಲಾಸಿಫೈಡ್ಸ್

PUBLIC NOTICE

PUBLIC NOTICE

The General Public are hereby notified that, our client **Mr. T. S. MURALI @ THINNIAM SANTHANAM MURALI,** Aged about 58 years, S/o. T. S. Santhanam, Residing at No. B 408, Komarla Brigade Residency, Uttarahalli Main Road, BENGALURU- 560061, is the absolute owner of the schedule mentioned property and that he lost the original registered Sale Deed dated: 26/02/2001, **Document No. 12021/2000-2001** of Book-I, Stored in C.D. No.56, in the office of the Sub-Registrar, Kengeri, Bangalore.

That the above stated Sale Deed dated: 26/02/2001 has been misplaced/lost recently during transit within the city, as such, the same is reported to the Bangalore City Police vide., **Lost Article Report No. 2224369/2026** dated: 27/05/2026, as such, the public at large are hereby advised to be cautious about person/s claiming any right/interest under the guise of the above said original Sale Deed dated: 26/02/2001.

The public are hereby given notice that any person/s or any incorporated body having found the above said original Sale Deed dated: 26/02/2001, to return the same to the undersigned forthwith or if any person/s or any incorporated body claiming any right, title or interest of any nature or having any lien, charge or enforceable right in respect of the schedule property may put forth their claims in writing with the undersigned together with supporting documents within **10 days** from this date, failing which it will be presumed that no valid claim/s or objection/s subsist and the Schedule Property is free from all encumbrances.

SCHEDULE PROPERTY

All that piece and parcel of apartment bearing Flat No. **408** on the **FOURTH FLOOR of BLOCK-B,** measuring **1630 Square Feet** of Super Built-up Area and one covered car parking space in the Basement, together with proportionate share in common areas such as passages, lobbies, lifts, staircases and other areas of common use and benefit in the building known as **"KOMARLA BRIGADE RESIDENCY",** within the jurisdiction of Bengaluru South City Corporation assigned with **ePID No. 7547966760**, including 122.4/24000th **(613.55 Square feet)** undivided right, title, interest and ownership in converted land bearing Sy. No. 51, Chikkallasandra Village, Uttarahalli Hobli, Bangalore South Taluk measuring an 11,176.51 Square Meters (120304 Square feet) forming part of katha No. 151/142 of Pattanagere City Municipal Corporation, Chikkallasandra, Uttarahalli Hobli, Bangalore South Taluk and bounded on the:- **EAST BY:** Staircase and Lobby in "Komarla Brigade Residency"; **WEST BY:** Open space towards Subramanyapura Main Road in Block-A; **NORTH BY:** Open space towards Subramanya pura Main Road in "Komarla Brigade Residency"; **SOUTH BY:** Open space towards Apartment No. 407 in "Komarla Brigade Residency";

Sd/- D. LAKSHMAN, Advocate,
M/s. DLAW ASSOCIATES
U-203, 2nd Floor,
No.87, "Shreshta Bumi",
K.R.Road, Bangalore-04.
Mob: 98457 12345.
Place: Bengaluru,
Date : 29-05-2026
ROUNAQH

PUBLIC NOTICE

This is to inform the general public that my client intends to purchase the immovable property mentioned and described in the schedule below from its owners **(i) Sri. P. Lakshminarayana** and **(ii) Sri. P. Venkatesh,** both sons of Late Puttappa, (hereafter collectively referred to as "Owners"). The Owners represent that the Schedule Property is free from any encumbrance, mortgage, charge, lien or litigation and they have not entered any sort of Agreement/MOU/Deeds etc., for transfer of the Schedule Property. Any person/s having any objection, claim, right, title and/or interest with respect to the Schedule Property or any part or portion thereof by way of sale, conveyance, acquisition, partition, transfer, memorandum of understanding, exchange, mortgage, pledge, charge, encumbrance, inheritance, succession, lease, easement or demand or objections or claims of any nature whatsoever for the proposed transaction shall lodge their claim(s)/objection(s)/demand(s) with the undersigned supported by documentary evidence **within Fifteen (15) days** from the date of publication of this Notice failing which, my client shall proceed with the above-mentioned transaction as though there are no claim(s)/objection(s)/demand(s) to the proposed transaction.

SCHEDULE

All the piece and parcel of the immovable property bearing Survey No. 129/5, measuring 28 guntas, situated at Kadugodi Village, Bidarahalli Hobli, Bengaluru East Taluk, Bengaluru Urban District and bounded on the:

East by : Land bearing Survey No.128;
West by : Naala/Kaluve;
North by : Land bearing Survey No.127; and
South by : Land bearing Survey Nos.129/1 and 129/6.

Vinay K. S., Advocate,
Vinay Kademane & Associates
307, 3rd Floor, Prestige Centre Point, No.7/49,
Edward Road, Bengaluru-560001
Ph.: 080 22863885 / 49763233
email: vinay@vinaykademane.in
Place : Bengaluru
Date : 29-05-2026

JOB OPPORTUNITIES

Teachers/ Professors

WANTED BE / Diploma in Electrical, Electronics, Mechanical, Computer science to take Diploma Classes. Contact personally with resume, original documents. Nadgir Institute, Near Modi Hospital, Rajajinagar, Bangalore - 560010. Ph: 23389444, 8867065525.

URGENTLY HIRING
Teacher's for Hindi, Computer for St.Meera's High School, Halasuru, Bangalore 560 008. Ph. 9880528475.

REAL ESTATE SELLING

Residential/ Commercial

Vishweshwariah Layout

DIRECT OWNER
Rental Income, Residential BDA SMVL 5Th Block 30x40,G+3Floor Building For Sale Contact :9880201125.

Sites

Intl Airport Road

6825 SQFT lush Greenery pollution free site with coconut,teak fruit trees.20 mins from Intl airport. forvilla/weekend retreat owner.9448717222

Kempegowda Layout

RESIDENTIAL BDA
site 30x40 north facing NPKL B4, SF, Arkavathi alternative. Rs.9,000/- psft. 9886711955

BUILDERS ESSENTIAL

Water Proofing

LEAKAGE...
LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

PERSONAL

Change of Name

CHANGE OF NAME
I, **SATHISH, SATHISH V** and **SATHISH VISWANATHAN,** R/at Site No. 20, 1st Floor, 2nd Phase, KC Krishna Reddy Layout, Kithaganur, Maragondanahalli, VTC: Krishnaraja puram, Bengaluru-36, declare that the above all names pertain to me only & henceforth I shall be known as **SATHISH VISWANATHAN,** vide affidavit dated 27-05-2026 before notary Uday Kumar K, Bengaluru.

I, GEETHA RANGANATH, aged about 62 years, W/o Ranganath G.R. residing at "Kantha" No.165, 11th main, RBI Layout, J.P.Nagar 7th Phase, Bengaluru- 560078, have changed my earlier name from GEETHA N.S to GEETHA RANGANATH vide affidavit dated 19.05.2026 sworn to before Notary, Smt. Shashidevi M.P. Bengaluru.

PUBLIC NOTICE
To Place your Classified Ads Contact
9731810277

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ,
(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560001.

ಸ್ಥಿರಾಸ್ತಿಯ ಇ-ಹರಾಜಿಗೆ ಆಹ್ವಾನ / ಸೂಚನೆ

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಕಾಯ್ದೆ, 2004 ರ ಅಡಿಯಲ್ಲಿ ಸರ್ಕಾರವು ಸ್ಥಿರಾಸ್ತಿ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದು, ಮಾನ್ಯ ವಿಶೇಷ ನ್ಯಾಯಾಲಯವು ಕೆಪಿಐಡಿಎಫ್‌ಇ ಕಾಯ್ದೆ ಅಡಿಯಲ್ಲಿ ಸ್ಥಿರೀಕರಿಸಿದ ಆದೇಶದ ಅನುಸಾರವಾಗಿ, ವಿಶೇಷ ಅಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರದ ವತಿಯಿಂದ ಸ್ಥಿರಾಸ್ತಿ ಸ್ವತ್ತುಗಳನ್ನು ಇ-ಹರಾಜಿನ ಮೂಲಕ ವಿಲೇವಾರಿ ಮಾಡಲು ಪ್ರಕಟಣೆಯನ್ನು ಹೊರಡಿಸಲಾಗಿದೆ. (ಎಲ್ಲಿದೇಯೋ, ಹೇಗಿದೇಯೋ, ಯಾವ ಸ್ಥಿತಿಯಲ್ಲಿದೇಯೋ ಅದೇ ಆಧಾರದ ಮೇಲೆ) (as is where is and whatever there is basis')

ಆಸಕ್ತ ಬಿಡ್‌ದಾರರು ಅರ್ನೆಸ್ಟ್ ಮನಿ ಡೆಪಾಸಿಟ್ (EMD) ಅನ್ನು ಒದಗಿಸಬೇಕಾಗುತ್ತದೆ (ಸೇವಾ ಪೂರೈಕೆದಾರರು/ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಒದಗಿಸಿದ ಇ-ಪೋರ್ಟಲ್‌ನಲ್ಲಿ ಮಾತ್ರ)

Short description of the Immovable Property (SPLOCA/AUC(2)/CR/05/2023-24)

Properties are free of all encumbrances and are in the name of Competent Authority appointed by Government and confirmed by the Special Court under KPIDFE Act, 2004.

31 under construction flats on BBMP Municipal No: 41/3, Old No: 41, (PID No:94-43-41/3), New ward no 30 formed out of survey No: 93/3 and 94/2, totally measuring 22798 Sq.ft situated at Nagawara Main Road, Kadugondanahalli, Bangalore Google Map: https://maps.app.goo.gl/PVNw22hEM7Z19oev8 Latitude and Longitude: 13°01'06.7"N 77°37'09.9"E

For more details regarding Minimum bid Price, EMD and other details please visit Karnataka Public Procurement Portal https://kppp.karnataka.gov.in & https://sploca.org/)

ಪೂರ್ವ ಭಾವಿ ಬಿಡ್ ಸಭೆ ದಿನಾಂಕ ಮತ್ತು ಸಮಯ	ಸ್ಥಳ ಪರಿಶೀಲನೆ ದಿನಾಂಕ ಮತ್ತು ಸಮಯ	ಬಿಡ್ ದಾಖಲೆಗಳು ಮತ್ತು ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ	ಇ-ಹರಾಜಿನ ದಿನಾಂಕ ಮತ್ತು ಸಮಯ
10ನೇ ಜೂನ್ 2026 ಮಧ್ಯಾಹ್ನ 3.00 ರಿಂದ 4.00 ಗಂಟೆ ಸ್ಥಳ: O/o SPLOCA, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು-01	16ನೇ ಜೂನ್ 2026 ಬೆಳಗ್ಗೆ 11.00 ರಿಂದ ಸಂಜೆ 5.00 ಗಂಟೆಯವರೆಗೆ	18ನೇ ಜೂನ್ 2026 ಸಂಜೆ 5.00 ಗಂಟೆಯವರೆಗೆ	22ನೇ ಜೂನ್ 2026 ಬೆಳಗ್ಗೆ 11.00 ರಿಂದ ಮಧ್ಯಾಹ್ನ 1.00 ಗಂಟೆಯವರೆಗೆ

ಆಸಕ್ತ ಬಿಡ್‌ದಾರರು ನೋಂದಣಿ ಮತ್ತು ಆನ್‌ಲೈನ್ ಹರಾಜಿಗಾಗಿ https://kppp.karnataka.gov.in ಇಲ್ಲಿಗೆ ಲಾಗಿನ್ ಮಾಡಬಹುದು (ಸಹಾಯವಾಣಿ ಸಂಖ್ಯೆ: 080-46010000, 080-68948777) ಮತ್ತು ಇ-ಹರಾಜಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯ ಬಗ್ಗೆ ಸಹಾಯಕ ಆಯುಕ್ತರು, ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳ ಕಛೇರಿ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ.ಅಂಬೇಡ್ಕರ್ ವೀದಿ, ಬೆಂಗಳೂರು-560001 ಇವರನ್ನು ಸಂಪರ್ಕಿಸಬಹುದು. ಇ-ಮೇಲ್ ಐಡಿ: splocaeauction@gmail.com ಅಥವಾ ಮೊಬೈಲ್ ಸಂಖ್ಯೆ 9945515174 ಅನ್ನು ಸಂಪರ್ಕಿಸಬಹುದು.

ಸ್ಥಳ: ಬೆಂಗಳೂರು
ದಿನಾಂಕ: 27.05.2026 DIPR/CP/853/Zen/2026-27
ಸಹಿ/- ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ (ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು), ಬೆಂಗಳೂರು, ಕರ್ನಾಟಕ

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ,
(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560001.

ಸ್ಥಿರಾಸ್ತಿಯ ಇ-ಹರಾಜಿಗೆ ಆಹ್ವಾನ / ಸೂಚನೆ

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಕಾಯ್ದೆ, 2004 ರ ಅಡಿಯಲ್ಲಿ ಸರ್ಕಾರವು ಸ್ಥಿರಾಸ್ತಿ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದು, ಮಾನ್ಯ ವಿಶೇಷ ನ್ಯಾಯಾಲಯವು ಕೆಪಿಐಡಿಎಫ್‌ಇ ಕಾಯ್ದೆ ಅಡಿಯಲ್ಲಿ ಸ್ಥಿರೀಕರಿಸಿದ ಆದೇಶದ ಅನುಸಾರವಾಗಿ, ವಿಶೇಷ ಅಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರದ ವತಿಯಿಂದ ಸ್ಥಿರಾಸ್ತಿ ಸ್ವತ್ತುಗಳನ್ನು ಇ-ಹರಾಜಿನ ಮೂಲಕ ವಿಲೇವಾರಿ ಮಾಡಲು ಪ್ರಕಟಣೆಯನ್ನು ಹೊರಡಿಸಲಾಗಿದೆ. (ಎಲ್ಲಿದೇಯೋ, ಹೇಗಿದೇಯೋ, ಯಾವ ಸ್ಥಿತಿಯಲ್ಲಿದೇಯೋ ಅದೇ ಆಧಾರದ ಮೇಲೆ) (as is where is and whatever there is basis')

ಆಸಕ್ತ ಬಿಡ್‌ದಾರರು ಅರ್ನೆಸ್ಟ್ ಮನಿ ಡೆಪಾಸಿಟ್ (EMD) ಅನ್ನು ಒದಗಿಸಬೇಕಾಗುತ್ತದೆ (ಸೇವಾ ಪೂರೈಕೆದಾರರು/ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಒದಗಿಸಿದ ಇ-ಪೋರ್ಟಲ್‌ನಲ್ಲಿ ಮಾತ್ರ)

Short description of the Immovable Property (SPLOCA/AUC(2)/CR/08/2023-24)

Properties are free of all encumbrances and are in the name of Competent Authority appointed by Government and confirmed by the Special Court under KPIDFE Act, 2004. Clear Title: Khata stands in the name of Competent Authority and Auctioning Authority

Sl. No.	DETAILS OF THE PROPERTY (Clear Title by Court in order No. MISC No. 1337/2023)	Minimum Bid Price (Rs)	EMD (Rs)	Bid Increase Value (Rs)
1.	Present Sy.No.8, (old Sy.No. 09 and 8/1) PID No. 91-61-08, Good will residence, Cokborn Road, Bengaluru BBMP ward No. 91, measuring 766 sq.ft Google Map: https://maps.app.goo.gl/N5PUnABG15my2eYV8 Latitude and Longitude : 12°59'36.2"N 77°36'20.6"E	47,30,000/-	4,73,000/-	48,000/-

ಪೂರ್ವ ಭಾವಿ ಬಿಡ್ ಸಭೆ ದಿನಾಂಕ ಮತ್ತು ಸಮಯ	ಸ್ಥಳ ಪರಿಶೀಲನೆ ದಿನಾಂಕ ಮತ್ತು ಸಮಯ	ಬಿಡ್ ದಾಖಲೆಗಳು ಮತ್ತು ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ	ಇ-ಹರಾಜಿನ ದಿನಾಂಕ ಮತ್ತು ಸಮಯ
10ನೇ ಜೂನ್ 2026 ಮಧ್ಯಾಹ್ನ 3.00 ರಿಂದ 4.00 ಗಂಟೆ ಸ್ಥಳ: O/o SPLOCA, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು-01	11ನೇ ಜೂನ್ 2026 ಬೆಳಗ್ಗೆ 11.00 ರಿಂದ ಸಂಜೆ 5.00 ಗಂಟೆಯವರೆಗೆ	18ನೇ ಜೂನ್ 2026 ಸಂಜೆ 5.00 ಗಂಟೆಯವರೆಗೆ	22ನೇ ಜೂನ್ 2026 ಬೆಳಗ್ಗೆ 11.00 ರಿಂದ ಮಧ್ಯಾಹ್ನ 1.00 ಗಂಟೆಯವರೆಗೆ

ಆಸಕ್ತ ಬಿಡ್‌ದಾರರು ನೋಂದಣಿ ಮತ್ತು ಆನ್‌ಲೈನ್ ಹರಾಜಿಗಾಗಿ https://kppp.karnataka.gov.in ಇಲ್ಲಿಗೆ ಲಾಗಿನ್ ಮಾಡಬಹುದು (ಸಹಾಯವಾಣಿ ಸಂಖ್ಯೆ: 080-46010000, 080-68948777) ಮತ್ತು ಇ-ಹರಾಜಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯ ಬಗ್ಗೆ ಸಹಾಯಕ ಆಯುಕ್ತರು, ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳ ಕಛೇರಿ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ.ಅಂಬೇಡ್ಕರ್ ವೀದಿ, ಬೆಂಗಳೂರು-560001 ಇವರನ್ನು ಸಂಪರ್ಕಿಸಬಹುದು. ಇ-ಮೇಲ್ ಐಡಿ: splocaeauction@gmail.com ಅಥವಾ ಮೊಬೈಲ್ ಸಂಖ್ಯೆ 9945515174 ಅನ್ನು ಸಂಪರ್ಕಿಸಬಹುದು.

ಸ್ಥಳ: ಬೆಂಗಳೂರು
ದಿನಾಂಕ: 27.05.2026 DIPR/CP/850/Zen/2026-27
ಸಹಿ/- ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ (ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು), ಬೆಂಗಳೂರು, ಕರ್ನಾಟಕ

ರಾಜ್ಯ ಜನನಾಯಕರ ಅಧಿಕಾರ ಯುಗಾಂತ್ಯ

• ವೈ.ಗ. ಜಗದೀಶ್

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡುವ ಮೂಲಕ ಕರ್ನಾಟಕದಲ್ಲಿ ಜನ ನಾಯಕರ ಅಧಿಕಾರದ ಯುಗಾಂತ್ಯವಾಗಿದೆ.

ಈಚೆಗಿನ ಸರಿ ಸುಮಾರು ಮೂರು ದಶಕಗಳಲ್ಲಿ ನಾಡನ್ನು ಬಹುವಾಗಿ ಪ್ರಭಾವಿಸಿದವರು 93ರ ಹಿರೀಕರಾದ ಎಚ್‌.ಡಿ. ದೇವೇಗೌಡ, 83ರ ವಯೋಮಾನದ ಬಿ.ಎಸ್. ಯಡಿಯೂರಪ್ಪ ಹಾಗೂ 77 ವರ್ಷದ ಸಿದ್ದರಾಮಯ್ಯ. ಗೌಡ ಎಂದರೆ ದೇವೇಗೌಡ, ಅಪ್ಪ ಎಂದರೆ ಯಡಿಯೂರಪ್ಪ, ಅಯ್ಯ ಎಂದರೆ ಸಿದ್ದರಾಮಯ್ಯ ಎಂಬಷ್ಟರಮಟ್ಟಿಗೆ ಈ ಮೂವರು ಜನಾನುರಾಗಿಗಳು.

ಹೋರಾಟದ ಕುಲುಮೆಯಲ್ಲಿ ಪಳಗಿ, ಜನರ ನಡುವಿನಿಂದಲೇ ನಾಯಕರಾಗಿ ಹೊರಹೊಮ್ಮಿ, ಜನಸಮೂಹವನ್ನೇ ತಮ್ಮ ಪ್ರಭಾವಳಿಯ ಒಳಗು ಮಾಡುವ ಮೋಹಕತ್ವ ಈ ಮೂವರು ನಾಯಕರಲ್ಲಿರುವ ಸಾಮ್ಯತೆ. ಅಂತಹದೇ, ವ್ಯಕ್ತಿತ್ವವನ್ನು ಹೊಂದಿದ್ದ ದೇವರಾಜ ಅರಸು, ರಾಮಕೃಷ್ಣ ಹೆಗಡೆ, ಎಸ್. ಬಂಗಾರಪ್ಪ, ಎಸ್.ಎಂ. ಕೃಷ್ಣ ಅವರೆಲ್ಲ ಈಗಿಲ್ಲ.

ಸದ್ಯ ನಮ್ಮೊಡನಿರುವ ಹಿರಿಯ ತಲೆಯಾಳುಗಳ ಪೈಕಿ ಸಿದ್ದರಾಮಯ್ಯ ಮಾತ್ರ ರಾಜ್ಯರಾಜಕಾರಣದಲ್ಲಿ ಸಕ್ರಿಯ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದಿಂದ ಒಕ್ಕೂಟ ವ್ಯವಸ್ಥೆಗೆ ಒದಗಿರುವ ಧಕ್ಕೆ, ಕೋಮುವಾದಿ ರಾಜಕಾರಣದ ಅಪಾಯದ ಬಗ್ಗೆ ಎಚ್ಚರಿಸುವ ಧೈರ್ಯ ತೋರುವ ಏಕೈಕ ನಾಯಕ ಸಿದ್ದರಾಮಯ್ಯ. ಸರ್ಕಾರ ನಡೆಸುವವರಿಗೆ ಇರಬೇಕಾದ ಹೃದಯವೈಶಾಲ್ಯದ ಜತೆಗೆ ಸಾಮಾಜಿಕ ನ್ಯಾಯದ ಪಸೆ ಆರದಂತೆ, ಶೋಷಿತರ ಅಳಲಿಗೆ ಧ್ವನಿಯಾಗಿದ್ದರು.

ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ಸಲ್ಲಿಸಿದ ನಂತರ ಸಿದ್ದರಾಮಯ್ಯ ಅವರು 'ಎಕ್ಸ್'ನಲ್ಲಿ ಪ್ರಕಟಿಸಿದ ಪೋಸ್ಟರ್

ಮೊದಲ ಅವಧಿಯಲ್ಲಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ದಿನವೇ ಅನ್ನಭಾಗ್ಯ ಯೋಜನೆ ಜಾರಿ ಮಾಡಿದ್ದಲ್ಲದೇ, ಕೈಗೆಟುಕುವ ದರದಲ್ಲಿ ಊಟ–ಉಪಾಹಾರ ಸಿಗುವಂತೆ ಇಂದಿರಾ ಕ್ಯಾಂಟೀನ್‌ಗಳನ್ನು ತೆರೆದಿದ್ದರು. ಸಾಮಾಜಿಕ ನ್ಯಾಯದ ವಿಷಯದಲ್ಲಿ ದೇವರಾಜ ಅರಸು ಅವರ ಮಟ್ಟಕ್ಕೆ ಏರಲು ಸಾಧ್ಯವಾಗದೇ ಇದ್ದರೂ ಅವರ ಹಾದಿಯಲ್ಲಿ ಸಾಗಿದರು. ಎರಡನೇ ಅವಧಿಯ ಮೂರು ವರ್ಷಗಳಲ್ಲಿ 'ಗ್ಯಾರಂಟಿ'ಗಳ ಜತೆಗೆ, ವ್ಯವಸ್ಥೆಯ ಸುಧಾರಣೆಗಾಗಿ ವಿಧೇಯಕ ರಾಜಕಾರಣಕ್ಕೆ ಸೀಮಿತರಾಗದೆ ವಿಧಾಯಕ ರಾಜಕಾರಣದ ದಾರಿಯನ್ನೂ ಹಾಕಿಕೊಟ್ಟರು.

ಹೋರಾಟವೇ ಬದುಕು: ಕಾಂಗ್ರೆಸ್ ಪಕ್ಷದ ಹೈಕಮಾಂಡ್, ರಾಜ್ಯದ ಮುಖ್ಯಮಂತ್ರಿಗಳನ್ನು ಸಾಮಂತರಂತೆ ನಡೆಸಿಕೊಳ್ಳುವುದು ಹೊಸತೇನೂ ಅಲ್ಲ. ಅದಕ್ಕಾಗಿಯೇ, ಅನೇಕ ಬಾರಿ ಅದು ಪೆಟ್ಟನ್ನೂ ತಿಂದಿದೆ. ಶಾಸಕರಿಂದ ಆಯ್ಕೆಯಾದ ಶಾಸಕಾಂಗ ಪಕ್ಷದ ನಾಯಕರ ಅಧಿಕಾರವನ್ನು ಮೊಟಕುಗೊಳಿಸಿದ್ದು ಕಾಂಗ್ರೆಸ್‌ನ 'ಹೆಗ್ಗಳಿಕೆ'.

ವಿಶ್ಲೇಷಣೆ

ಕರ್ನಾಟಕದಲ್ಲಿ ದೇವರಾಜ ಅರಸು, ವೀರೇಂದ್ರ ಪಾಟೀಲ, ಎಸ್. ಬಂಗಾರಪ್ಪ ಈ ರೀತಿಯಲ್ಲಿ ಬಲಿಯಾಗಿದ್ದಾರೆ. ಹಾಗೆ ನೋಡಿದರೆ, ಸಿದ್ದರಾಮಯ್ಯ ಅವರು ಮೊದಲ ಬಾರಿ ಪೂರ್ಣಾವಧಿ, ಎರಡನೇ ಬಾರಿ ಸುದೀರ್ಘ ಮೂರು ವರ್ಷ ಅಧಿಕಾರ ಅನುಭವಿಸುವ ಅದೃಷ್ಟವನ್ನು ಪಡೆದರು. 2014ರ ಲೋಕಸಭೆ ಚುನಾವಣೆ ಬಳಿಕ ಕಾಂಗ್ರೆಸ್ ಹೈಕಮಾಂಡ್ ಸಂಪೂರ್ಣ ನೆಲಕಚ್ಚಿದ್ದರಿಂದಾಗಿ ಬಹುಶಃ ಸಿದ್ದರಾಮಯ್ಯನವರ ಬಲ ಹೆಚ್ಚಾಯಿತು.

ಸಿದ್ದರಾಮಯ್ಯ ಅವರಂತೆಯೇ ಹೋರಾಟವನ್ನೇ ತಮ್ಮ ಜೀವನವನ್ನಾಗಿಸಿಕೊಂಡು, ಅದರಲ್ಲೇ ಬಳಲಿ ಬೆಂಡಾದ ದೇವೇಗೌಡ ಹಾಗೂ ಯಡಿಯೂರಪ್ಪ ಅವರು ಅಧಿಕಾರ ಅನುಭವಿಸಿದ್ದು ಕಡಿಮೆ. ದಶಕಗಳ ಬದುಕನ್ನೇ ಅಡವಿಟ್ಟು ನಾಡಿನ ರೈತರಿಗಾಗಿ, ನೀರಿಗಾಗಿ ಹೋರಾಡಿದ ದೇವೇಗೌಡರು ಎರಡು ವರ್ಷ ಮುಖ್ಯಮಂತ್ರಿಯಾದರು. ಬಹುಶಃ ಪ್ರಧಾನಿ ಪಟ್ಟ ಅರಸಿ ಬರದೇ ಇದ್ದರೆ ಮತ್ತೊಂದು ಅವಧಿಯ ಅಧಿಕಾರ ಅವರಿಗೆ ದಕ್ಕುತ್ತಿತ್ತು.

ಇನ್ನು ಯಡಿಯೂರಪ್ಪ ಕೂಡ ರೈತರ ಹೋರಾಟದ ಮೂಸೆಯಲ್ಲಿಯೇ ಬೆಳೆದುಬಂದವರು. ದಾಖಲೆಯಂತೆ ನಾಲ್ಕು ಬಾರಿ ಮುಖ್ಯಮಂತ್ರಿಯಾದರೂ ಅಧಿಕಾರ ಅನುಭವಿಸಿದ್ದು ಮಾತ್ರ ಅಲ್ಪಾವಧಿ. ದಕ್ಷಿಣ ಭಾರತದಲ್ಲಿ ಮೊದಲ ಬಾರಿಗೆ ಕೇಸರಿ ಪತಾಕೆ ಹಾರಿಸಿದರಾದರೂ ಪಕ್ಷದ ವರಿಷ್ಠರು ಅಕಾಲದಲ್ಲೇ ಕುರ್ಚಿಯಿಂದ ಹೊರದಬ್ಬಿದರು. ಅಸಾಧ್ಯವೆನ್ನಿಸುವ ಕಾಲದಲ್ಲೂ 'ಆಪರೇಷನ್ ಕಮಲ'ದ ಅಡ್ಡದಾರಿಯಲ್ಲಿ ಮತ್ತೊಮ್ಮೆ ಮುಖ್ಯಮಂತ್ರಿಯಾದರೂ ಎರಡು ವರ್ಷ ಪೂರ್ಣಗೊಳಿಸುವಷ್ಟರಲ್ಲೇ ಮತ್ತೆ, ಅಧಿಕಾರದಿಂದ ಇಳಿಸಲಾಯಿತು.

ತಮ್ಮ ಸುದೀರ್ಘ ರಾಜಕೀಯ ಬದುಕಿನಲ್ಲಿ ನೇರ ಚುನಾವಣೆಯನ್ನು ಎದುರಿಸಿ ಜನ ರಾಜಕಾರಣವನ್ನು ಮಾಡಿಕೊಂಡು ಬಂದಿರುವ ಸಿದ್ದರಾಮಯ್ಯ ಅವರಿಗೆ ರಾಜ್ಯಸಭೆಯ ಆಮಿಷವನ್ನು ಕಾಂಗ್ರೆಸ್ ಹೈಕಮಾಂಡ್ ಮುಂದಿಟ್ಟಿತು. ಸುರಕ್ಷತಾ ವಲಯದಲ್ಲಿ ಇರಲು ಇಷ್ಟಪಡದ ಸಿದ್ದರಾಮಯ್ಯ, ರಾಜ್ಯ ರಾಜಕಾರಣದಲ್ಲಿ ಉಳಿಯುವ ನಿರ್ಧಾರಕ್ಕೆ ಬಂದಿದ್ದಾರೆ.

ರಾಜಕೀಯದಲ್ಲಿ ಸಕ್ರಿಯವಾಗಿ ಇರುವೆ ಎಂದು ಸಿದ್ದರಾಮಯ್ಯ ಹೇಳಿದ್ದಾರಾದರೂ ಬದಲಾಗುತ್ತಲೇ ಇರುವ ಕಾಲಮಾನದಲ್ಲಿ ಅವರಿಗೆ ಎಷ್ಟು ಪ್ರಾಧಾನ್ಯ ಸಿಗುತ್ತದೆ ಎಂಬುದು ಗೊತ್ತಿಲ್ಲ. ಶಿಷ್ಟ, ಜನಪರ ಕಾಳಜಿಯ ರಾಜಕಾರಣದ ಕೊನೆಯ ಕೊಂಡಿಯಂತಿದ್ದ ಸಿದ್ದರಾಮಯ್ಯ ಕೆಳಗಿಳಿಯುವುದರೊಂದಿಗೆ, ಹೋರಾಟ ಕಲಿಗಳ ರಾಜಕಾರಣದ ಒಂದು ಅಧ್ಯಾಯ ಕೊನೆಗೊಂಡಂತಾಗಿದೆ. ಕಾರ್ಪೊರೇಟ್ ಶೈಲಿಯ ರಾಜಕಾರಣದ ಥೈಲಿಯ ಹೊಸ ತಲೆಮಾರು ಅಧಿಕಾರದ ಕೇಂದ್ರಕ್ಕೆ ಬಂದು ನಿಂತಿದೆ.

ಕೃತಿಗಿಳಿಯದ ಕೋಮುವಾದದ ವಿರೋಧ

2023ರಲ್ಲಿ ಅಧಿಕಾರಕ್ಕೆ ಬರುವ ಮೊದಲು ಕರ್ನಾಟಕವನ್ನು ಸರ್ವಜನಾಂಗದ ಶಾಂತಿಯ ತೋಟವಾಗಿ ಮಾಡುವುದಾಗಿ ಸಿದ್ದರಾಮಯ್ಯ ಹೇಳಿದ್ದರು. ಅಧಿಕಾರ ತ್ಯಾಗದ ಗಳಿಗೆಯಲ್ಲಿ, ಕೋಮುವಾದಿ ರಾಜಕಾರಣದ ವಿರುದ್ಧ ಹೋರಾಟ ನಿರಂತರ ಎಂದಿದ್ದಾರೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ, ಮತದ್ವೇಷ ಬೆಂಕಿ ರಾಜ್ಯವನ್ನು ಬಾಧಿಸಲಿಲ್ಲ. ಆದರೆ, ಕೋಮುವಾದಿಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವ ಅವಕಾಶ ಇದ್ದರೂ ಆ ಧೈರ್ಯವನ್ನು ಅವರು ತೋರಲೇ ಇಲ್ಲ.

'ಕೋಮು ಶಕ್ತಿ ವಿರುದ್ಧ ಹೋರಾಟ'

ಜನಶಕ್ತಿ ಇದ್ದರೆ ಮಾತ್ರ ರಾಜಕೀಯದಲ್ಲಿ ಉಳಿವು: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋಮುವಾದಿ ಶಕ್ತಿಗಳ ವಿರುದ್ಧ ಕೊನೆ ಉಸಿರು ಇರುವ ವರೆಗೆ ಹೋರಾಡುತ್ತೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೋಮುವಾದ ಸಂವಿಧಾನಕ್ಕೆ ವಿರುದ್ಧವಾದುದು. ಸಂವಿಧಾನ ಇಲ್ಲದೇ ಇದ್ದಿದ್ದರೆ ನಾನು ಶಾಸಕ, ಮಂತ್ರಿ, ಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕನಾಗಲು ಸಾಧ್ಯ ಆಗುತ್ತಿರಲಿಲ್ಲ' ಎಂದರು.

'ಸಂವಿಧಾನಕ್ಕೆ ಯಾರೇ ಧಕ್ಕೆ ತಂದರೂ ಅದನ್ನು ವಿರೋಧಿಸಿ, ಸಮಾನತೆಗಾಗಿ ಹೋರಾಟ ಮಾಡುತ್ತೇನೆ. ಅದೇ ರೀತಿ, ಕನ್ನಡ ನಾಡಿನ ನೆಲ, ಜಲ ಮತ್ತು ಭಾಷೆ ವಿಚಾರದಲ್ಲಿ ರಾಜಿ ಇಲ್ಲ. ಕರ್ನಾಟಕದ ಹಕ್ಕುಗಳಿಗಾಗಿ ಹೋರಾಡುತ್ತೇನೆ' ಎಂದು ಸಿದ್ದರಾಮಯ್ಯ ಹೇಳಿದರು.

'ನಾನು ಹಳ್ಳಿಗಾಡಿನಿಂದ ಬಂದವನು. ಮುಂದೊಂದು ದಿನ ಶಾಸಕ, ಸಚಿವ, ಮುಖ್ಯಮಂತ್ರಿ, ವಿರೋಧಪಕ್ಷದ ನಾಯಕನಾಗುತ್ತೇನೆ ಎಂದು ಕನಸು ಕಂಡಿರಲಿಲ್ಲ. ಇಂತಹದ್ದೊಂದು ದುಬಾರಿ ಕನಸನ್ನು ನನಸು ಮಾಡಿದ್ದು ಬಾಬಾಸಾಹೇಬ್ ಅಂಬೇಡ್ಕರ್ ಅವರು ಬರೆದಿರುವ ಸಂವಿಧಾನ. ಈ ಸಂವಿಧಾನದ ಬಲ ಇಲ್ಲದೆ ಹೋಗಿದ್ದರೆ ನಾನು ಎಲ್ಲೋ ಕುರಿ ಮೇಯಿಸಿಕೊಂಡೋ, ಇನ್ನೇನೋ ಆಗಿ ಇರುತ್ತಿದ್ದೆ' ಎಂದರು.

> ನಾನು ಎಂದಿಗೂ ನಂಬಿದ ಮೌಲ್ಯಗಳು ಮತ್ತು ಸಿದ್ಧಾಂತದ ಜೊತೆ ರಾಜೀ ಮಾಡಿಕೊಳ್ಳಲಿಲ್ಲ
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

'ಹೀಗಾಗಿ ಜಾತಿ, ಧರ್ಮ ಮೀರಿ ಎಲ್ಲರೂ ಒಂದು ಕುಟುಂಬವಾಗಿ ಬಾಳಬೇಕು ಎಂಬ ವಿಚಾರದ ಮೇಲೆ ನಂಬಿಕೆ ಇಟ್ಟುಕೊಂಡಿದ್ದೇನೆ. ಆರ್ಥಿಕವಾಗಿ, ಸಾಮಾಜಿಕವಾಗಿ ದೇಶದ ಸಂಪತ್ತು, ಅಧಿಕಾರ ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗಬೇಕು. ಕುವೆಂಪು ಅವರು ಹೇಳಿದಂತೆ, ಸರ್ವಜನಾಂಗದ ಶಾಂತಿಯ ತೋಟ ಎಂಬ ವಿಚಾರದಲ್ಲಿ ನಂಬಿಕೆ ಇಟ್ಟವನು' ಎಂದರು.

'1978ರಲ್ಲಿ ಮೊದಲ ಬಾರಿಗೆ ತಾಲ್ಲೂಕು ಬೋರ್ಡ್ ಸದಸ್ಯನಾದೆ. ನನ್ನ 50 ವರ್ಷಗಳ ರಾಜಕೀಯ ಜೀವನ ಒಂದು ತೆರೆದ ಪುಸ್ತಕ ಇದ್ದಂತೆ. ಇವತ್ತಿನ ರಾಜಕೀಯದಲ್ಲಿ ಜನಶಕ್ತಿ ಇದ್ದರೆ ಮಾತ್ರ ರಾಜಕೀಯದಲ್ಲಿ ಉಳಿಯಲು ಸಾಧ್ಯ. ಅಧಿಕಾರ ಕೊಡುವವರೂ ಜನರೇ' ಎಂದು ತಮ್ಮ ರಾಜಕೀಯ ವಿರೋಧಿಗಳಿಗೆ ಪರೋಕ್ಷವಾಗಿ ತಿವಿದರು.

'ಪ್ರತಿಯೊಬ್ಬರಿಗೂ ಅನ್ನ, ಆರೋಗ್ಯ, ಶಿಕ್ಷಣ, ವಸತಿ, ಉದ್ಯೋಗ ಒದಗಿಸಬೇಕು ಎಂಬುದು ನನ್ನ ನಂಬಿಕೆ. ಅದಕ್ಕಾಗಿ ಎಲ್ಲ ಬಡವರಿಗೂ ಅನ್ನ, ಗೃಹಲಕ್ಷ್ಮಿ ಮೂಲಕ ₹2,000, ಗೃಹಜ್ಯೋತಿ ಮೂಲಕ ಉಚಿತ ವಿದ್ಯುತ್, ಯುವನಿಧಿ, ಶಕ್ತಿ ಯೋಜನೆ ಜಾರಿ ಮಾಡಿದೆ. ಬರ ಬಂದಾಗಲೂ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇನೆ' ಎಂದು ಸಿದ್ದರಾಮಯ್ಯ ಹೇಳಿದರು.

ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾಧ್ಯಮಗೋಷ್ಠಿ ನಡೆಸಿದ ಬಳಿಕ ಡಿಸಿಎಂ ಡಿ ಕೆ ಶಿವಕುಮಾರ್, ಸಚಿವರಾದ ಪರಮೇಶ್ವರ, ಕೆ ಜೆ ಜಾರ್ಜ್ ಜೊತೆಗೆ ಕೈ ಎತ್ತಿ ಒಗ್ಗಟ್ಟು ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರ. ಪ್ರಶಾಂತ್ ಎಚ್‌.ಜಿ.

'ಮಾತು ಉಳಿಸಿಕೊಂಡಿದ್ದೇವೆ'

'ನನ್ನ ಎರಡೂ ಅವಧಿಯಲ್ಲೂ ಪಕ್ಷದ ಪ್ರಣಾಳಿಕೆಯಲ್ಲಿ ನೀಡಿದ ಎಲ್ಲ ಭರವಸೆಗಳನ್ನು ಈಡೇರಿಸಿದ್ದೇವೆ. ಈ ಅವಧಿಯಲ್ಲಿ ಐದು ಗ್ಯಾರಂಟಿಗಳನ್ನು ಪ್ರಾಮಾಣಿಕವಾಗಿ ಅನುಷ್ಠಾನ ಮಾಡಿದ್ದೇವೆ' ಎಂದು ಸಿದ್ದರಾಮಯ್ಯ ಹೇಳಿದರು.

> ನಾನು ಯಾವತ್ತೂ ಅಧಿಕಾರ ಮತ್ತು ಹಣದ ಹಿಂದೆ ಹೋಗಲಿಲ್ಲ. ಆಸ್ತಿ ಮಾಡುವ ಆಲೋಚನೆ ಬರಲಿಲ್ಲ. ಮತದಾರ ದೇವ್ರು ಅಧಿಕಾರ ಕೊಟ್ಟಾಗ ಕೆಲಸ ಮಾಡಿದ್ದೇನೆ
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

'ಗ್ಯಾರಂಟಿ ಯೋಜನೆಗಳಿಗೆ ಈವರೆಗೆ ₹1.40 ಲಕ್ಷ ಕೋಟಿ ವೆಚ್ಚ ಮಾಡಿದ್ದೇವೆ. ಇದು ನನಗೆ ಮತ್ತು ನಮ್ಮ ಪಕ್ಷಕ್ಕೆ ಸಂತೃಪ್ತಿ ನೀಡಿದೆ. ಇದರಿಂದ ರಾಜ್ಯವು ಆರ್ಥಿಕವಾಗಿ ದಿವಾಳಿ ಆಗುತ್ತದೆ, ಖಜಾನೆ ಖಾಲಿ ಆಗುತ್ತದೆ ಎಂದು ವಿರೋಧ ಪಕ್ಷಗಳು ಟೀಕೆ ಮಾಡಿದವು. ಪ್ರಧಾನ ಮಂತ್ರಿಯವರೂ ಟೀಕೆ ಮಾಡಿದ್ದರು. ಆದರೆ ಕರ್ನಾಟಕ ಆರ್ಥಿಕವಾಗಿ ಸುಸ್ಥಿತಿಯಲ್ಲಿದೆ' ಎಂದು ಹೇಳಿದರು.

ಗ್ಯಾರಂಟಿ ಜಾರಿ ಮಾಡಿದ ಮೇಲೂ ಕರ್ನಾಟಕ ಇಡೀ ದೇಶದಲ್ಲಿ ತಲಾ ಆದಾಯದಲ್ಲಿ ನಂಬರ್ 1ರ ಸ್ಥಾನದಲ್ಲಿದೆ. ಜಿಎಸ್‌ಟಿ ಸಂಗ್ರಹದಲ್ಲಿ ಎರಡನೇ ಸ್ಥಾನದಲ್ಲಿದೆ. ವಿರೋಧ ಪಕ್ಷಗಳು ಸುಖಾ– ಸುಮ್ಮನೆ ಸುಳ್ಳು ಆರೋಪಗಳನ್ನು ಮಾಡುತ್ತಿವೆ ಎಂದು ಟೀಕಿಸಿದರು.

'ಹೈಕಮಾಂಡ್ ಹೇಳಿದ್ದಕ್ಕೆ ರಾಜೀನಾಮೆ ಕೊಟ್ಟೆ'

'ಹೈಕಮಾಂಡ್ ರಾಜೀನಾಮೆ ಕೊಡಿ ಎಂದು ಹೇಳಿತು. ಹೀಗಾಗಿ ರಾಜೀನಾಮೆ ನೀಡಿದೆ' ಎಂದು ಸಿದ್ದರಾಮಯ್ಯ ತಿಳಿಸಿದರು.

'ಹೈಕಮಾಂಡ್ ಯಾವಾಗ ಸೂಚಿಸುತ್ತದೋ ಆವಾಗ ನಾನು ರಾಜೀನಾಮೆ ಕೊಡುತ್ತೇನೆ ಎಂದು ಹೇಳಿದ್ದೆ. ಆ ಪ್ರಕಾರ ಮೊನ್ನೆ ಕರೆಸಿ ರಾಜೀನಾಮೆ ಕೊಡಿ ಎಂದು ಹೇಳಿದ್ದರಿಂದಾಗಿ, ರಾಜೀನಾಮೆ ಸಲ್ಲಿಸಿದ್ದೇನೆ' ಎಂದರು.

'ದಶಕಗಳ ಕಾಲ ಸಾರ್ವಜನಿಕ ಜೀವನದಲ್ಲಿರುವ ನನ್ನ ಬಗ್ಗೆ ರಾಜ್ಯದ ಜನತೆಗೆ ತಿಳಿದಿದೆ. ನಾನು ಪ್ರೀತಿ-ವಿಶ್ವಾಸಗಳಿಗೆ ತಲೆಬಾಗುವವನೇ ಹೊರತು, ಒತ್ತಡ-ಪ್ರಭಾವಗಳಿಗೆ ಒಳಗಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಜಾಯಮಾನದವನಲ್ಲ. ಈ ರಾಜೀನಾಮೆ ಪತ್ರವನ್ನು ಕೂಡಾ ಮನಃಪೂರ್ವಕವಾಗಿ ನೀಡಿದ್ದೇನೆ' ಎಂದು ಹೇಳಿದರು.

'ಸಂವಿಧಾನದ ಪ್ರಕಾರ ರಾಜ್ಯಪಾಲರು ರಾಜೀನಾಮೆ ಪತ್ರ ಅಂಗೀಕರಿಸಿ ಮುಂದಿನ ಮುಖ್ಯಮಂತ್ರಿ ಆಯ್ಕೆಗೆ ಅವಕಾಶ ಮಾಡಿಕೊಡಬೇಕು. ನಮ್ಮ ಪಕ್ಷದ 135 + 1 ಸ್ಥಾನಗಳನ್ನು ಪಡೆದಿದೆ. ಇಬ್ಬರು ಪಕ್ಷೇತರರು ನಮ್ಮ ಸರ್ಕಾರಕ್ಕೆ ಬೆಂಬಲ ನೀಡಿದ್ದಾರೆ. ನಮಗೆ ಸಂಪೂರ್ಣ ಬಹುಮತ ಇದೆ' ಎಂದರು.

ಹೈಕಮಾಂಡ್‌ಗೆ ಧಿಕ್ಕಾರ ಕೂಗಿದ ಗುಂಪು

ಸಿದ್ದರಾಮಯ್ಯ 'ಕೃಷ್ಣಾ'ದಿಂದ ನಿರ್ಗಮಿಸಿದ ಬಳಿಕ, ಅಭಿಮಾನಿಗಳ ಗುಂಪೊಂದು 'ಕಾಂಗ್ರೆಸ್ ಹೈಕಮಾಂಡ್ ಸಿದ್ದರಾಮಯ್ಯ ಅವರಿಗೆ ಅನ್ಯಾಯ ಮಾಡಿದೆ. ಹೈಕಮಾಂಡ್‌ಗೆ ಧಿಕ್ಕಾರ' ಎಂದು ಘೋಷಣೆ ಕೂಗಿತು.

ಶಿವಕುಮಾರ್ ಮೌನ'ವ್ರತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ರಾಜಕಾರಣದಲ್ಲಿನ ನಡೆಯುತ್ತಿರುವ ಕ್ಷಿಪ್ರ ಬೆಳವಣಿಗೆಗಳ ಕುರಿತು ಮೂರು ದಿನಗಳಿಂದಲೂ ಯಾವುದೇ ಪ್ರತಿಕ್ರಿಯೆ ನೀಡದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮೌನ'ವ್ರತ' ಪಾಲಿಸುತ್ತಿದ್ದಾರೆ.

ಅವರ ಸೋದರ ಡಿ.ಕೆ.ಸುರೇಶ್, ಬೆಂಬಲಿಗರು ಮತ್ತು ಅಭಿಮಾನಿಗಳು ಯಾವೊಂದು ಭಾವನೆ ತೋರ್ಪಡದೆ ಶಿವಕುಮಾರ್ ಅವರನ್ನೇ ಅನುಸರಿಸುತ್ತಿದ್ದಾರೆ.

ಮಂಗಳವಾರ ದೆಹಲಿಯಲ್ಲಿ ವರಿಷ್ಠರ ಜತೆ ನಡೆದ ಸಮಾಲೋಚನೆ ಬಳಿಕ, ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡುವ ತೀರ್ಮಾನವನ್ನು ಸಿದ್ದರಾಮಯ್ಯ ಮಾಡಿದರು. ಬುಧವಾರ ಇಡೀ ಶಿವಕುಮಾರ್ ದೆಹಲಿಯಲ್ಲೇ ಇದ್ದರು. ಆದರೂ ಅವರು ಬಹಿರಂಗವಾಗಿ ಯಾರೊಂದಿಗೂ ಮಾತನಾಡಲಿಲ್ಲ. 'ಮುಖ್ಯಮಂತ್ರಿಯಾಗಿ ಪದಗ್ರಹಣ ಮಾಡುವವರೆಗೂ ಮಾತನಾಡಬೇಡಿ' ಎಂಬ ತಮ್ಮ ನಂಬಿಕಸ್ತ ಸ್ವಾಮೀಜಿಯೊಬ್ಬರ ಸೂಚನೆಯನ್ನು ಅವರು ಪಾಲಿಸುತ್ತಿದ್ದಾರೆ ಎಂದು ಹೇಳಲಾಗಿದೆ.

ಬುಧವಾರ ರಾತ್ರಿಯೇ ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ದೆಹಲಿಯಿಂದ ಬಂದಿಳಿದ ಶಿವಕುಮಾರ್ ಅವರು, ಮಾಧ್ಯಮ ಪ್ರತಿನಿಧಿಗಳು ಮತ್ತು ತಮ್ಮ ಅಭಿಮಾನಿಗಳಿಗೆ ಕೈಮುಗಿದು ಖಾಸಗಿ ವಾಹನದಲ್ಲಿ ಮನೆಗೆ ತೆರಳಿದ್ದರು.

ಗುರುವಾರ ಬೆಳಿಗ್ಗೆ ಶಿವಕುಮಾರ್ ಅವರ ಸದಾಶಿವ ನಗರ ನಿವಾಸದ ಬಳಿ ಅವರ ನೂರಾರು ಬೆಂಬಲಿಗರು ಸೇರಿದ್ದರು. ಶಿವಕುಮಾರ್ ಅವರು ಮನೆಯ ಬಾಲ್ಕನಿಯಿಂದ ಕಾಣುತ್ತಿದ್ದಂತೆ, ಅವರು ಘೋಷಣೆ ಕೂಗಲು ಆರಂಭಿಸಿದರು. ಅವರೆಲ್ಲರನ್ನೂ ಮನೆಯೊಳಗೆ ಕರೆಸಿಕೊಂಡ ಶಿವಕುಮಾರ್, ಕೆಲಹೊತ್ತು ಮಾತನಾಡಿದರು. ಆನಂತರ ಬೆಂಬಲಿಗರು ಅಲ್ಲಿಂದ ತೆರಳಿದರು. ತಾವು ತಂದಿದ್ದ ಹಾರ–ಶಾಲುಗಳನ್ನೂ ವಾಪಸ್ ಒಯ್ದರು.

ಕೈ ಸನ್ನೆ, ಕೈ ಮುಗಿಯುವುದಕ್ಕಷ್ಟೆ ಸೀಮಿತ

ಶಿವಕುಮಾರ್ ಮತ್ತು ಅವರ ತಮ್ಮ ಡಿ.ಕೆ. ಸುರೇಶ್ ಅವರು ಹೆಚ್ಚು ಮಾತನಾಡದೆ, ಕೈ ಸನ್ನೆ, ಕೈ ಮುಗಿಯುವುದಕ್ಕಷ್ಟೆ ತಮ್ಮನ್ನು ಸೀಮಿತಗೊಳಿಸಿದ್ದರು. ಗುರುವಾರ ಬೆಳಿಗ್ಗೆ ಸದಾಶಿವನಗರದಲ್ಲಿರುವ ಮನೆಯಿಂದ ಉಪಾಹಾರ ಸಭೆಗೆ ಹೊರಟ ಶಿವಕುಮಾರ್ ಅವರನ್ನು ಮಾತನಾಡಿಸಲು ಸುದ್ದಿಗಾರರು ಸುತ್ತುವರಿದರೂ, ಅವರು ಮಾತ್ರ ತುಟಿಪಿಟಿಕ್ಕೆನ್ನಲಿಲ್ಲ. ಕೈ ಸನ್ನೆ ಮಾಡಿ ತೆರಳಿದರು. ಡಿ.ಕೆ. ಸುರೇಶ್ ಅವರು 'ಪಕ್ಷದ ತೀರ್ಮಾನಕ್ಕೆ ಕಾಯೋಣ' ಎಂದಷ್ಟೆ ಹೇಳಿದರು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರೆದಿದ್ದ ಉಪಾಹಾರ ಸಭೆಗೆಂದು ಮನೆಯಿಂದ ಹೊರ ಬಂದಾಗಲೂ ಶಿವಕುಮಾರ್ ಅವರು ಮಾಧ್ಯಮ ಪ್ರತಿನಿಧಿಗಳತ್ತ ಕೈಮುಗಿದು ಹೊರಟರು. ಅಲ್ಲೇ ಇದ್ದ ತಮ್ಮ ಕೆಲವು ಅಭಿಮಾನಿಗಳತ್ತ ನೋಡಿ, ಸುಮ್ಮನಿರುವಂತೆ ಸನ್ನೆ ಮಾಡಿದರು. ಮುಖ್ಯಮಂತ್ರಿ ನಿವಾಸದ ಬಳಿ ಕಾರಿನಿಂದ ಇಳಿದಾಗಲೂ ಮಾಧ್ಯಮಗಳತ್ತ ಕೈಮುಗಿದು ಹೊರಟರು.

ಉಪಾಹಾರ ಸಭೆಗೂ ಮುನ್ನ ಸಿದ್ದರಾಮಯ್ಯನವರ ಜತೆ ಕೆಲಹೊತ್ತು ಸಂಭ್ರಮದಿಂದಲೇ ಅವರು ಸಮಾಲೋಚನೆ ನಡೆಸಿದರು. ತಾವು ರಾಜೀನಾಮೆ ನೀಡುವ ನಿರ್ಧಾರವನ್ನು ಸಿದ್ದರಾಮಯ್ಯ ಅವರು ಸಭೆಗೆ ತಿಳಿಸಿದರು ಎಂದು ಮಾಧ್ಯಮಗಳು ವರದಿ ಮಾಡಿದವು. ಆ ವೇಳೆಗೆ ಇತ್ತ ಶಿವಕುಮಾರ್ ಅವರ ಸದಾಶಿವನಗರ ನಿವಾಸದ ಬಳಿ ಇದ್ದ ಕೆಲ ಅಭಿಮಾನಿಗಳು ಪರಸ್ಪರ ಸಿಹಿ ಹಂಚಿ, 'ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಜೈ' ಎಂದು ಘೋಷಣೆ ಕೂಗಿದರು. ತಕ್ಷಣವೇ ಮನೆಯೊಳಗಿಂದ ಬಂದ ಸಿಬ್ಬಂದಿ, ಅವರನ್ನು ಸುಮ್ಮನಾಗಿಸಿದರು.

ಸಿದ್ದರಾಮಯ್ಯ ಅವರು ರಾಜೀನಾಮೆ ಪತ್ರ ಸಲ್ಲಿಸಲು ಲೋಕಭವನಕ್ಕೆ ತೆರಳಿದಾಗ, ಅಲ್ಲಿಂದ ಗೃಹಕಚೇರಿ ಕೃಷ್ಣಾಗೆ ಬಂದು ಸುದ್ದಿಗೋಷ್ಠಿ ನಡೆಸುವಾಗಲೂ ಶಿವಕುಮಾರ್ ಅವರ ಜತೆಗಿದ್ದರು. ಅಲ್ಲಿ ಒಂದೇ ವಾಕ್ಯವನ್ನು ಉಸುರಿದರು.

ರೇಂಜ್‌ರೋವರ್ ಅನ್ನು ಬೈರತಿ ಸುರೇಶ್ ಅವರು ಚಲಾಯಿಸಿಕೊಂಡು ಸಿದ್ದರಾಮಯ್ಯ ಅವರನ್ನು ಲೋಕಭವನಕ್ಕೆ ಕರೆತಂದರು. ಡಿ.ಕೆ.ಶಿವಕುಮಾರ್, ಜಿ.ಪರಮೇಶ್ವರ, ಕೆ.ಜೆ.ಜಾರ್ಜ್ ಕಾರಿನ ಹಿಂಬದಿಯ ಸೀಟಿನಲ್ಲಿ ಕುಳಿತಿದ್ದರು – ಪ್ರಜಾವಾಣಿ ಚಿತ್ರ

ಸಿದ್ದರಾಮಯ್ಯಗೆ ಸಚಿವ ಸುರೇಶ್ ಸಾರಥಿ

ಬೆಂಗಳೂರು: ಕಾವೇರಿ ನಿವಾಸದಲ್ಲಿ ಉಪಾಹಾರ ಸಭೆ ಮುಗಿದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಪ್ಪು ಬಣ್ಣದ ರೇಂಜ್‌ರೋವರ್ ಎಸ್‌ಯುವಿಯಲ್ಲಿ ಲೋಕಭವನಕ್ಕೆ ತೆರಳಿದರು. ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರೇ ಕಾರನ್ನು ಚಲಾಯಿಸಿಕೊಂಡು ಸಿದ್ದರಾಮಯ್ಯ ಅವರನ್ನು ಲೋಕಭವನಕ್ಕೆ ಕರೆದೊಯ್ದರು.

ಸಿದ್ದರಾಮಯ್ಯ ಅವರ ಈ ರೇಂಜ್‌ರೋವರ್ ಪಯಣದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಜಿ.ಪರಮೇಶ್ವರ ಮತ್ತು ಇಂಧನ ಸಚಿವ ಕೆ.ಜೆ.ಜಾರ್ಜ್ ಜತೆಯಾದರು.

ರಾಜ್ಯಪಾಲರ ಕಾರ್ಯದರ್ಶಿಗೆ ರಾಜೀನಾಮೆ ಸಲ್ಲಿಸಿದ ನಂತರ ಸಿದ್ದರಾಮಯ್ಯ ಅವರನ್ನು ಬೈರತಿ ಸುರೇಶ್ ಅವರೇ ಗೃಹಕಚೇರಿ ಕೃಷ್ಣಾಗೆ ಕರೆದೊಯ್ದರು. ಸುದ್ದಿಗೋಷ್ಠಿ ಮುಗಿಸಿದ ಸಿದ್ದರಾಮಯ್ಯ ಅವರನ್ನು ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಸುರೇಶ್ ಅವರು ಅದೇ ಎಸ್‌ಯುವಿಯಲ್ಲಿ ಕರೆದೊಯ್ದರು. ಈ ವೇಳೆ ಸಿದ್ದರಾಮಯ್ಯ ಅವರ ಕೆಲ ಅಭಿಮಾನಿಗಳು ರಸ್ತೆಗೆ ಅಡ್ಡವಾಗಿ ಮಲಗಿ ತಮ್ಮ ಆಕ್ರೋಶ ಹೊರಹಾಕಿದರು. ಅವರನ್ನು ತೆರವು ಮಾಡಿದ ಪೊಲೀಸರು, ಸಿದ್ದರಾಮಯ್ಯ ಅವರ ಪಯಣಕ್ಕೆ ಅನುವು ಮಾಡಿಕೊಟ್ಟರು.

ಡಿಕೆಶಿ ಮನೆಯ ಬಳಿ ಶಾಸಕರ ದಂಡು

ಸಿದ್ದರಾಮಯ್ಯ ಅವರು ರಾಜೀನಾಮೆ ಪ್ರಕಟಿಸಿ ಸುದ್ದಿಗೋಷ್ಠಿ ಮುಗಿಸಿದ ಬಳಿಕ, ಶಿವಕುಮಾರ್ ತಮ್ಮ ಸದಾಶಿವನಗರದ ಮನೆಗೆ ಹೋದರು. ಅತ್ತ ಸಿದ್ದರಾಮಯ್ಯ ಅವರು ದೆಹಲಿಗೆ ವಿಮಾನ ಏರುತ್ತಿದ್ದಂತೆಯೇ ಹಲವು ಶಾಸಕರು, ಸಚಿವರು ಅವರ ಮನೆಗೆ ಬಂದು ಶುಭ ಕೋರಲು ಆರಂಭಿಸಿದರು.

ಭರತ್ ರೆಡ್ಡಿ, ಬಿ. ನಾಗೇಂದ್ರ ಆದಿಯಾಗಿ ಹಲವು ಶಾಸಕರು ಮನೆಗೆ ಬಂದು ಶಿವಕುಮಾರ್ ಅವರಿಗೆ ಅಭಿನಂದನೆ ಸಲ್ಲಿಸಿದರು. ಬಿ.ಕೆ.ಸಂಗಮೇಶ್ವರ, ಕಂಪ್ಲಿ ಗಣೇಶ್ ಸೇರಿ ಹಲವು ಶಾಸಕರು ಅವರಿಗೆ ಜತೆಯಾದರು. ಅದರ ಬೆನ್ನಲೇ ಸಚಿವ ಎನ್. ಎಸ್.ಬೋಸರಾಜು ಸಹ ಓಡೋಡಿ ಬಂದು ಶುಭ ಕೋರಿದರು. ಸಂಜೆ 6ರ ವೇಳೆಗೆ ನೂರಾರು ಮಂದಿ ಬೆಂಬಲಿಗರು ಅವರ ಮನೆಯ ಬಳಿ ಸೇರಿ, ಘೋಷಣೆ ಕೂಗಲಾರಂಭಿಸಿದರು. ಆಗ ಹೊರಬಂದ ಶಿವಕುಮಾರ್ ಅವರು ಎಲ್ಲರಿಗೂ ಕೈಮುಗಿದರು. ಆ ಸಂದರ್ಭದಲ್ಲಿ ಅವರ ಕಣ್ಣುಗಳು ತೇವವಾಗಿದ್ದವು. ಅದನ್ನು ತೋರ್ಪಡದೆ, ಮನೆಯೊಳಗೆ ಹೋದರು.

ಶಿವಕುಮಾರ್ ಅವರು ಮುಂದಿನ ಮುಖ್ಯಮಂತ್ರಿ ಆಗಲಿದ್ದಾರೆ ಎಂದು ಕೆಲ ಸಚಿವರು ಹೇಳಿಕೆ ನೀಡಿದ ಬೆನ್ನಲ್ಲೇ, ಸದಾಶಿವನಗರ ನಿವಾಸದ ಬಳಿ ಅಭಿಮಾನಿಗಳು ಹೂಗುಚ್ಛಗಳೊಂದಿಗೆ ಕಾದು ನಿಂತಿದ್ದರು – ಪ್ರಜಾವಾಣಿ ಚಿತ್ರ

ಕಣ್ಣೀರಿಟ್ಟ ಸಂತೋಷ್ ಲಾಡ್

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಯೋಜಿಸಿದ್ದ ಉಪಾಹಾರ ಸಭೆಯ ನಂತರ ಕಾವೇರಿ ನಿವಾಸದಿಂದ ಹೊರಬರುವಾಗ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರ ಕಣ್ಣುಗಳು ಒದ್ದೆಯಾಗಿದ್ದವು.

'ಮುಖ್ಯಮಂತ್ರಿ ಏನು ಹೇಳಿದರು, ರಾಜೀನಾಮೆ ನೀಡುತ್ತಾರೆಯೇ, ನೀವೇಕೆ ಅಳುತ್ತಿದ್ದೀರಿ' ಎಂದು ಸುದ್ದಿಗಾರರು ಪ್ರಶ್ನಿಸಿದಾಗ ಸಚಿವ ಲಾಡ್ ಯಾವ ಉತ್ತರವನ್ನೂ ನೀಡಲಿಲ್ಲ. ಬದಲಿಗೆ ಕಣ್ಣೀರಿಟ್ಟರು. ಸುದ್ದಿಗಾರರು ಮತ್ತೂ ಪ್ರಶ್ನಿಸಿದಾಗ, ಅವರ ದುಃಖ ಇನ್ನಷ್ಟು ಹೆಚ್ಚಾಯಿತು.

ಗದ್ಗದಿತರಾದಂತೆ ತೋರಿದ ಸಂತೋಷ್ ಲಾಡ್ ತಮ್ಮ ಕಣ್ಣಾಲಿಗಳನ್ನು ಒರೆಸಿಕೊಂಡು, ಅಲ್ಲಿಂದ ಹೊರಟರು.

ಸಿಬ್ಬಂದಿ ಕಣ್ಣೀರು

ಸಿದ್ದರಾಮಯ್ಯ ಅವರು ಕಾವೇರಿ ನಿವಾಸದಿಂದ ಹೊರಬರುವಾಗ ಹಲವು ಸಿಬ್ಬಂದಿ, ಅಭಿಮಾನಿಗಳು ಕಣ್ಣೀರಿಟ್ಟರು. ಸಿದ್ದರಾಮಯ್ಯ ಅವರು ನಗುಮೊಗದಿಂದಲೇ ಅವರನ್ನು ಸಮಾಧಾನಪಡಿಸಿದರು.

'ಸದ್ಯ ಸ್ಪೀಕರ್; ಮುಂದೆ ಗೊತ್ತಿಲ್ಲ'

ಮಂಗಳೂರು: ರಾಜ್ಯ ರಾಜಕಾರಣದಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ವಿಚಾರದಲ್ಲಿ ಮಾತನಾಡಲು ಬಯಸುವುದಿಲ್ಲ ಎಂದು ಹೇಳಿದ ವಿಧಾನಸಭಾಧ್ಯಕ್ಷ ಯು.ಟಿ ಖಾದರ್ 'ನಾನು ಸದ್ಯ ಸ್ಪೀಕರ್ ಆಗಿದ್ದೇನೆ, ಮುಂದೆ ಏನೋ ಗೊತ್ತಿಲ್ಲ. ಅಧಿವೇಶನ ನಡೆಸಲು ಸರ್ಕಾರ ನಿರ್ಧರಿಸಿದಾಗ ನಡೆಸಿಕೊಡುವುದು ನನ್ನ ಕರ್ತವ್ಯ' ಎಂದರು.

'ಉಪಮುಖ್ಯಮಂತ್ರಿ ಸ್ಥಾನದ ಕುರಿತ ಪ್ರಶ್ನೆಗೆ ಉತ್ತರಿಸಿ 'ಎಲ್ಲವನ್ನೂ ಸಮಯ ನಿರ್ಧರಿಸುತ್ತದೆ, ಮಂತ್ರಿ ಸ್ಥಾನ ಯಾರಿಗೆ ಕೊಡಬೇಕು ಎಂದು ಮುಖಂಡರು ನಿರ್ಧರಿಸುತ್ತಾರೆ' ಎಂದರು.

ರಾಜ್ ನೆನೆದ ಮುಖ್ಯಮಂತ್ರಿ

'ಕನ್ನಡದ ಮೇರು ನಟ ರಾಜಕುಮಾರ್ ಅವರು ಅಭಿಮಾನಿಗಳನ್ನು ಅಭಿಮಾನಿ ದೇವ್ರು ಎಂದು ಕರೆಯುತ್ತಿದ್ದರು. ರಾಜಕಾರಣಿಯಾದ ನಾನು ಸಂವಿಧಾನವನ್ನೇ ನನ್ನ ಧರ್ಮ ಅಂತ ತಿಳಿದುಕೊಂಡವನು. ಹೀಗಾಗಿ ಮತದಾರರೇ ನಮ್ಮ ಅಭಿಮಾನಿ ದೇವರು' ಎಂದು ಸಿದ್ದರಾಮಯ್ಯ ಹೇಳಿದರು.

'ಕನ್ನಡ ನಾಡಿನ ಏಳು ಕೋಟಿ ಜನರ ಸೇವೆ ಮಾಡುವ ಅವಕಾಶ ಸಿಕ್ಕಿದೆ. ಈ ಅವಕಾಶ ಕೊಟ್ಟ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರಿಗೆ ಧನ್ಯವಾದ ಹೇಳುತ್ತೇನೆ' ಎಂದರು.

'ನಾನು 2006ರಲ್ಲಿ ಕಾಂಗ್ರೆಸ್ ಸೇರಿದೆ. ಆಗಿನಿಂದ ಕಾಂಗ್ರೆಸ್ ಕಾರ್ಯಕರ್ತರು ಎಲ್ಲಾ ಕಾಂಗ್ರೆಸ್ ಮುಖಂಡರು, ಶಾಸಕರು, ಸಂಸದರು ನನಗೆ ಪ್ರೀತಿ ತೋರಿಸಿದ್ದಾರೆ. ಅವರೆಲ್ಲರಿಗೂ ಧನ್ಯವಾದ ಹೇಳುತ್ತೇನೆ' ಎಂದರು.

ಅಧಿಕಾರ ಹಸ್ತಾಂತರ: ಕಾಂಗ್ರೆಸ್ ಪಡಸಾಲೆಯಲ್ಲಿ ವಿಶ್ಲೇಷಣೆ

ಪಕ್ಷಕ್ಕೆ ಹಾನಿಯಾಗದ ನಡೆ

• ಶೆಮಿನ್ ಜಾಯ್

ನವದೆಹಲಿ: ಕಾಂಗ್ರೆಸ್ ಹೈಕಮಾಂಡ್ ಸೂಚನೆಯಂತೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ಗುರುವಾರ ರಾಜೀನಾಮೆ ನೀಡಿದ್ದಾರೆ. ಆ ಮೂಲಕ ನೂತನ ಮುಖ್ಯಮಂತ್ರಿ ಆಯ್ಕೆಗೆ ದಾರಿ ಮಾಡಿಕೊಟ್ಟಿದ್ದಾರೆ. ಆದರೆ, ಕರ್ನಾಟಕದಲ್ಲಿ ಈಗ ಹಠಾತ್ತನೇ ಮುಖ್ಯಮಂತ್ರಿ ಬದಲಾವಣೆಗೆ ಪಕ್ಷವು ಏಕೆ ಮುಂದಾಯಿತು ಎಂಬ ಬಗ್ಗೆ ಕಾಂಗ್ರೆಸ್‌ನ ಪಡಸಾಲೆಯಲ್ಲಿ ವಿಶ್ಲೇಷಣೆ ಮತ್ತು ಚರ್ಚೆಗಳು ಆರಂಭವಾಗಿವೆ.

ಪಕ್ಷದ ರಾಜಸ್ಥಾನ ಹಾಗೂ ಛತ್ತೀಸಗಢ ಘಟಕಗಳಲ್ಲಿಯೂ ಈ ಹಿಂದೆ ಅಸಮಾಧಾನ, ಭಿನ್ನಮತ ಭುಗಿಲೆದ್ದಿದ್ದವು. ಆದರೆ ಆ ರಾಜ್ಯಗಳಲ್ಲಿ ಕೈಗೊಳ್ಳದಂತಹ 'ಕಠಿಣ ನಿಲುವನ್ನು' ಕರ್ನಾಟಕದಲ್ಲಿ ಏಕೆ ಕೈಗೊಳ್ಳಲಾಗಿದೆ ಎಂಬ ಪ್ರಶ್ನೆಗಳಿಗೆ ಕಾಂಗ್ರೆಸ್ ನಾಯಕರು ತಮ್ಮದೇ ಉತ್ತರ ಮುಂದಿಡುತ್ತಿದ್ದಾರೆ. ಸಿದ್ದರಾಮಯ್ಯ ಅವರಿಗೆ ವಯಸ್ಸಾಗುತ್ತಿದ್ದು, ಅವರ ನೇತೃತ್ವದಲ್ಲಿ 2028ರ ಚುನಾವಣೆ ಎದುರಿಸುವುದು ಕಷ್ಟವಾಗಲಿದೆ ಎಂಬ ಗ್ರಹಿಕೆ ಪಕ್ಷದಲ್ಲಿ ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿತ್ತು. ನಾಯಕತ್ವ ಬಗೆಗಿನ ಗೊಂದಲ ಹಾಗೂ ಶಾಸಕರಲ್ಲಿ ಹೆಚ್ಚುತ್ತಿರುವ ಅಸಮಾಧಾನಗಳೇ ಈ ದಿಢೀರ್ ಅಧಿಕಾರ ಹಸ್ತಾಂತರಕ್ಕೆ ಪಕ್ಷದ ವರಿಷ್ಠರು ಮುಂದಾಗುವಂತೆ ಮಾಡಿತು ಎಂದು ವಿಶ್ಲೇಷಿಸಲಾಗುತ್ತಿದೆ.

ಇತ್ತೀಚಿನ ದಿನಗಳಲ್ಲಿ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರು ತಮ್ಮ ಅವಧಿಯನ್ನು ಪೂರ್ಣಗೊಳಿಸುವರೇ ಎಂಬುದು ನಿಗೂಢವಾಗಿಯೇ ಇತ್ತು. ಇದು, ಸಿದ್ದರಾಮಯ್ಯ ಬೆಂಬಲಿಗ ಶಾಸಕರಲ್ಲಿ ಹೊಯ್ದಾಟಕ್ಕೆ ಕಾರಣವಾಗಿತ್ತು. ಈ ಬೆಳವಣಿಗೆಗಳು ಸಿದ್ದರಾಮಯ್ಯ ಬೆಂಬಲಿಗ ಶಾಸಕರಲ್ಲಿ ಅಸಮಾಧಾನ ಮೂಡಿಸಿದ್ದಕ್ಕಿಂತ ತಮ್ಮ ರಾಜಕೀಯ ಭವಿಷ್ಯದ ಬಗ್ಗೆ ಅವರಲ್ಲಿ ಚಿಂತೆ ಮೂಡಿಸಿತ್ತು. ಇದು, ಈ ಶಾಸಕರು ತಮ್ಮ ಆದ್ಯತೆಗಳನ್ನು ಮರುಹೊಂದಾಣಿಕೆ ಮಾಡಿಕೊಳ್ಳುವಂತೆ ಮಾಡಿತು ಎಂದೂ ಹೇಳಲಾಗುತ್ತಿದೆ.

'2028ರ ವಿಧಾನಸಭಾ ಚುನಾವಣೆಯಲ್ಲಿ ನಾನು ಸ್ಪರ್ಧಿಸುವುದಿಲ್ಲ' ಎಂದು 2024ರ ಏಪ್ರಿಲ್‌ನಲ್ಲಿ ಸಿದ್ದರಾಮಯ್ಯ ಘೋಷಿಸಿದ್ದರು. ಇದು ತಮ್ಮ ಮುಂದಿನ ರಾಜಕೀಯ ನಡೆ ನಿರ್ಧರಿಸಲು ಅವರ ಬೆಂಬಲಿಗರಿಗೆ ದಾರಿ ಸುಗಮ ಮಾಡಿತು ಎಂದು ವಿಶ್ಲೇಷಿಸಲಾಗುತ್ತಿದೆ.

ರಾಜ್ಯಸಭೆ ಮತ್ತು ವಿಧಾನ ಪರಿಷತ್ತಿನ ಚುನಾವಣೆಗಳು ಸಮೀಪಿಸುತ್ತಿರುವಾಗಲೇ ತನ್ನ ಏಕೈಕ ಒಬಿಸಿ ಮುಖ್ಯಮಂತ್ರಿಯನ್ನು ಕೆಳಗಿಳಿಸಿ, ಪ್ರಭಾವಿ ಒಕ್ಕಲಿಗ ನಾಯಕನಿಗೆ ಮುಖ್ಯಮಂತ್ರಿ ಪಟ್ಟ ಕಟ್ಟುವುದು ಹಾಗೂ 'ಅಹಿಂದ' ಸಮುದಾಯಗಳ ಅಸಮಾಧಾನದ ಬಿಸಿ ಎದುರಿಸುವಂತಹ ಅಪಾಯಗಳನ್ನು ಅರಿತೇ ಪಕ್ಷವು ಕೊನೆಗೆ ಈ ದಿಟ್ಟ ನಿರ್ಧಾರ ಕೈಗೊಂಡಿತು ಎಂದು ಇವೇ ಮೂಲಗಳು ಹೇಳಿವೆ.

ಅಧಿಕಾರ ಹಸ್ತಾಂತರಿಸುವ ತನ್ನ ಯೋಜನೆಯನ್ನು ಹೈಕಮಾಂಡ್ ಬಹಳ ಚಾಣಾಕ್ಷತೆಯಿಂದ ಕಾರ್ಯಗತಗೊಳಿಸಿದೆ. ಯಾವುದೇ ಹೈಡ್ರಾಮಾ ಅಥವಾ ಪಕ್ಷವನ್ನು ಇಕ್ಕಟ್ಟಿಗೆ ಸಿಲುಕಿಸುವಂತಹ ಬೇಡಿಕೆಗಳು ಎದುರಾಗದೇ, ಸಿದ್ದರಾಮಯ್ಯ ಅವರ ನಿರ್ಗಮನ ಗೌರವಯುತವಾಗಿರುವಂತೆ ನೋಡಿಕೊಳ್ಳುವಲ್ಲಿಯೂ ಹೈಕಮಾಂಡ್ ಯಶಸ್ವಿಯಾಗಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಕೇರಳಂ ಗೆಲುವೂ ಕಾರಣ

ಮುಖ್ಯಮಂತ್ರಿ ಹುದ್ದೆಗೇರಿದ ನಂತರದ ದಿನಗಳಲ್ಲಿ, 'ಅಧಿಕಾರ ಹಂಚಿಕೆ ಕುರಿತು ಒಪ್ಪಂದ' ಆಗಿರುವುದನ್ನು ಸಿದ್ದರಾಮಯ್ಯ ನಿರಾಕರಿಸುತ್ತಲೇ ಬಂದರು. ರಾಜಸ್ಥಾನ ಮತ್ತು ಛತ್ತೀಸಗಢದಲ್ಲಿ ಮುಖ್ಯಮಂತ್ರಿಯವರನ್ನು ಬದಲಾಯಿಸುವಲ್ಲಿ ಪಕ್ಷದ ಹೈಕಮಾಂಡ್ ವಿಫಲವಾಗಿದ್ದನ್ನೇ ನೆಚ್ಚಿಕೊಂಡಿದ್ದ ಅವರು, ತಮ್ಮನ್ನು ಬದಲಾಯಿಸುವುದಿಲ್ಲ ಎಂದೇ ನಂಬಿದ್ದರು.

ಆದರೆ, ಕೇರಳಂ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್‌ಗೆ ಸಿಕ್ಕ ಗೆಲುವು ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆ ಕುರಿತು ದಿಟ್ಟ ಕ್ರಮ ತೆಗೆದುಕೊಳ್ಳುವಂತೆ ಪಕ್ಷದ ವರಿಷ್ಠರಿಗೆ ಬಲ ತಂದುಕೊಟ್ಟಿತು ಎಂದು ಮೂಲಗಳು ಹೇಳಿವೆ.

'ಛತ್ರ ಸಿಕ್ಕಾಗ ಮದುವೆಯಾಗಬೇಕು; ಅದೇ ಶುಭ ಗಳಿಗೆ'

ಪ್ರಜಾವಾಣಿ ವಾರ್ತೆ

ತಿಪಟೂರು (ತುಮಕೂರು): 'ರಾಜಕೀಯ ವಿಚಾರದಲ್ಲಿ ನಾವು ತಲೆ ಹಾಕುವುದಿಲ್ಲ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮಠದಿಂದ ಧರ್ಮಧ್ವಜ ನೀಡಿ ಮಾನವ ಧರ್ಮಕ್ಕೆ ಜಯವಾಗಲಿ ಎಂಬ ಆಶಯದಿಂದ ಆಶೀರ್ವಾದ ಮಾಡಲಾಗಿದೆ' ಎಂದು ನೊಣವಿನಕೆರೆ ಕಾಡಸಿದ್ದೇಶ್ವರ ಮಠದ ಕರಿವೃಷಭ ದೇಶಿಕೇಂದ್ರ ಶಿವಯೋಗೀಶ್ವರ ಸ್ವಾಮೀಜಿ ಹೇಳಿದ್ದಾರೆ.

ಶಿವಯೋಗೀಶ್ವರ ಸ್ವಾಮೀಜಿ

> **ಡಿ.ಕೆ. ಶಿವಕುಮಾರ್ ಅವರ ಇಷ್ಟಾರ್ಥ ನೆರವೇರಿದೆ. ಅವರ ಭಕ್ತಿಗೆ ಫಲ ಸಿಕ್ಕಿದೆ. ರಾಜಾ ಪ್ರತ್ಯಕ್ಷ ದೇವರು. ಹಾಗಾಗಿ ಅವರಿಗೆ ಮಠದಿಂದ ಧರ್ಮದ ಧ್ವಜ ಕೊಟ್ಟಿದ್ದೇವೆ**
> **ಶಿವಯೋಗೀಶ್ವರ ಸ್ವಾಮೀಜಿ,** ನೊಣವಿನಕೆರೆ ಕಾಡಸಿದ್ದೇಶ್ವರ ಮಠದ ಕರಿವೃಷಭ ದೇಶಿಕೇಂದ್ರ

ಗುರುವಾರ ಮಠದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಮಯಕ್ಕೆ ತಕ್ಕಂತೆ ಎಲ್ಲರ ಸೇವೆಯೂ ರಾಜ್ಯಕ್ಕೆ ಸಿಗಲಿ. ಮುಂದಿನ ಎರಡು ವರ್ಷ ಉತ್ತಮ ಸಮಯವಿದೆ. ಡಿ.ಕೆ ಶಿವಕುಮಾರ್ ರೈತರು ಹಾಗೂ ಬಡವರ ನಾಯಕನಾಗಿ ಹೊರಹೊಮ್ಮಲಿ ಎಂದು ಆಶಯ ವ್ಯಕ್ತಪಡಿಸಿದರು.

ಮುಂದಿನ ಮುಖ್ಯಮಂತ್ರಿ ಪ್ರಮಾಣ ವಚನ ಕುರಿತು ಪ್ರತಿಕ್ರಿಯಿಸಿದ ಅವರು, 'ಛತ್ರ ಸಿಕ್ಕಾಗ ಮದುವೆಯಾಗಬೇಕು. ಡಾಕ್ಟರ್ ಸಿಕ್ಕಾಗ ಡೆಲಿವರಿ ಮಾಡಿಸಿಕೊಳ್ಳಬೇಕು. ಅದೇ ಶುಭ ಗಳಿಗೆ. ಅವರಿಗೆ ಅನುಕೂಲವಾಗುವ ಸಮಯದಲ್ಲಿ ಅವರು ಪ್ರಮಾಣ ವಚನ ಸ್ವೀಕರಿಸುತ್ತಾರೆ. ಈ ವಿಷಯದಲ್ಲಿ ನಾವು ಅವರಿಗೆ ಯಾವುದೇ ಸಮಯ ನೀಡಿಲ್ಲ' ಎಂದರು.

ಗುರುತಿಸಿಕೊಳ್ಳಲು ಬೇಕಿದೆ ದೊಡ್ಡ ಹಿಟ್

ಕಾಜಲ್

• ಅಭಿಲಾಷ್ ಪಿ.ಎಸ್.

'ಪೆಪೆ', 'ಲೈನ್‌ಮ್ಯಾನ್', 'ಬಿಳಿಚುಕ್ಕಿ ಹಳ್ಳಿಹಕ್ಕಿ' ಹೀಗೆ ವಿಷಯಾಧರಿತ ಸಿನಿಮಾಗಳಲ್ಲಿ ನಟಿಸಿ ಸೈ ಎನಿಸಿಕೊಂಡಿರುವ ನಟಿ ಕಾಜಲ್ ಕುಂದರ್ ಸದ್ಯ ಸಂಚಿತ್ ಮುಖ್ಯಭೂಮಿಕೆಯಲ್ಲಿರುವ 'ಮ್ಯಾಂಗೋ ಪಚ್ಚ' ಸಿನಿಮಾ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ. ಈ ಸಿನಿಮಾ ಜೂನ್ 5ರಂದು ತೆರೆಕಾಣಲಿದ್ದು, ಈ ಹೊಸ್ತಿಲಲ್ಲಿ ತಮ್ಮ ಸಿನಿಪಯಣ, ನಿರೀಕ್ಷೆಗಳ ಬಗ್ಗೆ ಕಾಜಲ್ ಮಾತನಾಡಿದ್ದಾರೆ.

'ನಾನು ಮಂಗಳೂರಿನವಳು. ಹುಟ್ಟಿ ಬೆಳೆದದ್ದು ಮುಂಬೈನಲ್ಲಿ' ಎಂದು ಮಾತು ಆರಂಭಿಸಿದ ಕಾಜಲ್, 'ಮುಂಬೈನಿಂದ ಇಲ್ಲಿಗೆ ಬಂದು ಬಣ್ಣದ ಲೋಕದ ಪಯಣ ಆರಂಭಿಸಿದಾಗ ಹಲವು ಸವಾಲುಗಳು ಇದ್ದವು. ಆರಂಭದಲ್ಲಿ ಭಾಷೆಯೇ ದೊಡ್ಡ ಸವಾಲಾಯಿತು. ಪರೀಕ್ಷೆಗೆ ತಯಾರಾದಂತೆ ಸಂಭಾಷಣೆಗಳನ್ನು ಬಾಯಿಪಾಠ ಮಾಡುತ್ತಿದ್ದೆ. ನಂತರದಲ್ಲಿ ನನ್ನ ಸ್ನೇಹಿತರ ಜೊತೆ ಕನ್ನಡದಲ್ಲೇ ಮಾತನಾಡುತ್ತಾ ಭಾಷೆ ಸ್ಪಷ್ಟವಾಯಿತು. ಇದೀಗ ನಿರರ್ಗಳವಾಗಿ ಕನ್ನಡ ಮಾತನಾಡಬಲ್ಲೆ. ಒಂದು ಊರಿನಿಂದ ಇನ್ನೊಂದು ಊರಿಗೆ ಹೋದಾಗ ಅಲ್ಲಿನ ಸಂಸ್ಕೃತಿಯೂ ಬದಲಾಗುತ್ತದೆ. ಇಲ್ಲಿನ ವರಮಹಾಲಕ್ಷ್ಮಿ ಪೂಜೆಯು ಮುಂಬೈನಲ್ಲಿ ಇರಲಿಲ್ಲ. ಈ ಹಬ್ಬ ನಮ್ಮ ಸಿನಿಮಾ ಕ್ಷೇತ್ರಕ್ಕೆ ದೊಡ್ಡ ಹಬ್ಬ. ಈಗ ಪ್ರತಿ ವರ್ಷ ಈ ಹಬ್ಬಕ್ಕೆ ಎದುರು ನೋಡುತ್ತಿರುತ್ತೇನೆ' ಎನ್ನುತ್ತಾರೆ ಅವರು.

ಪಾತ್ರದ ಮೇಲೆ ಪ್ರಯೋಗವಿಷ್ಟ

'ರಂಗ ಕಲಾವಿದೆಯಾಗಿದ್ದ ನಾನು ನೃತ್ಯವನ್ನು ಅಭ್ಯಾಸ ಮಾಡಿದ್ದೇನೆ. 'ಹರಹರ ಮಹಾದೇವ್' ಧಾರಾವಾಹಿ ಮೂಲಕ ಕಿರುತೆರೆಯ ಪಯಣ ಆರಂಭಿಸಿ ಸಣ್ಣಪುಟ್ಟ ಪಾತ್ರಗಳ ಮೂಲಕ ಬೆಳ್ಳಿತೆರೆಗೆ ಬಂದೆ. ನಾಯಕಿಯಾಗಿ 'ಮಾಯಾ ಕನ್ನಡಿ' ಮೊದಲ ಸಿನಿಮಾ. ಬಂದಂತಹ ಅವಕಾಶಗಳಲ್ಲಿ ಕಥೆಗಳನ್ನು ಸೂಕ್ಷ್ಮವಾಗಿ ಕೇಳುತ್ತಿದ್ದೆ. ಆ ಕಥೆಗೆ ನನ್ನ ಪಾತ್ರವು ಬೀರುತ್ತಿದ್ದ ಪ್ರಭಾವವೇನು ಎನ್ನುವುದನ್ನು ಗಮನಿಸುತ್ತಿದ್ದೆ. ಕಥೆ ಹಾಗೂ ಪಾತ್ರವು ನನ್ನನ್ನು ಸೆಳೆದರಷ್ಟೇ ಸಿನಿಮಾವನ್ನು ಆಯ್ಕೆ ಮಾಡುವ ಪರಿಪಾಟ ನನ್ನದು. ಸಿನಿಮಾದೊಳಗೆ ಹೆಸರಿಗೋಸ್ಕರವಷ್ಟೇ ಪಾತ್ರಗಳು ಇದ್ದರೆ ಒಪ್ಪುವುದಿಲ್ಲ. ಹಲವು ಕಥೆಗಳನ್ನು ಈ ಕಾರಣದಿಂದಾಗಿಯೇ ತಿರಸ್ಕರಿಸಿದ್ದೇನೆ. ಪಾತ್ರಗಳ ಮೇಲೆ ಮಾಡುವ ಪ್ರಯೋಗಗಳು ನನ್ನನ್ನು ಸೆಳೆಯುತ್ತವೆ. ಅಂತಹ ಪಾತ್ರದ ಬರವಣಿಗೆ ಆಳವಾಗಿರಬೇಕು. ಗಟ್ಟಿಯಾದ ಕಥೆಗಳು ಸಿಕ್ಕರೆ ಕಣ್ಮುಚ್ಚಿ ಒಪ್ಪಿಕೊಳ್ಳುತ್ತೇನೆ' ಎನ್ನುತ್ತಾರೆ ಕಾಜಲ್.

'ಪ್ರತಿಯೊಂದು ಸಿನಿಮಾದಲ್ಲಿ ನಾನು ನಟಿಯಾಗಿ ಪಳಗುತ್ತಾ ಬಂದಿದ್ದೇನೆ. ಮಾಡಿದ ಪ್ರತಿಯೊಂದು ಪಾತ್ರಗಳೂ ಭಿನ್ನವಾಗಿತ್ತು. ಹೀಗಾಗಿ ನನ್ನ ಸಿನಿಮಾ ಜಾನರ್‌ಗಳೂ ವಿಧವಿಧವಾಗಿ ಕಾಣುತ್ತವೆ. ಕನ್ನಡ ಚಿತ್ರರಂಗಕ್ಕೆ 'ಕಾಜಲ್ ಕುಂದರ್' ಎಂಬ ಹೆಸರಿನ ಪರಿಚಯ ಆಗಿದೆ. 'ಈಕೆ ಭಿನ್ನವಾದ ಪಾತ್ರಗಳನ್ನು ನಿಭಾಯಿಸಬಲ್ಲಳು' ಎನ್ನುವ ಮಾತುಗಳನ್ನೂ ಕೇಳಿದ್ದೇನೆ. ಆದರೆ ಜನರ ಮನಸ್ಸಿನಲ್ಲಿ ಉಳಿಯುವಂಥ ಪಾತ್ರ, ಸಿನಿಮಾಗಳು ಇನ್ನೂ ಸಿಕ್ಕಿಲ್ಲ. ನಾನು ಮಾಡಿದ ಒಂದು ಸಿನಿಮಾ ಜನರಿಗೆ ತಲುಪಿ ಅವರು ನನ್ನನ್ನು ಗುರುತಿಸುವಂತಾಗಬೇಕು ಎನ್ನುವ ನಿರೀಕ್ಷೆ, ಆಸೆ ಇದೆ. ಒಂದು ಸಿನಿಮಾ ದೊಡ್ಡಮಟ್ಟದಲ್ಲಿ ಹಿಟ್ ಆದಾಗ ಇದು ಸಾಧ್ಯವಾಗಲಿದೆ. 'ಮ್ಯಾಂಗೋ ಪಚ್ಚ'ದಲ್ಲಿ ನಾನು 'ಸುಜಿ' ಎಂಬ ಪಾತ್ರ ಮಾಡಿದ್ದು, ಈ ಸಿನಿಮಾ ನನ್ನ ನಿರೀಕ್ಷೆಯನ್ನು ಪೂರ್ಣಗೊಳಿಸಲಿದೆ ಎನ್ನುವ ಭರವಸೆ ಇದೆ' ಎಂದರು.

'ಗ್ಲಾಮರ್–ಡಿಗ್ಲಾಮರ್‌ನಲ್ಲಿ ಆಯ್ಕೆ ಎಂದೇನಿಲ್ಲ. ಪಾತ್ರ ಏನು ಬಯಸುತ್ತದೋ ಹಾಗೆ ನಾನು ಸಿದ್ಧಳಾಗುತ್ತೇನೆ. ಕನ್ನಡದ ಜೊತೆಗೆ ತೆಲುಗು ಚಿತ್ರರಂಗದಿಂದಲೂ ಆಫರ್‌ಗಳು ಬಂದಿವೆ. ಆದರೆ ಯಾವುದೂ ಆಕರ್ಷಿಸಲಿಲ್ಲ. ಆಫರ್‌ಗಳು ಬಂದಿವೆ ಎಂದ ಮಾತ್ರಕ್ಕೆ ಅಲ್ಲಿಗೆ ಹೋಗಲ್ಲ. ಒಳ್ಳೆಯ ಪಾತ್ರಗಳು ಸಿಕ್ಕರಷ್ಟೇ ಅತ್ತ ಹೆಜ್ಜೆಗಳನ್ನು ಇಡುತ್ತೇನೆ' ಎನ್ನುತ್ತಾ ಮಾತಿಗೆ ವಿರಾಮವಿತ್ತರು ಕಾಜಲ್.

ದ್ವಿತೀಯಾರ್ಧದಲ್ಲಿ ಮದರ್ ಪ್ರಾಮಿಸ್ ಬರ್ತೀವಿ!

ಧನಂಜಯ ಪೂರ್ಣಚಂದ್ರ ಶ್ರೀವತ್ಸ

ನಾಗಭೂಷಣ್

'ರೋಸ್ಟಿ', 'ದೊನ್ನೆ ಬಿರಿಯಾನಿ', 'ರ್‍ಯಾಂಡಿ', 'ಕೇಬಲ್', 'ಮ್ಯಾಗಿ', '7ಅಪ್', 'ಎಸ್‌ಎಂಎಸ್', 'ಮನು', 'ಬ್ಯಾಂಡ್ ಏಡ್', 'ಜಿಲೇಬಿ', 'ಅನಾರ್ಕಲಿ', 'ಗುಲ್ಕನ್', 'ಬ್ಲುಟೂತ್'....

ಇದ್ಯಾವುದೂ ಅಂಗಡಿಯಲ್ಲಿ, ಬೇಕರಿಯಲ್ಲಿ ಸಿಗೋ ವಸ್ತುಗಳಲ್ಲ. ಇವು ಪೂರ್ಣಚಂದ್ರ ಮೈಸೂರು ನಿರ್ದೇಶನದ 'ಮದರ್ ಪ್ರಾಮಿಸ್' ಸಿನಿಮಾದೊಳಗಿನ ಪಾತ್ರಗಳ ಹೆಸರು. 'ಆರ್ಕೆಸ್ಟ್ರಾ ಮೈಸೂರು', 'ಬಡವ ರಾಸ್ಕಲ್', 'ಮರ್ಯಾದೆ ಪ್ರಶ್ನೆ', 'ಎಕ್ಕ' ಮುಂತಾದ ಸಿನಿಮಾಗಳಲ್ಲಿ ನಟಿಸಿರುವ ಪೂರ್ಣಚಂದ್ರ ಮೈಸೂರು ತಮ್ಮ ನಿರ್ದೇಶನದ ಚೊಚ್ಚಲ ಸಿನಿಮಾದ 'ಗ್ಯಾಂಗ್‌ಸ್ಟರ್'ಗಳನ್ನು ಪರಿಚಯಿಸಿದ್ದಾರೆ. 'ಗ್ಯಾಂಗ್‌ಸ್ಟರ್ ಕಾಮಿಡಿ' ಜಾನರ್‌ನಲ್ಲಿರುವ ಈ ಸಿನಿಮಾದ ಪಾತ್ರಗಳನ್ನು ಚಿತ್ರತಂಡ ಭಿನ್ನವಾಗಿ ಪರಿಚಯಿಸಿದೆ. ಧನಂಜಯ, ನಾಗಭೂಷಣ್, ಶ್ರೀವತ್ಸ, ಗುರುದತ್ ಸೇರಿದಂತೆ ಪ್ರತಿ ಪಾತ್ರಕ್ಕೂ ಹೊಸ ಲುಕ್ ನೀಡಿದ್ದಾರೆ ಪೂರ್ಣ.

'ಸಿನಿಮಾದ ಮೊದಲ ಪೋಸ್ಟರ್‌ನಲ್ಲೇ ಕಥೆಯೊಳಗಿರುವ ಪಾತ್ರಗಳೆಲ್ಲವನ್ನೂ ತೋರಿಸಿದ್ದೆವು. ಶಾಲೆಯ ಕೊನೆಯ ದಿನ ಎಲ್ಲಾ ವಿದ್ಯಾರ್ಥಿಗಳು ಒಂದೆಡೆ ಸೇರಿದಂತೆ ಆ ಚಿತ್ರವಿತ್ತು. ಈ ಪಾತ್ರಗಳೆಲ್ಲವೂ ಮುಖ್ಯವಾದುದ್ದೇ. ಕಥೆಗೆ ಇವರೆಲ್ಲರೂ ಒಂದಲ್ಲಾ ಒಂದು ರೀತಿಯಲ್ಲಿ ಪರಿಣಾಮ ಬೀರುತ್ತಾರೆ. ಈ ಹಾಸ್ಯಭರಿತ ಸಿನಿಮಾವನ್ನು ಮಕ್ಕಳೂ ನೋಡಬಹುದು. ಮನರಂಜನಾತ್ಮಕವಾಗಿ ತೋರಿಸಿದರೆ ಜನರ ಮನಸ್ಸಿನಲ್ಲೂ ಸಿನಿಮಾ ಉಳಿಯಲಿದೆ. ಪ್ರತಿ ಪಾತ್ರದ ಹೆಸರುಗಳೂ ವಿಭಿನ್ನವಾಗಿವೆ. ಇದೊಂದು ಕಲ್ಪನಾ ಲೋಕವಾಗಿದ್ದು, ಪಾತ್ರಗಳು ಸೇರಿದಂತೆ ಹೆಸರೂ ಸಾಮಾನ್ಯವಾಗಿಲ್ಲ. ಪ್ರತಿ ಪಾತ್ರಗಳೂ ನೀಡಿದ ಭರವಸೆಗಳೆಷ್ಟು? ಅವುಗಳಲ್ಲಿ ಎಷ್ಟನ್ನು ಉಳಿಸಿಕೊಂಡಿವೆ ಎನ್ನುವುದನ್ನು ನಾವು ಹೇಳಿದ್ದೇವೆ. ಇದು ಪಾತ್ರದ ಗುಣಲಕ್ಷಣಗಳನ್ನೂ ಹೇಳುತ್ತದೆ' ಎಂದಿದ್ದಾರೆ ಪೂರ್ಣಚಂದ್ರ.

'ನಿರ್ಮಾಪಕರು ಶೀಘ್ರದಲ್ಲೇ ಸಿನಿಮಾ ಬಿಡುಗಡೆ ದಿನಾಂಕವನ್ನು ಘೋಷಿಸುತ್ತಾರೆ. 'ಮದರ್ ಪ್ರಾಮಿಸ್' ಈ ವರ್ಷದ ದ್ವಿತೀಯಾರ್ಧದಲ್ಲೇ ಬರುತ್ತೇವೆ' ಎನ್ನುತ್ತಾರೆ ಅವರು.

'ಹಲ್ಕಾ ಡಾನ್' ಎದುರು ಜಾನ್

ಜಾನ್ ವಿಜಯ್

'ರತ್ನನ್ ಪ್ರಪಂಚ' ಖ್ಯಾತಿಯ ಪ್ರಮೋದ್ ನಟನೆಯ 'ಹಲ್ಕಾ ಡಾನ್' ಸಿನಿಮಾಗೆ ಜಾನ್ ವಿಜಯ್ ಸೇರ್ಪಡೆಯಾಗಿದ್ದಾರೆ.

'ಟಗರು', 'ಸಲಗ' ಹಾಗೂ 'ಯುಐ' ಚಿತ್ರಗಳನ್ನು ನಿರ್ಮಿಸಿರುವ ಕೆ.ಪಿ.ಶ್ರೀಕಾಂತ್ ನಿರ್ಮಾಣದ ಈ ಚಿತ್ರದ ಶೂಟಿಂಗ್ ಸದ್ಯ ಪ್ರಗತಿಯಲ್ಲಿದೆ. ತಮಿಳು, ತೆಲುಗು ಹಾಗೂ ಹಿಂದಿಯ ಸಾಕಷ್ಟು ಸಿನಿಮಾಗಳಲ್ಲಿ ಅಭಿನಯಿಸಿರುವ ಜಾನ್ ವಿಜಯ್ 'ಹಲ್ಕಾ ಡಾನ್' ಸಿನಿಮಾ ಮೂಲಕ ಕನ್ನಡಕ್ಕೆ ಮರಳಿದ್ದಾರೆ. ಈ ಹಿಂದೆ 'ಪೃಥ್ವಿ' ಹಾಗೂ 'ಗಜಕೇಸರಿ' ಸಿನಿಮಾಗಳಲ್ಲಿ ಅವರು ನಟಿಸಿದ್ದರು. ಚಿತ್ರತಂಡವು ಸ್ಪೆಷಲ್ ಪೋಸ್ಟರ್ ಮೂಲಕ ಜಾನ್ ವಿಜಯ್ ಅವರನ್ನು ಸ್ವಾಗತಿಸಿದೆ. ರಗಡ್ ಲುಕ್‌ನಲ್ಲಿ ಅವರಿಲ್ಲಿ ಕಾಣಿಸಿಕೊಂಡಿದ್ದಾರೆ.

ವೀನಸ್ ಎಂಟರ್‌ಟೈನರ್ ಬ್ಯಾನರ್ ಅಡಿಯಲ್ಲಿ ಮೂಡಿಬರುತ್ತಿರುವ ನಾಲ್ಕನೇ ಚಿತ್ರ ಇದಾಗಿದ್ದು, ಚಲ ಈ ಸಿನಿಮಾವನ್ನು ನಿರ್ದೇಶಿಸುತ್ತಿದ್ದಾರೆ. ಪ್ರಮೋದ್‌ಗೆ ಜೋಡಿಯಾಗಿ ಅಮೃತಾ ಅಯ್ಯಂಗಾರ್ ನಟಿಸುತ್ತಿದ್ದು, ಸಾಯಿಕುಮಾರ್ ಅತಿಥಿ ಪಾತ್ರದಲ್ಲಿದ್ದಾರೆ. ಕನ್ನಡ ಹಾಗೂ ತೆಲುಗಿನಲ್ಲಿ ಏಕಕಾಲಕ್ಕೆ ಈ ಸಿನಿಮಾ ನಿರ್ಮಾಣವಾಗುತ್ತಿದೆ. ವಿ.ಹರಿಕೃಷ್ಣ ಸಂಗೀತ, ಸತ್ಯ ಹೆಗಡೆ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಪ್ರಜಾವಾಣಿ ಸಿನಿ ಸಮ್ಮಾನ: ನಾಮನಿರ್ದೇಶಿತರು

4ನೇ ಆವೃತ್ತಿ
ಜೂನ್ 19ಕ್ಕೆ

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ' 4ನೇ ಆವೃತ್ತಿಗೆ ದಿನಗಣನೆ ಶುರುವಾಗಿದೆ. 2025ನೇ ಸಾಲಿನ ಪ್ರಶಸ್ತಿಗಳಿಗೆ ನಾಮನಿರ್ದೇಶನಗೊಂಡವರ ವಿವರಗಳನ್ನು ತಿಳಿಸುವ ಸಮಯ ಇದು. 15 ವಿಭಾಗಗಳಲ್ಲಿ ಪ್ರತಿಭಾವಂತರನ್ನು ಆಯ್ಕೆ ಮಾಡಲು ಪರಿಣತರ ತಂಡವು ನಾಮನಿರ್ದೇಶನಗಳನ್ನು ಮಾಡಿದೆ. ಇಲ್ಲಿ ಅತ್ಯುತ್ತಮ ಚೊಚ್ಚಲ ನಿರ್ದೇಶನ, ಅತ್ಯುತ್ತಮ ಪೋಷಕ ನಟ, ಅತ್ಯುತ್ತಮ ಪೋಷಕ ನಟ, ಅತ್ಯುತ್ತಮ ಚಿತ್ರಕಥೆ ಹಾಗೂ ಅತ್ಯುತ್ತಮ ಸಂಗೀತ ನಿರ್ದೇಶನ ವಿಭಾಗದ ನಾಮನಿರ್ದೇಶಿತರ ಹೆಸರು/ಸಿನಿಮಾಗಳನ್ನು ಇಲ್ಲಿ ಪ್ರಕಟಿಸಲಾಗಿದೆ. ಇನ್ನಷ್ಟು ವಿಭಾಗಗಳಲ್ಲಿ ನಾಮನಿರ್ದೇಶಿತರ ಹೆಸರುಗಳನ್ನು ಹಂತ ಹಂತವಾಗಿ ಪ್ರಕಟಿಸಲಾಗುವುದು.

'ಸಿನಿ ಸಮ್ಮಾನ'ದ ಇನ್ನಷ್ಟು ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಅತ್ಯುತ್ತಮ ಚೊಚ್ಚಲ ನಿರ್ದೇಶನ

- **ಜೆ.ಪಿ.ತೂಮಿನಾಡು** – ಸು ಫ್ರಮ್ ಸೋ
- **ಸುಮಂತ್ ಭಟ್** – ಮಿಥ್ಯ
- **ಅನೀಶ್ ಪೂಜಾರಿ** – ದಸ್ಕತ್
- **ಸಾಗರ್ ಕುಮಾರ್** – ಅನಾಮಧೇಯ ಅಶೋಕ್ ಕುಮಾರ್
- **ಹಯವದನ** – ಎಲ್ಲೋ ಜೋಗಪ್ಪ ನಿನ್ನರಮನೆ
- **ಅಭಿಷೇಕ್ ಎಂ.** – ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ
- **ರಕ್ಷಿತ್ ಕುಮಾರ್** – ಜಂಗಲ್ ಮಂಗಲ್

ಅತ್ಯುತ್ತಮ ಪೋಷಕ ನಟ

CASAGRAND building aspirations
Presents
ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

- **ಹರ್ಷಿಲ್ ಕೌಶಿಕ್** – ಅನಾಮಧೇಯ ಅಶೋಕ್ ಕುಮಾರ್
- **ಪ್ರಸನ್ನ ಶೆಟ್ಟಿ** – ನಿಮ್ಮ ವಸ್ತುಗಳಿಗೆ ನೀವೇ ಜವಾಬ್ದಾರರು
- **ಶರತ್ ಲೋಹಿತಾಶ್ವ** – ರೋಣ
- **ರಂಗಾಯಣ ರಘು** – S/O ಮುತ್ತಣ್ಣ
- **ಶರತ್ ಲೋಹಿತಾಶ್ವ** – ಎಲ್ಲೋ ಜೋಗಪ್ಪ ನಿನ್ನರಮನೆ
- **ಗುಲ್ಶನ್ ದೇವಯ್ಯ** – ಕಾಂತಾರ: ಅಧ್ಯಾಯ 1
- **ದೀಪಕ್ ರೈ ಪಾಣಾಜೆ** – ಸು ಫ್ರಮ್ ಸೋ
- **ಪೂರ್ಣಚಂದ್ರ ಮೈಸೂರು** – ಎಕ್ಕ

ಅತ್ಯುತ್ತಮ ಪೋಷಕ ನಟಿ

- **ಶ್ರುತಿ** – ಮಾದೇವ
- **ಹರಿಣಿ ಶ್ರೀಕಾಂತ್** – ಎಕ್ಕ
- **ಶ್ರುತಿ ಹರಿಹರನ್** – ದೂರ ತೀರ ಯಾನ
- **ಶ್ರುತಿ**, ಎಕ್ಕ
- **ರೂಪ ವರ್ಕಾಡಿ**, ಮಿಥ್ಯ
- **ವಿದ್ಯಾ ಮೂರ್ತಿ** – ಭಾವ ತೀರ ಯಾನ
- **ಉಮಾ ವೈ.ಜಿ.** – ಹೆಬ್ಬುಲಿ ಕಟ್

ವಿಜೇತರ ಆಯ್ಕೆ ಹೀಗಿರಲಿದೆ...

ಆಯ್ಕೆ ಪ್ರಕ್ರಿಯೆಯು ಪಾರದರ್ಶಕವಾಗಿದ್ದು, ಪರಿಣತರು ನಾಮನಿರ್ದೇಶನಕ್ಕೆ ಆಯ್ಕೆ ಮಾಡಿದವರ ಹೆಸರುಗಳನ್ನು ಮುಖ್ಯ ತೀರ್ಪುಗಾರರು ಅನುಮೋದಿಸಿದ್ದಾರೆ. ನಾಮನಿರ್ದೇಶಿತರಾದವರಲ್ಲಿ ಒಬ್ಬರನ್ನು ಚಿತ್ರರಂಗದ ವಿವಿಧ ಸಂಘ-ಸಂಸ್ಥೆಗಳ ಒಂದು ಸಾವಿರಕ್ಕೂ ಹೆಚ್ಚು ಸದಸ್ಯರು ವೋಟ್ ಮೂಲಕ ಆಯ್ಕೆ ಮಾಡಲಿದ್ದಾರೆ.

ಅತ್ಯುತ್ತಮ ಚಿತ್ರಕಥೆ

- **ಅರ್ಜುನ್ ಜನ್ಯ** – 45
- **ಪುನೀತ್ ರಂಗಸ್ವಾಮಿ** – ಏಳುಮಲೆ
- **ಆಯುಷ್ ಮಲ್ಲಿ** – ಪಪ್ಪಿ
- **ಕುಲ್‌ದೀಪ್ ಕಾರಿಯಪ್ಪ** – ನೋಡಿದವರು ಏನಂತಾರೆ
- **ಸಾಗರ್ ಕುಮಾರ್** – ಅನಾಮಧೇಯ ಅಶೋಕ್ ಕುಮಾರ್
- **ಚೇತನ ತೀರ್ಥಹಳ್ಳಿ** – ದೂರ ತೀರ ಯಾನ
- **ಪ್ರತಾಪ್ ಗಂಧರ್ವ** – ಕಂಗ್ರಾಜುಲೇಷನ್ಸ್ ಬ್ರದರ್

ಅತ್ಯುತ್ತಮ ಸಂಗೀತ ನಿರ್ದೇಶನ



- **ಮಿದುನ್ ಮುಕುಂದನ್** – ಮಿಥ್ಯ
- **ಅಜನೀಶ್ ಲೋಕನಾಥ್** – ಕಾಂತಾರ: ಅಧ್ಯಾಯ 1
- **ಚರಣ್ ರಾಜ್** – ಎಕ್ಕ
- **ಸುಮೇದ್ ಕೆ.** – ಸು ಫ್ರಮ್ ಸೋ
- **ವಿ.ಹರಿಕೃಷ್ಣ** – ಮನದ ಕಡಲು
- **ಅರ್ಜುನ್ ಜನ್ಯ** – ಬ್ರ್ಯಾಟ್
- **ರೋಣದ ಬಕ್ಕೇಶ್, ಕಾರ್ತಿಕ್ ಚೆನ್ನೋಜಿ ರಾವ್** – ದೂರ ತೀರ ಯಾನ
- **ರಾಘವೇಂದ್ರ ವಿ.** – ಅಂದೊಂದಿತ್ತು ಕಾಲ

ವಿದ್ಯಾರ್ಥಿ ಕೊರತೆ: 458 ಕೋರ್ಸ್ ರದ್ದು

ಕಲಾ ವಿಭಾಗದ ಕೆಲವು ಕೋರ್ಸ್‌ಗಳಿಗೆ ಬೇಡಿಕೆ ಕುಸಿತ

• ಆರ್ಥಿಕ ಹೊರೆ ತಗ್ಗಿಸಲು ಕಾಲೇಜು ಶಿಕ್ಷಣ ಇಲಾಖೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ ಕೊರತೆಯ ಕಾರಣ ಸುಮಾರು 458 ಕೋರ್ಸ್‌ಗಳನ್ನು ಕಾಲೇಜು ಶಿಕ್ಷಣ ಇಲಾಖೆ ರದ್ದು ಮಾಡಿದೆ.

ಮುಖ್ಯವಾಗಿ ಕಲಾ ವಿಭಾಗದ ಕೆಲವು ಕೋರ್ಸ್‌ಗಳಿಗೆ ಬೇಡಿಕೆ ಗಣನೀಯವಾಗಿ ಕುಸಿದಿದೆ. ಕಾಲೇಜು ಶಿಕ್ಷಣ ಇಲಾಖೆಯ ಮಾಹಿತಿಯ ಪ್ರಕಾರ ರಾಜಕೀಯ ವಿಜ್ಞಾನ, ಅರ್ಥಶಾಸ್ತ್ರ, ಐಚ್ಛಿಕ ಕನ್ನಡ, ಸಮಾಜಶಾಸ್ತ್ರ ಸೇರಿದಂತೆ ಹಲವು ಕೋರ್ಸ್‌ಗಳ ಸಂಯೋಜನೆಗಳಿಗೆ ಬೇಡಿಕೆ ಕುಸಿದಿದೆ. ಮೂರನೇ ಹಂತದ ನಗರಗಳಲ್ಲಿ ಕಂಪ್ಯೂಟರ್ ಸೈನ್ಸ್‌ಗೂ ಬೇಡಿಕೆ ಕಡಿಮೆಯಾಗಿದೆ.

‘2025–26ನೇ ಶೈಕ್ಷಣಿಕ ವರ್ಷದಲ್ಲಿ 1,091 ಕೋರ್ಸ್‌ಗಳ ಸಂಯೋಜನೆಗಳಿಗೆ ವಿದ್ಯಾರ್ಥಿಗಳು ಪ್ರವೇಶವನ್ನೇ ಪಡೆದಿರಲಿಲ್ಲ. 190 ಸಂಯೋಜನೆಗಳಿಗೆ ಅತ್ಯಂತ ಕಡಿಮೆ ದಾಖಲಾತಿ ಇತ್ತು. ರಸಾಯನ ವಿಜ್ಞಾನ, ಕಂಪ್ಯೂಟರ್ ಸೈನ್ಸ್, ಭೌತವಿಜ್ಞಾನ ಮತ್ತು ಗಣಿತದಂತಹ ಕೋರ್ಸ್‌ಗಳಿಗೂ ಕೆಲವು ಕಾಲೇಜುಗಳಲ್ಲಿ ದಾಖಲಾತಿ ಇಲ್ಲ. ಬೇಡಿಕೆ ಇಲ್ಲದ ಕೋರ್ಸ್‌ಗಳನ್ನು ಮುಂದುವರಿಸುವುದು ಸರ್ಕಾರಕ್ಕೆ ಭವಿಷ್ಯದಲ್ಲಿ ಆರ್ಥಿಕ ಭಾರವಾಗಲಿದೆ’ ಎಂದು ಕೋರ್ಸ್‌ಗಳನ್ನು ರದ್ದು ಮಾಡುವ ತನ್ನ ನಿರ್ಧಾರವನ್ನು ಸರ್ಕಾರ ಸಮರ್ಥಿಸಿಕೊಂಡಿದೆ.

ಬಿ.ಎ, ಬಿ.ಎಸ್‌ಸಿ ಹಾಗೂ ಸಮಾಜ ಕಾರ್ಯ, ಕೌಶಲ ಮತ್ತು ಉದ್ಯೋಗಾಧಾರಿತ ವಿಷಯಗಳ 230 ಹೊಸ ಕೋರ್ಸ್‌ಗಳನ್ನು ಆರಂಭಿಸಲು ಸರ್ಕಾರ ಅನುಮತಿ ನೀಡಿದೆ. ಕೆಲವು ಕೋರ್ಸ್‌ಗಳಿಗೆ ಬೇಡಿಕೆ ಇರುವ 186ಕ್ಕೂ ಹೆಚ್ಚು ಕಾಲೇಜುಗಳನ್ನು ಗುರುತಿಸಿದ್ದು, ಗರಿಷ್ಠ 100 ವಿದ್ಯಾರ್ಥಿಗಳವರೆಗೆ ಹೆಚ್ಚುವರಿ ಪ್ರವೇಶಕ್ಕೆ ಅವಕಾಶ ನೀಡಲಾಗಿದೆ. 26 ಸರ್ಕಾರಿ ಪದವಿ ಕಾಲೇಜುಗಳಲ್ಲಿ ಬಿಬಿಎ ಹಾಗೂ ಬಿಸಿಎ ಕೋರ್ಸ್‌ಗಳನ್ನು ಆರಂಭಿಸಲು ಕಾಲೇಜು ಶಿಕ್ಷಣ ಇಲಾಖೆ ಅನುಮತಿ ನೀಡಿದೆ.

ಪಿಯು ಉಪನ್ಯಾಸಕರಿಗೆ ‘ಡಯಟ್’ ತರಬೇತಿ: ಆಕ್ಷೇಪ

ಬೆಂಗಳೂರು: ಸರ್ಕಾರಿ ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕರು, ಸಿಬ್ಬಂದಿಗೆ ತರಬೇತಿ ನೀಡಲು ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಇಲಾಖೆ (ಡಿಎಸ್‌ಇಆರ್‌ಟಿ) ಮತ್ತು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳನ್ನು (ಡಯಟ್) ನೋಡಲ್ ಸಂಸ್ಥೆಗಳಾಗಿ ನೇಮಿಸಿರುವ ಆದೇಶ ಹಿಂಪಡೆಯಬೇಕು ಎಂದು ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ ಒತ್ತಾಯಿಸಿದೆ.

‘ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿ ಸಂಪನ್ಮೂಲ ವ್ಯಕ್ತಿಗಳ ಕೊರತೆ ಇದೆ ಎನ್ನುವುದು ವಾಸ್ತವಕ್ಕೆ ದೂರ. ಇಲಾಖೆಯಲ್ಲೇ ಸ್ನಾತಕೋತ್ತರ ಪದವೀಧರರು, ಪಿಎಚ್.ಡಿ ಪಡೆದ ರಾಜ್ಯ, ರಾಷ್ಟ್ರ ಮಟ್ಟದ ಸಂಪನ್ಮೂಲ ವ್ಯಕ್ತಿಗಳು ಸಾಕಷ್ಟು ಸಂಖ್ಯೆಯಲ್ಲಿ ಇದ್ದಾರೆ. ಅವರಿಗೆ ಶಾಲಾ ಶಿಕ್ಷಣ ವ್ಯವಸ್ಥೆಗೆ ಸೀಮಿತವಾಗಿರುವ ಡಿಎಸ್‌ಇಆರ್‌ಟಿ, ಡಯಟ್ ಉಪನ್ಯಾಸಕರಿಂದ ತರಬೇತಿ ನೀಡುವುದು ಅಪಮಾನಕರ ವಿಚಾರ’ ಎಂದು ಸಂಘದ ಅಧ್ಯಕ್ಷ ಎ.ಎಚ್. ನಿಂಗೇಗೌಡ ದೂರಿದ್ದಾರೆ.

‘ಪದವಿಪೂರ್ವ ಶಿಕ್ಷಣ ಇಲಾಖೆಯ ಆದೇಶವು ಪದವಿ ಪೂರ್ವ ಶಿಕ್ಷಣದ ಅಸ್ಮಿತೆ, ಗೌರವದ ಬಗ್ಗೆ ಗಂಭೀರ ಪ್ರಶ್ನೆ ಎತ್ತಿದೆ. ಡಯಟ್ ಉಪನ್ಯಾಸಕರಿಗೆ ಪದವಿ ಪೂರ್ವ ಪಠ್ಯಕ್ರಮದ ವೈಜ್ಞಾನಿಕ ಹಿನ್ನೆಲೆ, ಎನ್‌ಸಿಇಆರ್‌ಟಿ ಆಧಾರಿತ ವಿಷಯದ ವ್ಯಾಪ್ತಿ ಹಾಗೂ ಆಳವಾದ ಅರಿವು ಇರುವುದಿಲ್ಲ. ವಿಷಯದ ಅರಿವಿಲ್ಲದವರು ಪದವಿ ಪೂರ್ವ ಕಾಲೇಜು ಉಪನ್ಯಾಸಕರಿಗೆ ಹೇಗೆ ಬೋಧನೆ, ತರಬೇತಿ ನೀಡಲು ಸಾಧ್ಯ’ ಎಂದು ಪ್ರಶ್ನಿಸಿದ್ದಾರೆ.

‘ಆಧುನಿಕ ಮನಸ್ಥಿತಿ: ಮೌಲ್ಯಕ್ಕೆ ಧಕ್ಕೆ’

ಪ್ರಜಾವಾಣಿ ವಾರ್ತೆ

ಮಂಗಳೂರು: ಆಧುನಿಕ ಮನಸ್ಥಿತಿಯಿಂದಾಗಿ ಪರಿಸರ ಮತ್ತು ಸನಾತನ ಸಂಸ್ಕೃತಿಯಿಂದ ಬಂದಿರುವ ಮೌಲ್ಯಗಳಿಂದ ಜನರು ದೂರವಾಗುತ್ತಿದ್ದಾರೆ ಎಂದು ಮಾತಾ ಅಮೃತಾನಂದಮಯಿ ಹೇಳಿದರು.

ನಗರದ ಬೋಳೂರಿನ ಬ್ರಹ್ಮಸ್ಥಾನಂ ಕ್ಷೇತ್ರದಲ್ಲಿರುವ ಮಾತಾ ಅಮೃತಾನಂದಮಯಿ ಮಠದಲ್ಲಿ ಗುರುವಾರ ಆರಂಭಗೊಂಡ ಸತ್ಸಂಗ ಮತ್ತು ಅಮೃತಾಲಿಂಗನದ ‘ಅಮೃತ ಸಂಗಮ’ದಲ್ಲಿ ಮಾತನಾಡಿದ ಅವರು, ಮನುಷ್ಯನಿಗೆ ಕೋವಿಡ್ ದೊಡ್ಡ ಪಾಠವಾಗಿತ್ತು. ಆದರೆ ಅದರಿಂದ ಯಾರೂ ಏನೂ ಕಲಿಯಲಿಲ್ಲ. ಕಲಿತಿದ್ದರೆ ಇಂದು ಸಮಾಜ ಸುಸ್ಥಿತಿಯಲ್ಲಿ ಇರುತ್ತಿತ್ತು ಎಂದರು.

‘ಮನುಷ್ಯನಿಗೆ ಸಂಧಾನದ ಮೂಲಕ ಸಂಘರ್ಷವನ್ನು ಬಿಡಲು ಅವಕಾಶ ಇದೆ. ಕ್ಷಮಾಗುಣ ಇದ್ದರೆ ಅದು ಸಾಧ್ಯ. ಆದರೆ ಪ್ರಕೃತಿ ಹಾಗಲ್ಲ. ಅದು ಕ್ಷಮೆಯ ಪರ್ಯಾಯ. ಆದರೂ ಕ್ಷಮೆಯ ಕಟ್ಟೆಯೊಡೆದಾಗ ದೊಡ್ಡ ಆಘಾತ ನೀಡುತ್ತದೆ. ಆದ್ದರಿಂದ ಪ್ರಕೃತಿಯನ್ನು ಉಳಿಸಬೇಕು, ಅದನ್ನು ದುರ್ಬಲಗೊಳಿಸಿ ಶಿಕ್ಷೆಯನ್ನು ಕೇಳಿ ಪಡೆಯುವಂತಾಗಬಾರದು’ ಎಂದರು.

‘ಗ್ಯಾಜೆಟ್ ಲೋಕದಲ್ಲಿ ಮುಳುಗುವಂಥ ಆಧುನಿಕ ಮನಸ್ಥಿತಿ ಬದುಕನ್ನೇ ಹಾಳು ಮಾಡುತ್ತಿವೆ. ₹50 ಸಾವಿರ ಬೆಲೆಯ ಮೊಬೈಲ್ ಫೋನ್ ಬಳಸುವ ಮಕ್ಕಳು ಪುಸ್ತಕದಲ್ಲಿರುವ ಜ್ಞಾನವನ್ನು ಕಡೆಗಣಿಸುತ್ತಾರೆ. ಪುಸ್ತಕದ ಬೆಲೆ ಕಡಿಮೆ ಎಂಬುದು ಅವರ ಅಂಬೋಣ. ಆದ್ದರಿಂದ ಬಾಲ್ಯದಲ್ಲೇ ಮೌಲ್ಯಗಳನ್ನು ಕಲಿಸದೇ ಇದ್ದರೆ ಲೋಕ ಕಲ್ಯಾಣ ಸಾಧ್ಯವಿಲ್ಲ’ ಎಂದು ಅವರು ಹೇಳಿದರು.

ಸ್ವಾರ್ಥರಹಿತ ಸನ್ಯಾಸಿ: ದೇಶದಲ್ಲಿ ಸನ್ಯಾಸಿಗಳು ಸಾಕಷ್ಟು ಮಂದಿ ಇದ್ದಾರೆ. ಅವರ ಪೈಕಿ ಬಹುತೇಕರು ಸರ್ಕಾರಗಳಿಂದ ಮತ್ತು ರಾಜಕಾರಣಿಗಳಿಂದ ಏನು ಸಿಗುತ್ತದೆ ಎಂಬುದನ್ನೇ ಎದುರು ನೋಡುತ್ತಿರುತ್ತಾರೆ. ಆದರೆ ಮಾತಾ ಅಮೃತಾನಂದಮಯಿ ಅವರು ಸರ್ಕಾರದ ಜೊತೆಗೂಡಿ ಸಮಾಜಕ್ಕೆ ಒಳಿತಾಗುವ ಕೆಲಸಗಳನ್ನು ಮಾಡುವ ಬಗ್ಗೆ ಯೋಚಿಸುತ್ತಿರುತ್ತಾರೆ. ಹೀಗಾಗಿ ಅವರು ನಿಜಾರ್ಥದ ‘ಅಮ್ಮ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಶ್ಲಾಘಿಸಿದರು.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮತ್ತು ವಿಧಾನಸಭಾಧ್ಯಕ್ಷ ಯು.ಟಿ ಖಾದರ್ ಅವರನ್ನು ಮಾತಾ ಅಮೃತಾನಂದಮಯಿ ಆಶೀರ್ವದಿಸಿದರು. ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ, ಶಾಸಕ ಯಶ್‌ಪಾಲ್ ಸುವರ್ಣ, ಮಂಗಳೂರು ರಾಮಕೃಷ್ಣ ಮಠದ ಜಿತಕಾಮಾನಂದಜಿ ಸ್ವಾಮೀಜಿ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

‘2028ರಲ್ಲಿ ಕಾಂಗ್ರೆಸ್‌ಗೆ 40 ಸ್ಥಾನವೂ ಸಿಗಲ್ಲ’

ಪ್ರಜಾವಾಣಿ ವಾರ್ತೆ

ಲಖನ್ ಜಾರಕಿಹೊಳಿ

ಬೆಳಗಾವಿ: ‘2028ರ ವಿಧಾನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 40 ಸ್ಥಾನಗಳನ್ನೂ ಗೆಲ್ಲುವುದಿಲ್ಲ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಐದು ವರ್ಷ ಪೂರೈಸಬೇಕಿತ್ತು. ಆದರೆ, ಅವರು ರಾಜೀನಾಮೆ ನೀಡಿದ್ದರಿಂದ ಪರಿಸ್ಥಿತಿ ಹದಗೆಡಲಿದೆ’ ಎಂದು ವಿಧಾನ ಪರಿಷತ್ತಿನ ಪಕ್ಷೇತರ ಸದಸ್ಯ ಲಖನ್ ಜಾರಕಿಹೊಳಿ ತಿಳಿಸಿದ್ದಾರೆ.

ವಿಡಿಯೊ ಹೇಳಿಕೆ ಬಿಡುಗಡೆ ಮಾಡಿರುವ ಅವರು, ‘ಯಡಿಯೂರಪ್ಪ ಅವರನ್ನು ಕೆಳಗಿಳಿಸಿ ಬಸವರಾಜ ಬೊಮ್ಮಾಯಿ ಅವರನ್ನು ಮುಖ್ಯಮಂತ್ರಿ ಮಾಡಿದ ಪರಿಣಾಮವನ್ನು ಬಿಜೆಪಿ ಈಗಲೂ ಎದುರಿಸುತ್ತಿದೆ. ಮುಂದೆ ಕಾಂಗ್ರೆಸ್‌ಗೂ ಇದೇ ಪರಿಸ್ಥಿತಿ ಬರಲಿದೆ’ ಎಂದಿದ್ದಾರೆ.

‘ಸಿದ್ದರಾಮಯ್ಯ ರಾಜೀನಾಮೆ ಕಾಂಗ್ರೆಸ್ ಪತನಕ್ಕೆ ಕಾರಣ ಆಗುತ್ತದೆ. ರಾಜ್ಯವೂ ಅಧಃಪತನಕ್ಕೆ ಹೋಗುತ್ತದೆ. ಅಹಿಂದ ಚಳವಳಿಯನ್ನೇ ಹೈಕಮಾಂಡ್ ತುಳಿದು ಹಾಕಿದೆ. ಕಾಂಗ್ರೆಸ್ ಹೈಕಮಾಂಡ್ ನೇರವಾಗಿ ಜೇನುಗೂಡಿಗೆ ಕೈ ಹಾಕಿದೆ. ಸಿದ್ದರಾಮಯ್ಯ ಕಣ್ಣೀರು 2028ಕ್ಕೆ ಜ್ವಾಲಾಮುಖಿ ಆಗಿ ಸ್ಫೋಟಿಸಲಿದೆ’ ಎಂದಿದ್ದಾರೆ.

‘ಸಿದ್ದರಾಮಯ್ಯ ಗ್ಯಾರಂಟಿ ಯೋಜನೆಗಳನ್ನು ಶಿಸ್ತಿನಿಂದ ಜಾರಿಗೊಳಿಸಿ, ಆರ್ಥಿಕ ನಷ್ಟ ಆಗದಂತೆ ನಿಭಾಯಿಸಿದ್ದರು. ಇನ್ಮುಂದೆ ಗ್ಯಾರಂಟಿ ಯೋಜನೆಗಳು ಮುಂದುವರಿ ಯಲ್ಲ. ಕಾಂಗ್ರೆಸ್ ನಾಯಕರಾದ ವೇಣುಗೋಪಾಲ ಹಾಗೂ ಸುರ್ಜೇವಾಲಾ ಅವರಿಗೆ ರಾಜ್ಯದ ನಿಜವಾದ ಸಮಸ್ಯೆಯ ಅರಿವಿಲ್ಲ. ತಾವೇ ಹೋರಾಟ ಮಾಡಿ, ಸರ್ಕಾರ ತಂದಂತೆ ವರ್ತಿಸುತ್ತಾರೆ’ ಎಂದು ಕಿಡಿಕಾರಿದ್ದಾರೆ.

‘ದಾವಣಗೆರೆ, ಬಾಗಲಕೋಟೆ ಉಪ ಚುನಾವಣೆಗಳಲ್ಲಿ ಕಾಂಗ್ರೆಸ್ ಗೆಲ್ಲಲು ಅಹಿಂದ ಮತಗಳೇ ಕಾರಣ. ಈಗ ಅಹಿಂದ ನಾಯಕನನ್ನೇ ತುಳಿದಿದ್ದಾರೆ. ಕುರುಬ ಸಮಾಜ ಯಾವತ್ತೂ ಇದನ್ನು ಕ್ಷಮಿಸಬಾರದು, ಪಾಠ ಕಲಿಸಬೇಕು’ ಎಂದು ಹೇಳಿಕೆ ನೀಡಿದ್ದಾರೆ.

‘ಸತೀಶ ಜಾರಕಿಹೊಳಿ ಕೆಪಿಸಿಸಿ ಅಧ್ಯಕ್ಷರಾಗುವ ಸೂಚನೆ ಬಂದಿದೆಯೇ’ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಲಖನ್, ‘ಕಾಂಗ್ರೆಸ್ ಹೈಕಮಾಂಡ್ ಟಪಾಲಿನಲ್ಲಿ ಯಾರ ಹೆಸರು ಬರೆದು ಕಳಿಸುತ್ತದೆ ಗೊತ್ತಿಲ್ಲ’ ಎಂದರು.

‘ಸಿದ್ದರಾಮಯ್ಯರನ್ನು ನಡೆಸಿಕೊಂಡ ರೀತಿ ಸರಿ ಇಲ್ಲ’

ಮಂಗಳೂರು: ‘ರಾಹುಲ್ ಗಾಂಧಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ನಡೆಸಿಕೊಂಡ ರೀತಿ ಸರಿ ಇಲ್ಲ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಗುರುವಾರ ಇಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಅವರು, ‘ದೇಶದ ನಾಲ್ಕೇ ರಾಜ್ಯಗಳಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿದೆ. ಅದರಲ್ಲೂ ಮೂರು ಕಡೆ ಮೇಲ್ಜಾತಿಯವರೇ ಮುಖ್ಯಮಂತ್ರಿ. ಹಿಂದುಳಿದ ವರ್ಗದ ಏಕೈಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆ ಪಕ್ಷದವರು ಕಾಡುತ್ತಿದ್ದಾರೆ. ಆದರೂ ಕಾಂಗ್ರೆಸ್ ನಿತ್ಯವೂ ಒಬಿಸಿ ಮಂತ್ರ ಜಪಿಸುತ್ತದೆ’ ಎಂದರು.

‘ಸಿದ್ದರಾಮಯ್ಯ ಪ್ರಾಮಾಣಿಕ ವ್ಯಕ್ತಿ ಅಲ್ಲ. ಹಿಂದೆ ವೀರೇಂದ್ರ ಪಾಟೀಲ ಅವರಿಗೆ ರಾಜೀವ್ ಗಾಂಧಿ ಅಪಮಾನ ಮಾಡಿದ್ದರು. ಈಗ ಸಿದ್ದರಾಮಯ್ಯ ಅವರನ್ನು ರಾಹುಲ್ ಗಾಂಧಿ ಅದೇ ರೀತಿ ನಡೆಸಿಕೊಂಡಿದ್ದಾರೆ. ಸಿದ್ದರಾಮಯ್ಯ ಸರ್ಕಾರದಲ್ಲಿ ಆಡಳಿತ ಇರಲೇ ಇಲ್ಲ. ಇಲ್ಲಿದ್ದದ್ದು ಕೇವಲ ತುಷ್ಟೀಕರಣ ಹಾಗೂ ಭ್ರಷ್ಟಾಚಾರ. ಡಿ.ಕೆ ಶಿವಕುಮಾರ್ ಮುಖ್ಯಮಂತ್ರಿ ಆದರೂ ಅದು ಮುಂದುವರಿಯುತ್ತದೆ’ ಎಂದು ಅವರು ಹೇಳಿದರು.

‘ರಾಜ್ಯದಲ್ಲಿ ಆಡಳಿತ ನಡೆಸಲು ಕಾಂಗ್ರೆಸ್‌ಗೆ ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣ ಆಗಿ ಬಿಜೆಪಿ ಅಧಿಕಾರಕ್ಕೆ ಬರಬೇಕಾದ ಅಗತ್ಯ ಇಲ್ಲ. ಮೋದಿ ಅವರ ಮಾರ್ಗದರ್ಶನದಲ್ಲಿ ಸಕಾರಾತ್ಮಕ ಚಿಂತನೆಗಳ ಮೂಲಕ ಪಕ್ಷ ಅಧಿಕಾರಕ್ಕೆ ಬರುತ್ತದೆ’ ಎಂದು ಜೋಶಿ ಹೇಳಿದರು.

‘ಕಾಂಗ್ರೆಸ್ ಕಚ್ಚಾಟದಿಂದ ಆಡಳಿತ ಕುಸಿತ’

ಬಿ.ವೈ. ವಿಜಯೇಂದ್ರ

ಕೊಪ್ಪಳ: ‘ಮುಖ್ಯಮಂತ್ರಿ ಬದಲಾವಣೆ, ಹೊಸ ಮುಖ್ಯಮಂತ್ರಿ ಆಯ್ಕೆಯಂತಹ ಕಾಂಗ್ರೆಸ್‌ನ ಆಂತರಿಕ ಕಚ್ಚಾಟದಿಂದ ರಾಜ್ಯದಲ್ಲಿ ಒಂದು ವರ್ಷದಿಂದ ಆಡಳಿತ ವ್ಯವಸ್ಥೆ ಸ್ಥಗಿತಗೊಂಡಿದೆ. ಜನರಿಗೆ ಬಹಳಷ್ಟು ತೊಂದರೆಯಾಗುತ್ತಿದೆ’ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಗುರುವಾರ ಮಾಧ್ಯಮದವರ ಜೊತೆ ಮಾತನಾಡಿದ ಅವರು ‘ಕಾಂಗ್ರೆಸ್ ಪಕ್ಷದಲ್ಲಿ ಯಾರೇ ಸಿ.ಎಂ. ಆದರೂ ರಾಜ್ಯ ಅಭಿವೃದ್ಧಿಯಾಗಲು ಸಾಧ್ಯವಿಲ್ಲ. ಕಾಂಗ್ರೆಸ್‌ನಲ್ಲಿ ಆಗುತ್ತಿರುವ ಬೆಳವಣಿಗೆ ನಮಗೆ ಮುಖ್ಯವಲ್ಲ. ಅದು ಜನರ ಮೇಲೆ ಬೀರುವ ಪರಿಣಾಮದ ಬಗ್ಗೆ ಮಾತ್ರ ಯೋಚಿಸುತ್ತಿದ್ದೇವೆ’ ಎಂದರು.

ಹೊಸಪೇಟೆ (ವಿಜಯನಗರ) ವರದಿ: ‘ಮೂರು ವರ್ಷಗಳ ಆಡಳಿತದಿಂದ ರಾಜ್ಯವು ದಿವಾಳಿಯ ಹಂತಕ್ಕೆ ತಲುಪಿದೆ. ನೂತನ ಮುಖ್ಯಮಂತ್ರಿಗೆ ಆರ್ಥಿಕ ಸುಧಾರಣೆ ತರಲು ಆಗದು’ ಎಂದು ಬಿ.ವೈ.ವಿಜಯೇಂದ್ರ ತಿಳಿಸಿದರು.

‘ರಾಜ್ಯ ಸರ್ಕಾರವು ಜನರಿಗೆ ಶಾಪವಾಗಿ ಪರಿಣಮಿಸಿದೆ. ಜನರು ಸರ್ಕಾರದ ಮೇಲೆ ವಿಶ್ವಾಸ ಕಳೆದುಕೊಂಡು ಹಲವು ದಿನಗಳು ಆಗಿವೆ’ ಎಂದು ಸುದ್ದಿಗಾರರಿಗೆ ತಿಳಿಸಿದರು. ‘ರಾಜ್ಯದಲ್ಲಿ ಕಾಂಗ್ರೆಸ್‌ಗೆ ಸ್ಪಷ್ಟ ಬಹುಮತ ಇದೆ. ನಾವು ಪರಿಣಾಮಕಾರಿ ವಿರೋಧ ಪಕ್ಷವಾಗಿ ಕೆಲಸ ಮಾಡುತ್ತಿದ್ದೇವೆ. ಕಾಂಗ್ರೆಸ್‌ನ ಆಂತರಿಕ ವಿಷಯದಲ್ಲಿ ಬಿಜೆಪಿ ಮೂಗು ತೂರಿಸುವ ಕೆಲಸ ಮಾಡಲ್ಲ’ ಎಂದರು.

ಚಿಟಿಕೆ ಸುದ್ದಿ

ನಿರ್ದೇಶಕರ ಹುದ್ದೆಗೆ ಇಂಗ್ಲಿಷ್‌ನಲ್ಲೇ ಅರ್ಜಿ: ಆಕ್ಷೇಪ

ಬೆಂಗಳೂರು: ಧಾರವಾಡದ ಉನ್ನತ ಶಿಕ್ಷಣ ಅಕಾಡೆಮಿಯ ನಿರ್ದೇಶಕರ ಹುದ್ದೆಯ ನೇಮಕಾತಿಗೆ ಹೊರಡಿಸಿರುವ ಅಧಿಸೂಚನೆಯನ್ನು ಇಂಗ್ಲಿಷ್‌ನಲ್ಲೇ ಹೊರಡಿಸಿದ್ದು, ಆಂಗ್ಲ ಭಾಷೆಯಲ್ಲೇ ಅರ್ಜಿ ಹಾಕಲು ಸೂಚಿಸಿರುವ ಉನ್ನತ ಶಿಕ್ಷಣ ಇಲಾಖೆ ವಿರುದ್ಧ ಹಲವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ಸರ್ಕಾರದ ಆಡಳಿತ ಭಾಷೆ ಕನ್ನಡವಾಗಿದ್ದರೂ ಇಂಗ್ಲಿಷ್‌ಗೆ ಆದ್ಯತೆ ನೀಡುತ್ತಿರುವ ಕಾಲೇಜು ಶಿಕ್ಷಣ ಇಲಾಖೆಯ ಕನ್ನಡ ವಿರೋಧಿ ಧೋರಣೆ ಸರಿಯಲ್ಲ. ತಕ್ಷಣವೇ ಅಧಿಸೂಚನೆ ಹಿಂಪಡೆದು, ಕನ್ನಡದಲ್ಲೇ ಮರು ಪ್ರಕಟಿಸಬೇಕು. ಕನ್ನಡದಲ್ಲೇ ಅರ್ಜಿ ಸಲ್ಲಿಕೆಗೆ ಅವಕಾಶ ಮಾಡಿಕೊಡಬೇಕು. ಹೊಸ ಅರ್ಜಿ ನಮೂನೆಯನ್ನು ನೀಡಬೇಕು. ಈ ವಿಚಾರದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮಧ್ಯಪ್ರವೇಶ ಮಾಡಬೇಕು’ ಎಂದು ಅಧ್ಯಾಪಕ ಕೆ.ಆರ್.ಹರೀಶ್ ಒತ್ತಾಯಿಸಿದ್ದಾರೆ.

ಅರ್ಜಿ ಸಲ್ಲಿಕೆಗೆ ಮೇ 30 ಕೊನೆಯ ದಿನವಾಗಿದ್ದು, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ 15 ವರ್ಷ ಸೇವೆ ಸಲ್ಲಿಸುತ್ತಿರುವ, ಪಿಎಚ್.ಡಿ ಮಾಡಿರುವ ಅಧ್ಯಾಪಕರು ಅರ್ಜಿ ಸಲ್ಲಿಸಬಹುದು ಎಂದು ಉನ್ನತ ಶಿಕ್ಷಣ ಇಲಾಖೆ ಅಧಿಸೂಚನೆ ಹೊರಡಿಸಿದೆ.

‘ಸುರಕ್ಷಿತ’ ಹುದ್ದೆ: ಕೆಲವರು ಅತಂತ್ರ

ಬೆಂಗಳೂರು: ಸಿದ್ದರಾಮಯ್ಯ ರಾಜೀನಾಮೆ ನೀಡಿದ ಬೆನ್ನಲ್ಲೇ ಅವರ ಸಚಿವಾಲಯದಲ್ಲಿ ಆಯಕಟ್ಟಿನ ಜಾಗದಲ್ಲಿದ್ದ ಕೆಲವು ಅಧಿಕಾರಿಗಳನ್ನು ‘ಸುರಕ್ಷಿತ’ ಹುದ್ದೆಗಳಿಗೆ ವರ್ಗಾವಣೆ ಮಾಡಿ ಸರ್ಕಾರ ಆದೇಶಿಸಿದೆ.

ಸಿದ್ದರಾಮಯ್ಯ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಕೆಲವು ಅಧಿಕಾರಿಗಳಿಗೆ ಹುದ್ದೆ ಕೊಡಬೇಕೆಂದು ತರಾತುರಿಯಲ್ಲಿ ವರ್ಗಾವಣೆ ಮಾಡಿದ್ದರಿಂದಾಗಿ, ಈಗಾಗಲೇ ಆ ಹುದ್ದೆಗಳಲ್ಲಿದ್ದ ಅಧಿಕಾರಿಗಳು ಅತಂತ್ರಗೊಂಡಿದ್ದಾರೆ.

ಮುಖ್ಯಮಂತ್ರಿ ಆಪ್ತ ಕಾರ್ಯದರ್ಶಿ ವೆಂಕಟೇಶಯ್ಯ ಅವರಿಗೆ ಕೃಷಿ ಮಾರಾಟ ಇಲಾಖೆ ನಿರ್ದೇಶಕ ಹುದ್ದೆ ನೀಡಲಾಗಿದೆ. ಮುಖ್ಯಮಂತ್ರಿ ವಿಶೇಷ ಕರ್ತವ್ಯಾಧಿಕಾರಿ ರಮೇಶ್ ಪಿ. ಕೋನರೆಡ್ಡಿ ಅವರನ್ನು ಕೆಪಿಟಿಸಿಎಲ್ ನಿರ್ದೇಶಕ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ಮುಖ್ಯಮಂತ್ರಿಯ ಜಂಟಿ ಕಾರ್ಯದರ್ಶಿ ಟಿ.ಎನ್. ಕೃಷ್ಣಮೂರ್ತಿ ಅವರನ್ನು ನಗರಾಭಿವೃದ್ಧಿ ಇಲಾಖೆಯ ಸರ್ಕಾರದ ಜಂಟಿ ಕಾರ್ಯದರ್ಶಿ–2 ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಮುಖ್ಯಮಂತ್ರಿಯ ಜಂಟಿ ಕಾರ್ಯದರ್ಶಿ ಹುದ್ದೆಯಿಂದ ಈ ಹಿಂದೆ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಹುದ್ದೆಗೆ ವರ್ಗಾವಣೆಗೊಂಡಿದ್ದ ಬಿ. ಶಿವಸ್ವಾಮಿ ಅವರನ್ನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ಕ್ರೈಸ್) ಕಾರ್ಯನಿರ್ವಾಹಕ ನಿರ್ದೇಶಕರಾಗಿ ವರ್ಗಾವಣೆ ಮಾಡಲಾಗಿದೆ.

ವಿಷ ಕುಡಿಯಲು ಯತ್ನಿಸಿದ ಸಿ.ಎಂ ಅಭಿಮಾನಿ

ಪ್ರಜಾವಾಣಿ ವಾರ್ತೆ

ಯಾದಗಿರಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆಗೆ ಕಾರಣವಾದ ಕಾಂಗ್ರೆಸ್ ಹೈಕಮಾಂಡ್ ವಿರುದ್ಧ ಕರ್ನಾಟಕ ಪ್ರದೇಶ ಕುರುಬರ ಸಂಘ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಪ್ರತಿಭಟನೆ ವೇಳೆ ಸಿದ್ದರಾಮಯ್ಯ ಅವರ ಅಭಿಮಾನಿ ಭೀಮು ಪೂಜಾರಿ ವಿಷ ಕುಡಿಯಲು ಯತ್ನಿಸಿದರು.

ನೇತಾಜಿ ವೃತ್ತದಲ್ಲಿ ಮಾನವ ಸರಪಳಿ ರಚಿಸಿದ ಕುರುಬ ಸಮುದಾಯದ ಮುಖಂಡರು ಹಾಗೂ ಸಿದ್ದರಾಮಯ್ಯ ಅಭಿಮಾನಿಗಳು, ಟೈರ್‌ಗೆ ಬೆಂಕಿ ಹಚ್ಚಿದರು. ಪೊಲೀಸರು ಬೆಂಕಿ ನಂದಿಸಲು ಮುಂದಾದರು. ಇದಕ್ಕೆ ಆಕ್ಷೇಪಿಸಿದ ಭೀಮು ಪೂಜಾರಿ, ‘ಬೆಂಕಿ ಹಚ್ಚಿದ್ದಕ್ಕೆ ಇಷ್ಟೊಂದು ಸಂಕಷ್ಟ ಆಗುತ್ತಿದ್ದರೆ, ನಾನು ಸಿದ್ದರಾಮಯ್ಯ ಅವರಿಗಾಗಿ ವಿಷ ಕುಡಿಯುತ್ತೇನೆ’ ಎಂದವರೇ ಜೇಬಿನಿಂದ ವಿಷದ ಬಾಟಲಿ ತೆಗೆದು ಕುಡಿಯಲು ಯತ್ನಿಸಿದರು. ಸ್ಥಳದಲ್ಲಿದ್ದವರು ಬಾಟಲಿ ಕಸಿದುಕೊಂಡರು.

ಯಾದಗಿರಿ ನಗರದಲ್ಲಿ ಗುರುವಾರ ನಡೆದ ಪ್ರತಿಭಟನೆ ವೇಳೆ ಸಿದ್ದರಾಮಯ್ಯ ಅಭಿಮಾನಿಯೊಬ್ಬರು ವಿಷ ಕುಡಿಯಲು ಯತ್ನಿಸಿದರು

ಮತ್ತೊಬ್ಬ ಅಭಿಮಾನಿ ರಾಜಕುಮಾರ ಗಣೇರ ಅವರು ವೃತ್ತದಲ್ಲಿ ಕುಳಿತು ಮೌನ ಪ್ರತಿಭಟನೆ ಮಾಡಿ, ಕಣ್ಣೀರು ಹಾಕಿದರು.

ಕಲಬುರಗಿಯಲ್ಲೂ ಕರ್ನಾಟಕ ಪ್ರದೇಶ ಕುರುಬರ ಸಂಘದ ಜಿಲ್ಲಾ ಘಟಕದಿಂದ ಕಾಂಗ್ರೆಸ್ ಹೈಕಮಾಂಡ್ ವಿರುದ್ಧ ಪ್ರತಿಭಟಿಸಲಾಯಿತು. ಎಸ್‌ವಿಪಿ ಸರ್ಕಲ್‌ನಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ, ಕಾಂಗ್ರೆಸ್ ಹೈಕಮಾಂಡ್ ವಿರುದ್ಧ ಘೋಷಣೆ ಕೂಗಿದರು.

ಸಿದ್ದರಾಮಯ್ಯ ರಾಜೀನಾಮೆ: ಧರಣಿ

ಹುಬ್ಬಳ್ಳಿ: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೇಲೆ ಕಾಂಗ್ರೆಸ್ ಹೈಕಮಾಂಡ್ ಒತ್ತಡ ಹೇರಿ, ಬ್ಲ್ಯಾಕ್‌ಮೇಲ್ ಮಾಡಿ ರಾಜೀನಾಮೆ ಪಡೆದಿದೆ’ ಇಲ್ಲಿ ಅಹಿಂದ ಸಂಘಟನೆ ಸದಸ್ಯರು ಗುರುವಾರ ಪ್ರತಿಭಟನೆ ನಡೆಸಿದರು.

ಪಕ್ಷದ ನಾಯಕರಾದ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಡಿ.ಕೆ. ಶಿವಕುಮಾರ್ ವಿರುದ್ಧ ಪ್ರತಿಭಟನಕಾರರು ಘೋಷಣೆ ಕೂಗಿದರು.

ಅಹಿಂದ ಕರ್ನಾಟಕ ಸಂಘಟನೆ ಸಂಚಾಲಕ ಸಿದ್ದಣ್ಣ ತೇಜಿ ಮಾತನಾಡಿ, ‘ರಾಜೀವ್ ಗಾಂಧಿ ಅವರು ಎಸ್.ಬಂಗಾರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿ, ಅವಮಾನಿಸಿದ್ದರು. ಈಗ ಅವರ ಮಗ ರಾಹುಲ್ ಗಾಂಧಿ ಅವರು ಸಿದ್ದರಾಮಯ್ಯ ಅವರಿಂದ ರಾಜೀನಾಮೆ ಪಡೆದು, ರಾಜ್ಯವನ್ನು ಕಾಂಗ್ರೆಸ್ ಮುಕ್ತ ಮಾಡಲು ಹೊರಟದ್ದಾರೆ’ ಎಂದರು.

‘ಸಿದ್ದರಾಮಯ್ಯ ಅವರು ಐದು ವರ್ಷ ಮುಖ್ಯಮಂತ್ರಿಯಾಗಿ ಇರುತ್ತಾರೆ ಎಂಬ ಕಾರಣಕ್ಕೆ ಅಹಿಂದ ವರ್ಗದವರು ಕಾಂಗ್ರೆಸ್ ಬೆಂಬಲಿಸಿದ್ದರು. ಇನ್ಮುಂದೆ ನಾವು ಪರ್ಯಾಯ ರಾಜಕಾರಣದ ಬಗ್ಗೆ ಆಲೋಚಿಸುತ್ತೇವೆ’ ಎಂದರು.

ಕುರ್ಚಿ ತೊರೆದ ಸಿ.ಎಂ: ಡಿಕೆಶಿಗೆ ತೆರೆದ ದಾರಿ

ಒಂದನೇ ಪುಟದಿಂದ...

ಮಧ್ಯಾಹ್ನ ಲೋಕಭವನಕ್ಕೆ ತೆರಳಿದ ಸಿದ್ದರಾಮಯ್ಯ, ರಾಜ್ಯಪಾಲ ಥಾವರಚಂದ್ ಗೆಹಲೋತ್ ಅನುಪಸ್ಥಿತಿ ಕಾರಣ ವಿಶೇಷ ಕಾರ್ಯದರ್ಶಿ ಆರ್. ಪ್ರಭುಶಂಕರ್ ಅವರಿಗೆ ತಮ್ಮ ರಾಜೀನಾಮೆ ಪತ್ರ ಹಸ್ತಾಂತರಿಸಿದರು. ತುರ್ತುಕಾರ್ಯದ ನಿಮಿತ್ತ ಬುಧವಾರ ತಡರಾತ್ರಿ ಗೆಹಲೋತ್ ಅವರು ತಮ್ಮ ತವರು ಇಂದೋರ್‌ಗೆ ತೆರಳಿದ್ದರು. ರಾಜೀನಾಮೆ ಪತ್ರ ಸಲ್ಲಿಸಿದ ಸಂದರ್ಭದಲ್ಲಿ ಡಿ.ಕೆ. ಶಿವಕುಮಾರ್ ಸೇರಿದಂತೆ ಸಚಿವರು, ಕೆಲವು ಶಾಸಕರು, ಪರಿಷತ್ ಸದಸ್ಯರು ಸಿದ್ದರಾಮಯ್ಯ ಅವರಿಗೆ ಜತೆಯಾದರು. ರಾಜ್ಯಪಾಲರು ಮರಳಿದ ನಂತರ ರಾಜೀನಾಮೆ ಪತ್ರವನ್ನು ಕೂಲಂಕಶವಾಗಿ ಪರಿಶೀಲಿಸಿ ಅಧಿಕೃತವಾಗಿ ಅಂಗೀಕರಿಸಲಿದ್ದಾರೆ.

ಸಚಿವರ ಕಣ್ಣೀರು; ಭಾವುಕರಾದ ಸಿ.ಎಂ: ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡುವುದಾಗಿ ಉಪಾಹಾರ ಸಭೆಯಲ್ಲಿ ಸಿದ್ದರಾಮಯ್ಯ ಪ್ರಕಟಿಸುತ್ತಿದ್ದಂತೆ ಇಡೀ ಸಭಾಂಗಣದಲ್ಲಿ ನೀರವ ಮೌನ ಆವರಿಸಿತು.

ಸುಮಾರು ಎರಡೂವರೆ ತಾಸು ಈ ಸಭೆ ನಡೆಯಿತು. ಸಿದ್ದರಾಮಯ್ಯ ಅವರ ಅಕ್ಕಪಕ್ಕದಲ್ಲಿ ಡಿ.ಕೆ. ಶಿವಕುಮಾರ್ ಮತ್ತು ಜಿ. ಪರಮೇಶ್ವರ ಇದ್ದರು. ಸಿದ್ದರಾಮಯ್ಯ ಅವರ ಮಾತು ಆಲಿಸುತ್ತಲೇ ಕೆಲವು ಸಚಿವರು ತೀವ್ರ ಭಾವೋದ್ವೇಗಕ್ಕೆ ಒಳಗಾದರು. ಸಭೆಗಳಲ್ಲಿ ಸದಾ ಗಂಭೀರವಾಗಿರುತ್ತಿದ್ದ ಸಿದ್ದರಾಮಯ್ಯ ಅವರೂ ಒಂದು ಕ್ಷಣ ಭಾವುಕರಾದರು.

‘ಕಳೆದ ಮೂರು ವರ್ಷಗಳ ಆಡಳಿತಾವಧಿಯಲ್ಲಿ ನಾನು ಮಾಡಿದ ಕೆಲಸಗಳು ಸಂಪೂರ್ಣ ಸಮಾಧಾನ ತಂದಿದೆ. ನಿಮ್ಮೆಲ್ಲರ ಸಹಕಾರಕ್ಕೆ ಧನ್ಯವಾದಗಳು’ ಎಂದು ಸಿದ್ದರಾಮಯ್ಯ ಗದ್ಗದಿತ ಕಂಠದಿಂದ ನುಡಿದರು ಎಂದು ಮೂಲಗಳು ಹೇಳಿವೆ.

ಸಭೆಯಲ್ಲಿ ಸಚಿವರಾದ ಎಚ್.ಕೆ. ಪಾಟೀಲ, ರಾಮಲಿಂಗಾರೆಡ್ಡಿ, ದಿನೇಶ್ ಗುಂಡೂರಾವ್, ಪ್ರಿಯಾಂಕ್ ಖರ್ಗೆ, ಕೆ.ಜೆ. ಜಾರ್ಜ್, ಎಂ.ಬಿ. ಪಾಟೀಲ ಸೇರಿದಂತೆ ಪ್ರಮುಖ ನಾಯಕರು ಇದ್ದರು. ಸಭೆ ಮುಗಿದ ನಂತರ ಬಹುತೇಕ ಸಚಿವರು ಕೈ ಮುಗಿಯುತ್ತಾ ಮುಖ್ಯಮಂತ್ರಿ ಮನೆಯಿಂದ ಹೊರಟರು.

ಇಂದು ರಾಹುಲ್ ಭೇಟಿ

ಒಂದನೇ ಪುಟದಿಂದ...

ಸಿದ್ದರಾಮಯ್ಯ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಹಲವರಿಗೆ ಅವಕಾಶ ಸಿಗುವ ಸಾಧ್ಯತೆ ಕಡಿಮೆ. ಈ ಹಿನ್ನೆಲೆಯಲ್ಲಿ ಆಪ್ತರು ಸಿದ್ದರಾಮಯ್ಯ ಅವರಲ್ಲಿ ಅಳಲು ತೋಡಿಕೊಂಡಿದ್ದರು. ಹೈಕಮಾಂಡ್ ಮೇಲೆ ಒತ್ತಡ ಹೇರುವಂತೆ ಒತ್ತಾಯಿಸಿದ್ದರು. ಇದಕ್ಕೆ ಮುಖ್ಯಮಂತ್ರಿಯವರು ಆರಂಭದಲ್ಲಿ ಒಪ್ಪಿರಲಿಲ್ಲ. ಒತ್ತಡ ಹೆಚ್ಚಾದ ಬಳಿಕ ಮನಸ್ಸು ಬದಲಾಯಿಸಿದ್ದರು. ರಾಹುಲ್ ಭೇಟಿಯ ವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಗುರುವಾರ ರಾತ್ರಿ ದೆಹಲಿಗೆ ಬಂದಿದ್ದು, ಹೈಕಮಾಂಡ್ ನಾಯಕರನ್ನು ಶುಕ್ರವಾರ ಭೇಟಿ ಮಾಡಲಿದ್ದಾರೆ. ಸಂಪುಟದ ಸ್ವರೂಪದ ಬಗ್ಗೆ ವರಿಷ್ಠರೊಂದಿಗೆ ಸಮಾಲೋಚನೆ ನಡೆಸಲು ಯೋಜಿಸಿದ್ದಾರೆ.

ಡಾ.ವಿಘ್ನೇಶ್ವರ ಭಟ್‌ಗೆ ನೆರವು ನೀಡುವ ಮೂಲಕ ಬಕ್ರೀದ್ ಆಚರಣೆ

ಕ್ಯಾನ್ಸರ್ ಪೀಡಿತ ವೈದ್ಯರಿಗೆ ಜಮಾಅತ್ ನೆರವು

ಪ್ರಜಾವಾಣಿ ವಾರ್ತೆ

ಪುತ್ತೂರು (ದಕ್ಷಿಣ ಕನ್ನಡ): ತಾಲ್ಲೂಕಿನ ಒಳಮೊಗ್ರು ಗ್ರಾಮದ ಶೇಕಮಲೆ ಜಮಾಅತ್‌ನ ಮುಸ್ಲಿಂ ಮುಖಂಡರು ಈ ಬಾರಿ ಬಕ್ರೀದ್ ಆಚರಣೆ ಸಂಭ್ರಮಕ್ಕೆ ಒತ್ತು ನೀಡದೆ, ರಕ್ತದ ಕ್ಯಾನ್ಸರ್‌ನಿಂದ ಬಳಲುತ್ತಿರುವ ಮತ್ತು ಚಿಕಿತ್ಸೆಗೆ ಹಣಕಾಸಿನ ಸಮಸ್ಯೆ ಎದುರಿಸುತ್ತಿರುವ ಕುಂಬ್ರದ ಅಮೃತ ಕ್ಲಿನಿಕ್‌ನ ವೈದ್ಯ ವಿಘ್ನೇಶ್ವರ ಭಟ್ ಅವರಿಗೆ ಆರ್ಥಿಕ ನೆರವು ನೀಡಿದರು.

ಕುಂಬ್ರದಲ್ಲಿ ಹಲವು ವರ್ಷಗಳಿಂದ ಕ್ಲಿನಿಕ್ ನಡೆಸುತ್ತಿರುವ ವಿಘ್ನೇಶ್ವರ ಭಟ್ ಅವರನ್ನು ಕ್ಯಾನ್ಸರ್ ಬಾಧಿಸಿದೆ. ವೃತ್ತಿಯಿಂದ ಸಂಪಾದಿಸಿದ ಹಣವನ್ನು ಚಿಕಿತ್ಸೆಗೆ ವ್ಯಯಿಸಿರುವ ಅವರು, ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಸಾಮಾಜಿಕ ಮಾಧ್ಯಮದ ಮೂಲಕ ನೆರವು ಕೋರಿದ್ದರು.

ಊರಿನ ವೈದ್ಯರ ಸಂಕಷ್ಟ ಅರಿತ ಜಮಾಅತ್ ಸಮಿತಿಯವರು ಹಿಂದಿನ ಶುಕ್ರವಾರ ಈ ವಿಚಾರವನ್ನು ಮಸೀದಿಯಲ್ಲಿ ಪ್ರಸ್ತಾಪಿಸಿ ವೈದ್ಯರಿಗೆ ಸಹಾಯ ನೀಡುವಂತೆ ಮನವಿ ಮಾಡಿಕೊಂಡಿದ್ದರು. ಸುಮಾರು ₹ 52 ಸಾವಿರ ಸಂಗ್ರಹವಾಗಿತ್ತು.

ಹಣ ಸಂಗ್ರಹ ಮಾಡಿ ವೈದ್ಯರ ರೋಗ ಶಮನಕ್ಕಾಗಿ ಕಳೆದ ಶುಕ್ರವಾರ ಮಸೀದಿಯಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಸಲಾಗಿತ್ತು. ಬಕ್ರೀದ್ ದಿನವಾದ ಗುರುವಾರವೂ ಮಸೀದಿಯಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸಲಾಗಿತ್ತು. ಮತ್ತೆ ಮಸೀದಿಯಲ್ಲಿ ಹಣ ಸಂಗ್ರಹಿಸಿ, ಸಂಗ್ರಹವಾದ ಒಟ್ಟು ₹ 58,013ವನ್ನು ಶೇಕಮಲೆ ಜಮಾಅತ್ ಪ್ರಮುಖರು ವಿಘ್ನೇಶ್ವರ ಭಟ್ ಅವರ ಮನೆಗೆ ತೆರಳಿ ನೀಡಿದರು.

ಅನಾರೋಗ್ಯದಿಂದ ಬಳಲುತ್ತಿರುವ ಆರ್ಯಾಪು ಗ್ರಾಮದ ಸಂಪ್ಯದಲ್ಲಿರುವ ಡಾ.ವಿಘ್ನೇಶ್ವರ ಭಟ್ ಅವರ ಮನೆಗೆ ತೆರಳಿದ ಪುತ್ತೂರು ತಾಲ್ಲೂಕಿನ ಶೇಕಮಲೆ ಜಮಾಅತ್ ಪ್ರಮುಖರು ಆರ್ಥಿಕ ನೆರವು ನೀಡಿದರು

ಈ ವೈದ್ಯರಿಗೆ ಮುಂದೆಯೂ ಸಹಾಯ ಮಾಡುವ ಭರವಸೆ ನೀಡಿದ್ದೇವೆ ಎಂದು ಸಮಿತಿ ಕಾರ್ಯದರ್ಶಿ ಎಸ್.ಪಿ.ಬಶೀರ್ ತಿಳಿಸಿದರು.

ಜಮಾಅತ್ ಸದಸ್ಯರಾದ ಎಸ್.ಎಂ.ಮಹಮ್ಮದ್ ಕುಂಬ್ರ, ಸಲಾಮುದ್ದೀನ್ ಕುಂಬ್ರ, ನಾಸಿರ್ ಕುಂಬ್ರ, ಮಹಮ್ಮದ್ ಬೊಳ್ಳಾಡಿ, ಇಕ್ಬಾಲ್ ಹುಸೇನ್ ಕೌಡಿಚ್ಚಾರ್, ಬಶೀರ್ ಕೌಡಿಚ್ಚಾರ್, ರಿಝ್ವಾನ್ ಕೌಡಿಚ್ಚಾರ್, ಮೊಯ್ದೀನ್ ಅಲಂಗೂರು, ಅಝರ್ ಕುಂಬ್ರ, ಹಮೀದ್ ಶೇಕಮಲೆ, ಅಮೀನ್ ಕುಂಬ್ರ, ಯೂಸುಫ್ ಮುಡಾಲ, ಹಾಫಿಲ್ ಮುಹಮ್ಮದ್ ಹಾಶಿರ್ ಉಪಸ್ಥಿತರಿದ್ದರು.

‘ಅಳಿಲು ಸೇವೆ’

‘ಕಷ್ಟ, ರೋಗ ಮಾನವರಿಗೆ ಬರುತ್ತದೆಯೇ ಹೊರತು ಜಾತಿ, ಧರ್ಮ ನೋಡಿ ಬರುವುದಿಲ್ಲ. ನಮ್ಮೂರಿನ ವೈದ್ಯರಿಗೆ ಬಂದಿರುವ ಮಾರಕ ಕಾಯಿಲೆ ಗುಣಮುಖವಾಗಲೆಂದು ನಾವು ಪ್ರಾರ್ಥಿಸಿದ್ದೇವೆ. ನಮ್ಮದು ಅಳಿಲು ಸೇವೆ ಅಷ್ಟೆ’ ಎಂದು ಶೇಕಮಲೆ ಜಮಾಅತ್ ಸಮಿತಿ ಅಧ್ಯಕ್ಷ ಸುಲೈಮಾನ್ ತಿಳಿಸಿದ್ದಾರೆ.

The Raichur and Koppal District Central Co-Operative Bank Ltd., Raichur

Ref: RDCCB/2026-27/BD/WORK_INDENT9/ Date:27.05.2026

e-Procurement Tender Notice

The Raichur and Koppal District Central Co-Operative Bank Ltd., Raichur invites e-Tender reference no: RDCCB/2026-27/BD/WORK_INDENT9 “Tender for Detailed Estimate For Construction work of New RDCC Bank Building At Yelburga For R.K.D.C.C Bank Yelburga Branch Tq & Dt. Koppal ” Tender Schedule and details can be obtained from KPPPortal https://kppp.karnataka.gov.in

Sd/- **(M B Pujar)**
Chief Executive Officer
R K D C C BANK Ltd.,
Raichur.

ಎಸ್‌ಡಿಎಸ್ ಟಿಆರ್‌ಸಿ ಮತ್ತು ರಾಜೀವ್ ಗಾಂಧಿ ಎದೆರೋಗಗಳ ಸಂಸ್ಥೆ
(An Autonomous Institute, Government of Karnataka)
Reg. No. SOR/BLU/DR/671/09-10 dated: 23-09-2009
(Super speciality Referral Hospital & Post Graduate Institute)

ಸಂಖ್ಯೆ: ಎಸ್‌ಡಿಎಸ್/ಟಿಎನ್‌ಡಿ/01/2026–27 ದಿನಾಂಕ : 27–05–2026

ಟೆಂಡರ್ ಪ್ರಕಟಣೆ

ಈ ಸಂಸ್ಥೆಗೆ ಅವಶ್ಯವಿರುವ ಸೇವೆಗಳಾದ 1. Management and Disposal of Biomedical Waste 2. Outsourcing Laundry Services 3. Maintenance of 120 KLD ETP Plant 4. Pest Control Services ಗಳನ್ನು ಅರ್ಹ ಸಂಸ್ಥೆಗಳ ಮುಖಾಂತರ ಪಡೆಯಲು ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗಳಿಗೆ ಭಾಗವಹಿಸಲು ಲಭ್ಯವಾಗುವ ದಿನಾಂಕ : **29–05–2026** ಮತ್ತು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **16–06–2026** ಕ್ಕೆ ಮುಕ್ತಾಯವಾಗುತ್ತದೆ. ಇದಕ್ಕೆ ಸಂಬಂಧಿತ ಮಾಹಿತಿ ಕೆಪಿಪಿ ಪೋರ್ಟಲ್ **(https://kppp.karnataka.gov.in)** ನಲ್ಲಿ ಲಭ್ಯವಿದೆ.

ಸಹಿ/– ನಿರ್ದೇಶಕರು
ಎಸ್‌ಡಿಎಸ್ ಟಿಆರ್‌ಸಿ ಮತ್ತು ಆರ್‌ಜಿಐಸಿಡಿ
ಬೆಂಗಳೂರು–560029

ವಾಸಾಸಂಇ/ವಾ.ಪ್ರ/875/ಶ್ರೇಷ್ಠ/2026–27

ಕರ್ನಾಟಕ ಸರ್ಕಾರ
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಜಿಲ್ಲಾ ಮಕ್ಕಳ ರಕ್ಷಣಾ ಘಟಕ
ಒಂದನೇ ಮಹಡಿ ಬಿ ಬ್ಲಾಕ್ ಜಿಲ್ಲಾಧಿಕಾರಿಗಳ ಸಂಕೀರ್ಣ, ರಜತಾದ್ರಿ, ಮಣಿಪಾಲ, ಉಡುಪಿ ಜಿಲ್ಲೆ.
ದೂರವಾಣಿ ಸಂಖ್ಯೆ: 0820–2574964 ಇ–ಮೇಲ್ ವಿಳಾಸ: dcpuudupi@gmail.com
ಸಂಖ್ಯೆ: ಜಿಮರಘಉ/ಮಮಅಇ/ಹೊ.ಗು.ಸಿ.ಸೇ.ಟೆಂಡರ್:2026–27 ದಿ: 27–05–2026

ಇ–ಟೆಂಡರ್ ಪ್ರಕಟಣೆ

2026–27ನೇ ಸಾಲಿಗೆ ಉಡುಪಿ ಜಿಲ್ಲೆಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಕಛೇರಿ, ಮಕ್ಕಳ ಸಹಾಯವಾಣಿ ಕೇಂದ್ರ, ಸರ್ಕಾರಿ ಬಾಲಕಿಯರ ಬಾಲಮಂದಿರ, ಸರ್ಕಾರಿ ಬಾಲಕರ ಬಾಲಮಂದಿರ ಮತ್ತು ಸರ್ಕಾರಿ ವೀಕ್ಷಣಾಲಯ, ಸರ್ಕಾರಿ ವಿಶೇಷ ದತ್ತು ಸಂಸ್ಥೆಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ಮಾನವ ಸಂಪನ್ಮೂಲ ಸೇವೆಯನ್ನು ಅರ್ಹತೆಯುಳ್ಳ ನೋಂದಾಯಿತ ಹೊರ ಸಂಪನ್ಮೂಲ ಸಂಸ್ಥೆಗಳ ಮುಖಾಂತರ ಪಡೆಯಲು ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 15–06–2026 ಅಪರಾಹ್ನ 3.00 ಗಂಟೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 17–06–2026 ಪೂರ್ವಾಹ್ನ 11.00 ಗಂಟೆಗೆ. ಹೆಚ್ಚಿನ ಮಾಹಿತಿಯನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ‘ಬಿ’ ಬ್ಲಾಕ್, 1ನೇ ಮಹಡಿ, ರಜತಾದ್ರಿ, ಮಣಿಪಾಲ, ಉಡುಪಿ ಜಿಲ್ಲೆ ಇವರನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಕಛೇರಿ ದೂರವಾಣಿ ಸಂಖ್ಯೆ: 0820–2574964

ಸಹಿ/– (ನಾಗರತ್ನ ನಾಯಕ್)
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಉಡುಪಿ ಜಿಲ್ಲೆ.

ವಾಸಾಇ/ಸನಿಉ/ಕೆಎಸ್‌ಎಂಸಿಎ/123/26–27 ದಿ: 27.05.2026

ಕರ್ನಾಟಕ ಸರ್ಕಾರ
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಕಾಳಿದಾಸ ಮಾರ್ಗ, ಗಾಂಧಿನಗರ, ಬೆಂಗಳೂರು – 560 009.

ಸಂಖ್ಯೆ: ಕಪಂರಾಆ/ಅಭಿವೃದ್ಧಿ/489/2026, ದಿನಾಂಕ: 27.05.2026
C.NO: 2162515

ನೇಮಕಾತಿ ಪ್ರಕಟಣೆ

ಸಾಮಾಜಿಕ ಕಳಕಳಿಯುಳ್ಳ ಸ್ಥಳೀಯ ಆಡಳಿತಕ್ಕಾಗಿ ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದಲ್ಲಿ ಸ್ಥಾಪಿಸಲಾದ “ಸಾಮಾಜಿಕವಾಗಿ ಸ್ಪಂದಿಸುವ ಸ್ಥಳೀಯ ಆಡಳಿತ (Socially Responsive Local Governance-SRLG) ಕೋಶ” ದಲ್ಲಿ ಕಾರ್ಯನಿರ್ವಹಿಸಲು ರಾಜ್ಯ ಮಟ್ಟದಲ್ಲಿ ಅರ್ಹ ಮತ್ತು ಅನುಭವಿ ವಿಷಯ ಪರಿಣಿತರು ಮತ್ತು ಯುವ ವೃತ್ತಿಪರರಿಂದ ಈ ಕೆಳಕಂಡ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1. ವಿಷಯ ಪರಿಣಿತರು (1 ಹುದ್ದೆ)
2. ಯುವ ವೃತ್ತಿಪರರು (Young Professionals) (2 ಹುದ್ದೆಗಳು)

ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದಲ್ಲಿ “ಸಾಮಾಜಿಕವಾಗಿ ಸ್ಪಂದಿಸುವ ಸ್ಥಳೀಯ ಆಡಳಿತ ಕೋಶ”ವನ್ನು ಸ್ಥಾಪಿಸಲಾಗಿದೆ. ಈ ಹುದ್ದೆಗಳಿಗೆ ಕನ್ನಡ ಜ್ಞಾನವನ್ನು ಕಡ್ಡಾಯವಾಗಿ ಹೊಂದಿರಬೇಕು ಮತ್ತು ವಿವಿಧ ತಾಲ್ಲೂಕುಗಳು ಮತ್ತು ಗ್ರಾಮ ಪಂಚಾಯತ್‌ಗಳಿಗೆ ವ್ಯಾಪಕವಾಗಿ ಪ್ರವಾಸ ಮಾಡುವುದು ಅಗತ್ಯವಿರುತ್ತದೆ. ಆಸಕ್ತ ಅಭ್ಯರ್ಥಿಗಳು **https://prcrdpr.karnataka.gov.in/** ಲಿಂಕ್ ನಲ್ಲಿ ಒದಗಿಸಲಾದ ಹುದ್ದೆಗಳ ವಿವರಣೆಯನ್ನು (Job Description) ಗಮನಿಸುವುದು, **06.06.2026 ರಂದು ಸಂಜೆ 5.30 ರೊಳಗಾಗಿ** ಅರ್ಜಿಗಳನ್ನು ಎಲ್ಲಾ ಲಗತ್ತುಗಳೊಂದಿಗೆ ಇ–ಮೇಲ್ ವಿಳಾಸ **srlgrecruitmentgmail.com** ಕ್ಕೆ ಸಲ್ಲಿಸುವುದು.

ಸಹಿ/–
ಆಯುಕ್ತರು
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ವಾ.ಸಾ.ಸಂ.ಇ/ವಾಪ್ರ/871/ಆಕಾರ್/2026–27

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಕೆಳಗಿರುವವರು ಸರಿಸಮರಾಗೋಣವೆಂದು, ಸರಿಸಮನಾಗಿ ಇರುವವರು ಮತ್ತಷ್ಟು ಮೇಲೇರೋಣವೆಂದು ಕ್ರಾಂತಿ ಮಾಡುವರು.

–ಅರಿಸ್ಟಾಟಲ್

ಸಂಪಾದಕೀಯ

ಸಿದ್ದರಾಮಯ್ಯ ರಾಜೀನಾಮೆ ಪರ್ವ ಉಳಿಯಲಿದೆ ಛಾಪು, ಹೆಜ್ಜೆಗುರುತು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದರೊಂದಿಗೆ, ಕರ್ನಾಟಕದ ರಾಜಕೀಯ ಚರಿತ್ರೆಗೆ ಸಂಬಂಧಿಸಿದಂತೆ ಇಪ್ಪತ್ತು ವರ್ಷಗಳ ಬಹು ಮುಖ್ಯವಾದ ಅಧ್ಯಾಯವೊಂದು ಕೊನೆಗೊಂಡಿದೆ. ಸಾಮಾಜಿಕ ನ್ಯಾಯವನ್ನು ರಾಜಕಾರಣದ ಭಾಗವಾಗಿಸಿಕೊಂಡು ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿದ ರಾಜ್ಯದ ವಿರಳ ನಾಯಕರಲ್ಲಿ ಸಿದ್ದರಾಮಯ್ಯ ಅವರೂ ಒಬ್ಬರು. ಪ್ರಸ್ತುತ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವುದರೊಂದಿಗೆ ಅಧಿಕಾರ ಹಸ್ತಾಂತರಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಪಕ್ಷದೊಳಗೆ ಇದ್ದ ದೀರ್ಘ ಕಾಲದ ಅನಿಶ್ಚಿತ ಪರಿಸ್ಥಿತಿ ಹಾಗೂ ಊಹಾಪೋಹಗಳಿಗೆ ತಾರ್ಕಿಕ ಅಂತ್ಯ ದೊರೆತಂತಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನಡುವೆ ಅಧಿಕಾರ ಹಂಚಿಕೆ ಒಪ್ಪಂದ ನಡೆದಿದೆ ಎನ್ನುವುದು ಕೆಲವು ತಿಂಗಳುಗಳಿಂದ ರಾಜಕೀಯ ಚರ್ಚೆಯ ವಿಷಯವಾಗಿತ್ತು. ಅದರ ಪರಿಣಾಮ ರಾಜ್ಯದ ಆಡಳಿತದ ಮೇಲೆಯೂ ಉಂಟಾಗಿತ್ತು. ಇದೇ ಏರುಪೇರಿನ ನಡುವೆಯೂ ಗಮನಾರ್ಹ ಆರ್ಥಿಕ ಬೆಳವಣಿಗೆಯೊಂದಿಗೆ, ದೇಶದ ಅತ್ಯುತ್ತಮ ಕಾರ್ಯ ನಿರ್ವಹಣೆಯ ರಾಜ್ಯಗಳಲ್ಲೊಂದಾಗಿ ಕರ್ನಾಟಕ ಗುರುತಿಸಿಕೊಂಡಿದೆ. ಜಾತಿ–ಧರ್ಮ, ಪ್ರದೇಶ ಮತ್ತು ಸಮುದಾಯಗಳನ್ನು ಮೀರಿ ಜನಸಮುದಾಯದ ಮೇಲೆ ಪ್ರಭಾವ ಹೊಂದಿರುವ ಸಿದ್ದರಾಮಯ್ಯನವರು ಕರ್ನಾಟಕ ಕಂಡಿರುವ ಅತ್ಯಂತ ವರ್ಚಸ್ವೀ ನಾಯಕರಲ್ಲೊಬ್ಬರು. ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು ಮತ್ತು ದಲಿತರ ರಾಜಕೀಯ ಒಕ್ಕೂಟವಾದ 'ಅಹಿಂದ' ಪರಿಕಲ್ಪನೆಯ ರೂವಾರಿ ಎಂದು ಅವರನ್ನು ಗುರುತಿಸಲಾಗುತ್ತದೆ. ರಾಜ್ಯದಲ್ಲಿ ಅತಿ ದೀರ್ಘ ಕಾಲ ಸೇವೆ ಸಲ್ಲಿಸಿರುವ ಮುಖ್ಯಮಂತ್ರಿ ಎನ್ನುವ ದಾಖಲೆ ಯೊಂದಿಗೆ, 1977ರ ನಂತರ ಐದು ವರ್ಷಗಳ ಪೂರ್ಣಾವಧಿ ಮುಗಿಸಿದ ಮೊದಲ ಮುಖ್ಯಮಂತ್ರಿ ಅವರಾಗಿದ್ದಾರೆ. ಮೊದಲ ಅವಧಿಯ 'ಅನ್ನಭಾಗ್ಯ' ಯೋಜನೆಯಿಂದ ಈಗಿನ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳವರೆಗೆ ಸಾಮಾಜಿಕ ನ್ಯಾಯವನ್ನು ಚುನಾವಣಾ ತಂತ್ರದೊಂದಿಗೆ ಸಂಯೋಜಿಸುವ ಕಲೆ ಅವರಿಗೆ ಕರಗತವಾಗಿತ್ತು. ಈ ಸಮೀಕರಣದ ಭಾಗವಾಗಿಯೇ, ಅವರ ಮಹತ್ವಾಕಾಂಕ್ಷಿಯ 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ'ಯನ್ನು ಗುರ್ತಿಸ ಬಹುದು. ಸಂವಿಧಾನ, ಜನಪರ ಆಡಳಿತ ಹಾಗೂ ಒಕ್ಕೂಟ ವ್ಯವಸ್ಥೆಯ ಬಗ್ಗೆ ಅಚಲವಾದ ತಿಳಿವಳಿಕೆ ಹೊಂದಿರುವ ಅವರು ಸಮಾಜವಾದಿ ಚಳವಳಿಯಿಂದ ಮೂಡಿಬಂದ ಪ್ರಮುಖ ನಾಯಕರೂ ಹೌದು. ಬಹು ಮುಖ್ಯವಾಗಿ, ಸುದೀರ್ಘ ಅವಧಿಯ ರಾಜಕಾರಣದಲ್ಲಿ ಸಾರ್ವಜನಿಕವಾಗಿ ಚಾರಿತ್ರ್ಯ ಉಳಿಸಿಕೊಂಡಿದ್ದಾರೆ. ಅವರ ಪತ್ನಿಯನ್ನು ಸುತ್ತುವರಿದಿದ್ದ 'ಮುಡಾ' ಪ್ರಕರಣದಲ್ಲಿಯೂ ಅಂತಿಮವಾಗಿ ಕ್ಲೀನ್ ಚಿಟ್ ದೊರೆತಿತ್ತು.

ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯನವರ ಆಡಳಿತ ಟೀಕೆಗಳಿಂದ ಮುಕ್ತವಾದುದೇನೂ ಅಲ್ಲ. ಗ್ಯಾರಂಟಿ ಯೋಜನೆಗಳಿಗೆ ಅಗತ್ಯವಾದ ಆರ್ಥಿಕ ಸ್ಥಿತಿ ಹಾಗೂ ಆ ಯೋಜನೆಗಳು ರಾಜ್ಯದ ಒಟ್ಟಾರೆ ಅಭಿವೃದ್ಧಿ ಕಾರ್ಯಕ್ರಮಗಳ ಮೇಲೆ ಉಂಟು ಮಾಡಿರುವ ಪರಿಣಾಮದ ಬಗ್ಗೆ ಪ್ರಶ್ನೆಗಳು ಮುಂದುವರಿದಿವೆ. ಬೆಂಗಳೂರಿನ ಹದಗೆಟ್ಟ ಮೂಲ ಸೌಕರ್ಯ ಸರ್ಕಾರಕ್ಕೆ ಮುಜುಗರದ ವಿಷಯವಾಗಿತ್ತು. ವಾಲ್ಮೀಕಿ ನಿಗಮದ ಹಗರಣದೊಂದಿಗೆ, ಅಧಿಕಾರಿಗಳ ವರ್ಗಾವಣೆಗಳಲ್ಲಿ ಭ್ರಷ್ಟಾಚಾರ ನಡೆದಿದೆ ಎನ್ನುವ ಆರೋಪಗಳನ್ನೂ ಅವರ ಸರ್ಕಾರ ಎದುರಿಸಿದೆ. ಇದೀಗ ನಡೆದಿರುವ ನಾಯಕತ್ವ ಬದಲಾವಣೆಯು ಸರ್ಕಾರಕ್ಕೆ ಮಾತ್ರವಲ್ಲದೆ ಕಾಂಗ್ರೆಸ್ ಪಕ್ಷಕ್ಕೂ ಮಹತ್ವದ ಪರೀಕ್ಷೆಯಾಗಿದೆ. ಅಧಿಕಾರದಲ್ಲಿ ಇರುವಾಗಲೇ ನಾಯಕತ್ವ ಬದಲಾವಣೆಯ ಪ್ರಯೋಗ ನಡೆಸಿರುವ ಕಾಂಗ್ರೆಸ್ ರಾಜಕೀಯ ಜೂಜಾಟ ಆಡಿರುವುದು ಸ್ಪಷ್ಟವಾಗಿದೆ. ಈ ಬದಲಾವಣೆಯು ಪಕ್ಷದೊಳಗಿನ ಅಧಿಕಾರ ಸಮೀಕರಣಗಳನ್ನು ತೃಪ್ತಿಪಡಿಸುವ ಕ್ರಮ ಮಾತ್ರವೇ ಅಥವಾ ಆಡಳಿತಕ್ಕೆ ಹೊಸ ಚೈತನ್ಯ ತುಂಬಲಿದೆಯೇ ಎನ್ನುವುದು ಈಗ ಉಳಿದಿರುವ ಮುಖ್ಯ ಪ್ರಶ್ನೆ.

ಗ್ಯಾರಂಟಿ ಯೋಜನೆಗಳ ಮುಂದುವರಿಕೆ ಸೇರಿದಂತೆ ಸರ್ಕಾರದ ನೀತಿಯಲ್ಲಿ ಯಾವುದೇ ಪ್ರಮುಖ ಬದಲಾವಣೆ ಆಗುವ ಸಾಧ್ಯತೆ ಕಡಿಮೆ. ಆದರೆ, ಹೊಸ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸುವವರು ಆಡಳಿತಕ್ಕೆ ಶಕ್ತಿ ತುಂಬಿ ರಾಜಕೀಯ ಸ್ಥಿರತೆಯನ್ನು ಮರುಸ್ಥಾಪಿಸುವ ಕಠಿಣ ಸವಾಲನ್ನು ಎದುರಿಸಬೇಕಾಗಿದೆ. ದೇಶದ ಪ್ರಮುಖ ಆರ್ಥಿಕ ಶಕ್ತಿಗಳಲ್ಲೊಂದಾಗಿರುವ ಸಂದರ್ಭದಲ್ಲಿ ಕರ್ನಾಟಕವು ದೀರ್ಘ ಕಾಲದವರೆಗೆ ಅನಿಶ್ಚಿತ ಪರಿಸ್ಥಿತಿಯನ್ನು ಸಹಿಸಿಕೊಳ್ಳುವುದು ಸಾಧ್ಯವಿಲ್ಲ. ಹೊಸ ನಾಯಕತ್ವವು ಆಡಳಿತನೀತಿಯ ನಿರಂತರತೆಯನ್ನು ಖಚಿತಪಡಿಸಬೇಕು. ಸ್ವಚ್ಛ ಮತ್ತು ಪರಿಣಾಮಕಾರಿ ಆಡಳಿತ ನೀಡುವುದರ ಜೊತೆಗೆ, ಆರ್ಥಿಕ ಅಭಿವೃದ್ಧಿ ಹಾಗೂ ಸಾಮಾಜಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ ರಾಜ್ಯದ ಮುಂಚೂಣಿ ಸ್ಥಾನವನ್ನು ಉಳಿಸಬೇಕಾಗಿದೆ. ಒಂದಂತೂ ಸ್ಪಷ್ಟ. ಸಿದ್ದರಾಮಯ್ಯನವರ ರಾಜೀನಾಮೆ ಒಂದು ಆಡಳಿತಾವಧಿಯ ಮುಕ್ತಾಯವಷ್ಟೇ. ರಾಜ್ಯ ರಾಜಕಾರಣದ ಮೇಲಿನ ಅವರ ಪ್ರಭಾವವು ಹಲವು ವರ್ಷಗಳವರೆಗೆ ಉಳಿಯಲಿದೆ.

ಕರ್ನಾಟಕ ಕಂಡ ಪ್ರಭಾವಿ ಜನನಾಯಕರಲ್ಲಿ ಸಿದ್ದರಾಮಯ್ಯನವರೂ ಒಬ್ಬರು. ಮುಖ್ಯಮಂತ್ರಿ ಅವಧಿಯಲ್ಲಿನ ಅವರ ಹೆಜ್ಜೆಗುರುತು ರಾಜ್ಯ ರಾಜಕಾರಣದಲ್ಲಿ ದೀರ್ಘ ಕಾಲ ಉಳಿಯಲಿದೆ.

ಚಾಟಿ

ದೂರದೃಷ್ಟಿ ಇಲ್ಲದ ಆಕಾಂಕ್ಷೆ

ಕಾಂಗ್ರೆಸ್ ಸೇರಿದಂತೆ ಎಲ್ಲ ಪಕ್ಷಗಳಲ್ಲಿನ ಬಹುತೇಕ ಎಲ್ಲರಿಗೂ ಮುಖ್ಯಮಂತ್ರಿ ಆಗಬೇಕೆಂಬ ಆಸೆ ಇದೆ. ಆದರೆ, ಕರ್ನಾಟಕವನ್ನು ಬಲಿಷ್ಠ ರಾಜ್ಯವನ್ನಾಗಿ ರೂಪಿಸಬೇಕೆಂಬ ದೂರದೃಷ್ಟಿ ಯಾರಲ್ಲೂ ಕಾಣಿಸುವುದಿಲ್ಲ.

ಚೇತನ್ ಅಹಿಂಸಾ, ನಟ, 'ಎಕ್ಸ್'ನಿಂದ

ಕಿಡಿನುಡಿ

ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾದ ಪರಿಸ್ಥಿತಿ ಎದುರಾದ ಕ್ಷಣದಲ್ಲಿ, ತರಾತುರಿಯಲ್ಲಿ ಜಾತಿ ಜನಗಣತಿ ವರದಿ ಸ್ವೀಕರಿಸುವುದು ಹಾಗೂ ಅದರ ಮಾಹಿತಿಯನ್ನು ಮಾಧ್ಯಮಗಳಿಗೆ ಸೋರಿಕೆ ಮಾಡುವುದನ್ನು ರಾಜಕೀಯ ಬೂಟಾಟಿಕೆ ಅನ್ನದೆ ಇನ್ನೇನು ಹೇಳಲು ಸಾಧ್ಯ?

ಆರ್. ಅಶೋಕ, ವಿಧಾನಸಭಾ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಮಂಗಳವಾರ, 29-5-2001

• **ಕಾಶ್ಮೀರ ಭಾರತದ ಅವಿಭಾಜ್ಯ**

ನವದೆಹಲಿ, ಮೇ 28– ಕಾಶ್ಮೀರ ಭಾರತದ ಅವಿಭಾಜ್ಯ ಅಂಗ ಎಂಬ ಮಾತನ್ನು ಭಾರತ ಇಂದು ಪುನರುಚ್ಚರಿಸಿತು. ಕಿಕ್ಕಿರಿದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದ ವಿದೇಶಾಂಗ ವ್ಯವಹಾರಗಳ ಸಚಿವ ಜಸ್ವಂತ್ ಸಿಂಗ್ ಅವರು ಪಾಕಿಸ್ತಾನದ ಜತೆಗೆ ಭಾರತ ಶಾಂತಿ, ಪುನರ್ ಸಂಧಾನ ಮತ್ತು ಸಹಕಾರ ಬಯಸುವುದಾಗಿ ಹೇಳಿದರು. 'ಪಾಕಿಸ್ತಾನವೂ ಶಾಂತಿ ಮಾರ್ಗಕ್ಕೆ ಬರಬೇಕೆಂದು ಭಾರತ ಬಯಸುತ್ತದೆ' ಎಂದರು.

ಸರ್ಕಾರ ಏನಿದ್ದರೂ ಸಂಸತ್ತಿನ ಸೇವಕ. ಜಮ್ಮು ಮತ್ತು ಕಾಶ್ಮೀರ ಭಾರತದ ಅವಿಭಾಜ್ಯ ಅಂಗ ಎಂದು ಇಡೀ ಸಂಸತ್ತು ಹೇಳಿದೆ. ಆದ್ದರಿಂದ ಈ ನಿಲುವು ಅಚಲವಾದುದು ಎಂದರು.

• **ಬೆಂಗಳೂರು ಜಿಲ್ಲೆಯಲ್ಲಿ 1067 ಅಕ್ರಮ ಭೂ ಪರಿವರ್ತನೆ ಪ್ರಕರಣ**

ಬೆಂಗಳೂರು, ಮೇ 28– ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ 1016 ಎಕರೆ ಪ್ರದೇಶದಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಸರ್ಕಾರಿ ಜಮೀನಿನ ಕಬಳಿಕೆ, ಅಕ್ರಮ ಒತ್ತುವರಿ ಹಾಗೂ ಭೂ ಪರಿವರ್ತನೆಯ 1067 ಪ್ರಕರಣಗಳನ್ನು ಜಿಲ್ಲಾಡಳಿತ ಪತ್ತೆ ಹಚ್ಚಿದ್ದು, ಈ ಪೈಕಿ 213.94 ಕೋಟಿ ರೂಪಾಯಿ ಬೆಲೆಯ ಸರ್ಕಾರಿ ಭೂಮಿಯನ್ನು ಮತ್ತೆ ವಶಕ್ಕೆ ಪಡೆಯಲಾಗಿದೆ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಡಿ.ಎಸ್. ಅಶ್ವತ್ಥ್ ತಿಳಿಸಿದ್ದಾರೆ.

75 ವರ್ಷಗಳ ಹಿಂದೆ

ಮಂಗಳವಾರ, 29-5-1951

• **ನಾರಾಯಣರಾಯರ ಚುನಾವಣೆ ಅಕ್ರಮ: ಅಧಿಕೃತ ಪ್ರಕಟಣೆ**

ಬೆಂಗಳೂರು, ಮೇ 28– ಶಾಸನ ಸಭೆಗೆ ಬೆಂಗಳೂರು ನಗರ ಕ್ಷೇತ್ರದಿಂದ ಆರಿಸಲ್ಪಟ್ಟ ಶ್ರೀ ವಿ.ಎಸ್. ನಾರಾಯಣ ರಾಯರ ಆಯ್ಕೆ ಅಕ್ರಮವೆಂದು ಶ್ರೀ ಎಂ. ಕೃಷ್ಣಪಿಳ್ಳೆಯವರ ಅರ್ಜಿಯ ಮೇಲೆ ಚುನಾವಣಾ ಟ್ರಿಬ್ಯುನಲ್ ತೀರ್ಪಿತ್ತು ಚುನಾವಣಾ ಕಮೀಷನ್‌ಗೆ ತನ್ನ ವರದಿ ಕಳುಹಿಸಿತ್ತಷ್ಟೆ. ಆ ವರದಿಯನ್ನು ಒಪ್ಪಿ ಚುನಾವಣಾ ಕಮೀಷನ್ ಅದನ್ನು ಮೈಸೂರು ಸರ್ಕಾರಕ್ಕೆ ಕಳುಹಿಸಿದೆ. ಇಂದು ಸರ್ಕಾರ ವಿಶೇಷ ಗೆಜೆಟ್ ಪ್ರಕಟಣೆ ಹೊರಡಿಸಿ ನಾರಾಯಣ ರಾಯರ ಚುನಾವಣೆಯನ್ನು ಅಕ್ರಮ ಎಂದು ಸಾರಿದೆ.

ರಾಜಕಾರಣದಲ್ಲಿಯೂ ಅಸ್ಪೃಶ್ಯತೆ!



ಅನುಸಂಧಾನ

ರವೀಂದ್ರ ಭಟ್ಟ

ಅಸ್ಪೃಶ್ಯತೆ ಎನ್ನುವುದು ಕೇವಲ ಸಾಮಾಜಿಕ ವ್ಯವಸ್ಥೆಯಲ್ಲಿ ಇಲ್ಲ, ರಾಜಕೀಯದಲ್ಲಿಯೂ ಇದೆ. ಅಲ್ಲಿಯೂ ಕೂಡ ಶ್ರೇಣೀಕೃತ ವ್ಯವಸ್ಥೆಯೇ ಅಸ್ತಿತ್ವದಲ್ಲಿ ಇದೆ. ಸಮಾಜದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂದು ಇರುವ ಹಾಗೆಯೇ ರಾಜಕೀಯದಲ್ಲಿಯೂ ಶ್ರೇಣೀಕರಣ ಇದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಪಂಚಮರೂ ಇದ್ದಾರೆ. ಹಾಗೆಯೇ ರಾಜಕೀಯದಲ್ಲಿಯೂ ಪಂಚಮರಿದ್ದಾರೆ. ರಾಜಕಾರಣದಲ್ಲಿ ಕೆಲವು ಜಾತಿಗಳು ಮೇಲಿನ ಸ್ತರದಲ್ಲಿ ಇದ್ದರೆ ಇನ್ನು ಕೆಲವು ಕೆಳಗಿನ ಸ್ತರದಲ್ಲಿ ಇವೆ. ರಾಜಕೀಯ ನವ ವರ್ಣಾಶ್ರಮದ ಪದ್ಧತಿಯಲ್ಲಿ ಕೆಲವು ಜಾತಿಗಳು ಬ್ರಾಹ್ಮಣ ಸ್ಥಾನದಲ್ಲಿದ್ದರೆ, ಇನ್ನು ಕೆಲವು ಜಾತಿಗಳು ಅಸ್ಪೃಶ್ಯ ಜಾತಿಯ ಪಟ್ಟಿಯಲ್ಲಿ ಇವೆ. ಭಾರತದಲ್ಲಿ ಪ್ರಜಾಪ್ರಭುತ್ವ ಜಾರಿಗೆ ಬಂದು 78 ವರ್ಷವಾಗಿದ್ದರೂ ಇನ್ನೂ ಅಧಿಕಾರದ ರುಚಿಯನ್ನೇ ನೋಡದ ಸಾಕಷ್ಟು ಜಾತಿಗಳು ಇವೆ. ರಾಜಕೀಯದಲ್ಲಿ ಶಕ್ತಿ ಇದ್ದವನೇ ರಾಜ. ಇಲ್ಲಿ ಮುಖ ನೋಡಿ ಅಲ್ಲ, ಜಾತಿ ನೋಡಿ ಮಣೆ ಹಾಕಲಾಗುತ್ತದೆ.

ಕರ್ನಾಟಕದ ಈಗಿನ ಪರಿಸ್ಥಿತಿಯನ್ನೇ ಗಮನಿಸಿ. ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ ನೀಡಿದ್ದಾರೆ. ಇನ್ನೊಬ್ಬರು ಹೊಸ ಮುಖ್ಯಮಂತ್ರಿಯಾಗಿ ಆಯ್ಕೆಯಾಗುತ್ತಾರೆ. ಅಲ್ಲಿಯೂ ಕೂಡ ರಾಜಕೀಯ ಅನುಭವ, ಆಡಳಿತ ಅನುಭವ, ಪಾರದರ್ಶಕತೆ, ಪ್ರಾಮಾಣಿಕತೆ, ನಾಯಕತ್ವದ ಗುಣಗಳಿಗಿಂತ ಅವರ ಜಾತಿ ಯಾವುದು ಎನ್ನುವುದೇ ಮುಖ್ಯವಾಗುತ್ತದೆ. ಉಪ ಮುಖ್ಯಮಂತ್ರಿಗಳನ್ನು, ಸಚಿವ ಸಂಪುಟದ ಸದಸ್ಯರನ್ನು ಆಯ್ಕೆ ಮಾಡುವಾಗಲೂ ಲಿಂಗಾಯತ ಕೋಟಾ, ಒಕ್ಕಲಿಗರ ಕೋಟಾ, ಮುಸ್ಲಿಮರ ಕೋಟಾ, ದಲಿತ ಕೋಟಾ ಎಂದೇ ಲೆಕ್ಕ ಹಾಕಲಾಗುತ್ತದೆ.

ಕುರುಬ ಜಾತಿಗೆ ಸೇರಿದ ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದರೆ, ಒಕ್ಕಲಿಗ ಜಾತಿಗೆ ಸೇರಿದ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಸ್ಥಾನಕ್ಕೆ ಆಯ್ಕೆಯಾದರೆ, ಮುಂಬರುವ ವಿಧಾನ ಪರಿಷತ್ ಮತ್ತು ರಾಜ್ಯಸಭೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಮಾನದಂಡ ಕೂಡ ಬದಲಾಗುತ್ತದೆ. ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೂ ಜಾತಿ ಲೆಕ್ಕಾಚಾರದಲ್ಲಿಯೇ ನೇಮಕಾತಿ ನಡೆಯುತ್ತದೆ. ಕಾಂಗ್ರೆಸ್ ಪಕ್ಷದಲ್ಲಿ ಆಗುವ ಬದಲಾವಣೆ ಪ್ರಮುಖ ವಿರೋಧ ಪಕ್ಷವಾಗಿರುವ ಬಿಜೆಪಿಯ ಮೇಲೂ ಪರಿಣಾಮ ಬೀರುತ್ತದೆ. ವಿಧಾನ ಪರಿಷತ್‌ಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಲೆಕ್ಕಾಚಾರ ಕೂಡ ಬದಲಾಗುತ್ತದೆ. ಇತರ ಸಣ್ಣ ಜಾತಿಯವರಿಗೆ ಟಿಕೆಟ್ ನೀಡುವ ಹುಮ್ಮಸ್ಸಿನಲ್ಲಿಯೂ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಈಗ ಕುರುಬರಿಗೆ ಟಿಕೆಟ್ ನೀಡುವ ಬಗ್ಗೆ ಬಿಜೆಪಿ ಆಲೋಚನೆ ನಡೆಸುತ್ತದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸಂವಿಧಾನಬದ್ಧವಾಗಿಯೇ ಮೀಸಲಾತಿ ನೀಡಿರುವುದರಿಂದ ಅವರಿಗೆ ಅವಕಾಶಗಳು ಅನಿವಾರ್ಯವಾಗಿಯಾದರೂ ಸಿಗುತ್ತಿವೆ. ಆ ಮಟ್ಟಿಗೆ ಅವರಿಗೆ ರಾಜಕೀಯ ನ್ಯಾಯ ಸಿಗುತ್ತಿದೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಇಂತಹ ವ್ಯವಸ್ಥೆ ಜಾರಿಗೆ ತರದೇ ಇದ್ದಿದ್ದರೆ ಪರಿಶಿಷ್ಟರ ರಾಜಕೀಯವಾಗಿ ಮೂಲೆಗುಂಪಾಗಿಯೇ ಇರುತ್ತಿದ್ದರು. ಸಾಮಾಜಿಕ ವ್ಯವಸ್ಥೆಯಲ್ಲಿಯೂ ಅವರು ಅಸ್ಪೃಶ್ಯರು, ರಾಜಕೀಯ ವ್ಯವಸ್ಥೆಯಲ್ಲಿಯೂ ಅಸ್ಪೃಶ್ಯರಾಗಿಯೇ ಇರುತ್ತಿದ್ದರು.

ಮುಂದಿನ ತಿಂಗಳು ವಿಧಾನ ಪರಿಷತ್ ಮತ್ತು ರಾಜ್ಯಸಭೆಯ ಕೆಲವು ಸ್ಥಾನಗಳಿಗೆ ಚುನಾವಣೆ ನಡೆಯಲಿದೆ; ಕಾಂಗ್ರೆಸ್ ಮತ್ತು ಬಿಜೆಪಿಯಲ್ಲಿ ಟಿಕೆಟ್ ಹಂಚಿಕೆಯ ತಯಾರಿ ಈಗಾಗಲೇ ಆರಂಭವಾಗಿದೆ. ಆದರೆ ಈಗಲೂ ಸಣ್ಣ ಮತ್ತು ಅತಿಸಣ್ಣ ಹಿಂದುಳಿದ ಜಾತಿಗೆ ಸೇರಿದ ಅಭ್ಯರ್ಥಿಗಳು ಯಾವ ಪಕ್ಷಕ್ಕೂ ಕಾಣುವುದೇ ಇಲ್ಲ. ಲಾಗಾಯ್ತಿನಿಂದಲೂ ದಲಿತ, ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಪರ ಎಂದೇ ವಾದಿಸಿಕೊಂಡು ಬಂದಿರುವ ಕಾಂಗ್ರೆಸ್ ಪಕ್ಷ ಕೂಡ ಹಿಂದುಳಿದ ಮತ್ತು ಅತಿ ಹಿಂದುಳಿದ ಸಮುದಾಯದ ವ್ಯಕ್ತಿಗಳನ್ನು ಗುರುತಿಸಿ ಮೇಲ್ಮನೆಗೆ ಕಳಿಸುವ ಪದ್ಧತಿಯನ್ನು ಬಿಟ್ಟು ಬಹಳ ಕಾಲವೇ ಸಂದಿದೆ.

ಬಿಜೆಪಿಯು ಇತ್ತೀಚಿನ ವರ್ಷಗಳಲ್ಲಿ ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯಗಳ ಪ್ರಬಲ ರಾಜಕಾರಣದ ಜೊತೆಗೆ ಸಮತೋಲನ ಕಾಯ್ದುಕೊಳ್ಳಲು, ಸಾಂಪ್ರದಾಯಿಕವಾಗಿ ರಾಜಕೀಯ ಶಕ್ತಿ ಇಲ್ಲದ ಸೂಕ್ಷ್ಮ ಹಿಂದುಳಿದ ಜಾತಿಗಳಿಗೆ ಟಿಕೆಟ್ ನೀಡುವ ತಂತ್ರಗಾರಿಕೆಯನ್ನು ಅನುಸರಿಸುತ್ತಿದೆ. ನಾರಾಯಣ ಸಾ ಭಾಂಡಗೆ, ಅಶೋಕ್ ಗಸ್ತಿ, ಕೆ. ನಾರಾಯಣ ಮುಂತಾದ ಅತ್ಯಂತ ಹಿಂದುಳಿದ ಜಾತಿಗಳಿಗೆ ಸೇರಿದವರನ್ನು ರಾಜ್ಯಸಭೆಗೆ ಕಳಿಸಿದೆ. ಶಾಂತಾರಾಮ ಸಿದ್ದಿ, ಎಸ್. ರವಿಕುಮಾರ್ ಮುಂತಾದವರನ್ನು ವಿಧಾನ ಪರಿಷತ್‌ಗೆ ಕಳಿಸಿದೆ. ಇಂತಹ ಪ್ರಯತ್ನಗಳನ್ನು ಕಾಂಗ್ರೆಸ್ ಕೂಡ ಮಾಡಬೇಕಾದ ಅನಿವಾರ್ಯತೆ ಇದೆ. ರಾಜಕೀಯವಾಗಿ ಯಾವುದೇ ಜಾತಿಗಳು ಅನಾಥ ಎಂಬ ಭಾವನೆ ಬಾರದಂತೆ ನೋಡಿಕೊಳ್ಳಬೇಕಾಗಿದೆ. ತಬ್ಬಲಿಯು ನೀನಾದೆ ಮಗನೆ ಎಂದು ಹೇಳುವ ಪರಿಸ್ಥಿತಿ ಯಾವ ಜಾತಿಗಳಿಗೂ ಬರಬಾರದು.

ಕರ್ನಾಟಕದ ರಾಜಕಾರಣದಲ್ಲಿ ಮತ್ತು ಇತ್ತೀಚಿನ ಕಾಂತರಾಜು ವರದಿ ಹಾಗೂ ಹಿಂದುಳಿದ ವರ್ಗಗಳ ಆಯೋಗಗಳ ಚರ್ಚೆಗಳ ಪ್ರಕಾರ, ರಾಜ್ಯದಲ್ಲಿ ನೂರಕ್ಕೂ ಹೆಚ್ಚು ಅತ್ಯಂತ ಸಣ್ಣ ಮತ್ತು ಅತಿ ಹಿಂದುಳಿದ ಜಾತಿಗಳಿಗೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ವಿಧಾನ ಪರಿಷತ್ ಇರಲಿ, ಯಾವುದೇ ಹಂತದಲ್ಲೂ ರಾಜಕೀಯ ಪ್ರಾತಿನಿಧ್ಯವೂ ಸಿಕ್ಕಿಲ್ಲ. ಕರ್ನಾಟಕದಲ್ಲಿ ಸುಮಾರು 800ಕ್ಕೂ ಹೆಚ್ಚು ಸಣ್ಣ ಸಣ್ಣ ಉಪಜಾತಿ ಹಾಗೂ ಅಲೆಮಾರಿ ಸಮುದಾಯಗಳಿದ್ದು, ರಾಜಕೀಯ ಪಕ್ಷಗಳು ಬರೀ ಪ್ರಬಲ ಅಥವಾ ಸಾಂಪ್ರದಾಯಿಕ ದೊಡ್ಡ ಜಾತಿಗಳಿಗೆ ಮಾತ್ರ ಟಿಕೆಟ್ ನೀಡುವುದರಿಂದ ಈ ಸಮುದಾಯಗಳು ಸಂಪೂರ್ಣವಾಗಿ ವಂಚಿತವಾಗಿವೆ. ಆ ಸಮುದಾಯಗಳನ್ನು ರಾಜಕೀಯವಾಗಿ ಮುನ್ನೆಲೆಗೆ ತರುವ ಉತ್ತರದಾಯಿತ್ವವನ್ನು ಯಾವ ಪಕ್ಷವೂ ನಿರ್ವಹಿಸುತ್ತಿಲ್ಲ.

ಸುಡುಗಾಡು ಸಿದ್ಧರು, ಹೆಳವರು, ಬುಡುಬುಡುಕಿ, ಪಿಚ್ಚಗುಂಟ್ಲ, ಶಿಕ್ಕಲಿಗರ್, ಗೊಂಧಳಿ, ದಾಸರಿ, ಕೊರಮ, ಕೊರಚ, ಮೇದ, ಗೌರಿಗ, ಶಿಂಪಿ, ರಂಗಾರಿ, ಕುಲಾಲ, ಕುಂಬಾರ, ದರ್ಜಿ ಸಮುದಾಯದ ತೀರಾ ಸಣ್ಣ ಒಳಪಂಗಡಗಳು, ಹಂದಿಗೊಲ್ಲ ಮುಂತಾದ ಜಾತಿಗಳು ರಾಜಕೀಯವಾಗಿ ತಬ್ಬಲಿಗಳಾಗಿವೆ.

ವಿಧಾನ ಪರಿಷತ್‌ನಲ್ಲಿ ರಾಜಕೀಯ ಮೀಸಲಾತಿ ಕಲ್ಪಿಸುವ ವಿಷಯದಲ್ಲಿ ಕರ್ನಾಟಕ ಇಡೀ ದೇಶಕ್ಕೇ ಮಾದರಿಯಾಗಿತ್ತು. ರಾಜ್ಯದಲ್ಲಿ 'ಮೇಲ್ಮನೆ' ಎಂಬ ಪರಿಕಲ್ಪನೆ ಆರಂಭವಾದ ಹೊಸದರಲ್ಲಿಯೇ ಹಿಂದುಳಿದವರಿಗೆ ಮೀಸಲಾತಿ ಸೌಲಭ್ಯವನ್ನೂ ನೀಡಲಾಗಿದೆ. 1907ರಲ್ಲಿ ಮೈಸೂರು ರಾಜ್ಯದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 'ನ್ಯಾಯ ವಿಧೇಯಕ ಸಭೆ' (ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್) ಆರಂಭಿಸಿದಾಗ ಅದು ಅಧಿಕಾರಿಗಳ ಮತ್ತು ಜಮೀನ್ದಾರರ ಸಭೆ ಮಾತ್ರವಾಗಿತ್ತು. ಬ್ರಾಹ್ಮಣರೇ ತುಂಬಿ ಹೋಗಿದ್ದರು. ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಾಗದೇ ಇರುವ ಜಾತಿಗಳಿಗೆ ಪ್ರಾತಿನಿಧ್ಯ ನೀಡುವ ಉದ್ದೇಶದಿಂದ ದಲಿತ, ಹಿಂದುಳಿದ, ಮುಸ್ಲಿಮ್ ಮತ್ತು ಕ್ರೈಸ್ತ ಸಮುದಾಯಕ್ಕೆ ಸೇರಿದವರಿಗೆ ನಾಮನಿರ್ದೇಶನ ಮಾಡುವ ಪದ್ಧತಿಯನ್ನು 1914ರಲ್ಲಿ ಆರಂಭಿಸಲಾಯಿತು. 1923ರಲ್ಲಿ ಕೌನ್ಸಿಲ್‌ನ ಬಲವನ್ನು 50ಕ್ಕೆ ಹೆಚ್ಚಿಸಲಾಯಿತು. ಇದರಲ್ಲಿ ವಾಣಿಜ್ಯ, ಕಾರ್ಮಿಕ, ಮೈಸೂರು ವಿಶ್ವವಿದ್ಯಾಲಯ ಮತ್ತು ತಳ ಸಮುದಾಯಗಳಿಗೆ ಕಡ್ಡಾಯವಾಗಿ ಸ್ಥಾನಗಳನ್ನು ಕಾಯ್ದಿರಿಸುವ ಮೂಲಕ ರಾಜಕೀಯ ಪ್ರಾತಿನಿಧ್ಯದ ವ್ಯಾಪ್ತಿಯನ್ನು ವಿಸ್ತರಿಸಲಾಯಿತು.

ಸ್ವಾತಂತ್ರ್ಯಾನಂತರ ವಿಧಾನ ಪರಿಷತ್ ಬದಲಾಯಿತು. ಸ್ವಾತಂತ್ರ್ಯಬಂದ ಮೊದಲ ಎರಡು ದಶಕಗಳಲ್ಲಿ ಲಿಂಗಾಯತ ಮತ್ತು ಒಕ್ಕಲಿಗರ ಪ್ರಾಬಲ್ಯ ಅಧಿಕವಾಗಿತ್ತು. ಈಗಲೂ ಅವರ ಪ್ರಾಬಲ್ಯವೇ ಜಾಸ್ತಿ ಇದೆ. ವಿಧಾನ ಪರಿಷತ್‌ನ 75 ಸ್ಥಾನಗಳ ಪೈಕಿ 40ಕ್ಕೂ ಹೆಚ್ಚು ಸದಸ್ಯರು ಈ ಸಮುದಾಯಕ್ಕೆ ಸೇರಿದವರೇ ಆಗಿದ್ದಾರೆ. ವಿಧಾನ ಸಭೆಯ 224 ಸ್ಥಾನಗಳಲ್ಲಿ 90ಕ್ಕೂ ಹೆಚ್ಚು ಈ ಸಮುದಾಯಗಳ ಸದಸ್ಯರೇ ಇದ್ದಾರೆ.

ವಿಧಾನಸಭೆಯಲ್ಲಿ ಪರಿಶಿಷ್ಟರಿಗೆ ಮೀಸಲಾತಿ ಇದ್ದ ಹಾಗೆ ವಿಧಾನ ಪರಿಷತ್‌ಗೆ ಕಾನೂನುಬದ್ಧವಾಗಿ ಪರಿಶಿಷ್ಟರಿಗೆ, ಹಿಂದುಳಿದವರಿಗೆ ಮೀಸಲಾತಿ ಇಲ್ಲ. ಅತಿ ಹಿಂದುಳಿದ ವರ್ಗದವರಿಗೆ ಮೀಸಲಾತಿ ಸೌಲಭ್ಯ ನೀಡಬೇಕು ಎಂಬ ಬೇಡಿಕೆ ಇದೆಯಾದರೂ ಅದು ಚಾಲ್ತಿಗೆ ಬಂದಿಲ್ಲ. ಆದರೂ ಹಿಂದುಳಿದ, ದಲಿತ ಮತ್ತು ಅಲ್ಪಸಂಖ್ಯಾತರಿಗೆ ಮೇಲ್ಮನೆಯಲ್ಲಿ ಒಂದಿಷ್ಟು ಅವಕಾಶಗಳು ಸಿಕ್ಕಿವೆ.

1970ರಲ್ಲಿ ದೇವರಾಜ ಅರಸು ಅವರ ಯುಗ ಆರಂಭವಾದ ನಂತರ ಕರ್ನಾಟಕದ ರಾಜಕೀಯದಲ್ಲಿ ಸಾಕಷ್ಟು ಬದಲಾಯಿತು. ಅರಸು ಅವರು ಎಲ್.ಜಿ. ಹಾವನೂರು ವರದಿಯ ನಂತರ ಪ್ರಬಲ ಜಾತಿಗಳ ಪ್ರಾಬಲ್ಯಕ್ಕೆ ತಡೆ ಹಾಕಿ, ಅದುವರೆಗೆ ರಾಜಕೀಯ ಶಕ್ತಿಯೇ ಇಲ್ಲದ ಹಿಂದುಳಿದ ಸಣ್ಣ ಸಣ್ಣ ಜಾತಿಗಳನ್ನು ಒಗ್ಗೂಡಿಸಿದರು. ಕುರುಬ, ಈಡಿಗ, ಬೆಸ್ತ, ನೇಕಾರ, ಗಾಣಿಗ, ಮಡಿವಾಳ, ಸವಿತಾ ಸಮಾಜ ಮುಂತಾದ ಹಿಂದುಳಿದ ಜಾತಿಗಳ ಅಭ್ಯರ್ಥಿಗಳನ್ನು ಗುರುತಿಸಿ ಮೇಲ್ಮನೆಗೆ ಕಳುಹಿಸಿದರು. ಮುಖ್ಯಮಂತ್ರಿಯಾಗಿ ಅತಿ ಹೆಚ್ಚು ದಿನಗಳು ಅಧಿಕಾರದಲ್ಲಿದ್ದ ದೇವರಾಜ ಅರಸು ಅವರ ದಾಖಲೆಯನ್ನು ಮುರಿದ ಸಿದ್ದರಾಮಯ್ಯ ಅವರು ಕೂಡ ಪೂರ್ಣ ಪ್ರಮಾಣದಲ್ಲಿ ಅತಿ ಹಿಂದುಳಿದ ಜಾತಿಗಳಿಗೆ ನ್ಯಾಯ ಒದಗಿಸಿ ಕೊಡುವಲ್ಲಿ ಗುರಿ ತಲುಪಲು ಸಾಧ್ಯವಾಗಲಿಲ್ಲ.

ರಾಜ್ಯಸಭೆ ಮತ್ತು ವಿಧಾನ ಪರಿಷತ್ ಚುನಾವಣೆ ಈಗ ಮತ್ತೆ ಬಂದಿದೆ. ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುವ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳಿಗೆ ಅವುಗಳ ಸಾಮಾಜಿಕ ನ್ಯಾಯದ ಬದ್ಧತೆ ಪ್ರದರ್ಶನಕ್ಕೆ ಸಕಾಲ. ಸಮುದಾಯಗಳ ಕುರಿತ ಕಾಳಜಿ ಬರಿಯ ಬಾಯಿಮಾತಿಗೆ ಸೀಮಿತವಾಗದೆ ಕಾರ್ಯರೂಪಕ್ಕೆ ಬರಲಿ. ರಾಜಕೀಯ ತಬ್ಬಲಿಗಳಿಗೂ ಮೇಲ್ಮನೆ ಬಾಗಿಲು ತೆರೆಯಲಿ.

> ರಾಜಕಾರಣದಲ್ಲಿ ಸಮಾನತೆ ಸಾಧ್ಯವಾದಾಗ, ಸಾಮಾಜಿಕ ಅಸಮಾನತೆ ತಂತಾನೇ ದುರ್ಬಲಗೊಳ್ಳತೊಡಗುತ್ತದೆ. ಜಾತಿಯ ತಾರತಮ್ಯ ರಾಜಕಾರಣದಲ್ಲೂ ಮುಂದುವರಿದಿರುವುದು ಪ್ರಜಾಪ್ರಭುತ್ವದ ಪೂರ್ಣ ಫಲ ಭಾರತದಲ್ಲಿ ಸಾಕಾರಗೊಳ್ಳದಿರುವುದಕ್ಕೆ ಕಾರಣಗಳಲ್ಲೊಂದಾಗಿದೆ. ರಾಜಕೀಯ ತಬ್ಬಲಿಗಳಿಗೆ ಅಧಿಕಾರದ ಬಾಗಿಲು ತೆರೆಯುವುದು ಯಾವಾಗ?

ವಾಚಕರ ವಾಣಿ

ಹಿಂದುಳಿದ ವರ್ಗದ ಬಗ್ಗೆ ಮೊಸಳೆ ಕಣ್ಣೀರು

ರಾಜ್ಯ ರಾಜಕೀಯದಲ್ಲಿನ ಅನಿರೀಕ್ಷಿತ ಬದಲಾವಣೆಯ ಹಿನ್ನೆಲೆಯಲ್ಲಿ ಬಿಜೆಪಿಯ ಕೆಲವು ನಾಯಕರು ಕಾಂಗ್ರೆಸ್ ಪಕ್ಷದ ವರಿಷ್ಠರನ್ನು ಹಿಂದುಳಿದ ವರ್ಗಗಳ ವಿರೋಧಿ ಎಂದು ಬಿಂಬಿಸಲು ಯತ್ನಿಸುತ್ತಿದ್ದಾರೆ. (ಪ್ರ.ವಾ., ಮೇ 28). ಈ ರೀತಿ ಬಿಂಬಿಸಲು ಬಿಜೆಪಿಗೆ ಇರುವ ನೈತಿಕತೆಯಾದರೂ ಎಂಥದು? ಬಿಜೆಪಿ ರಾಜ್ಯದಲ್ಲಿ ಅಧಿಕಾರದಲ್ಲಿ ಇದ್ದಾಗ ಹಿಂದುಳಿದ ವರ್ಗದ ಮೀಸಲಾತಿಯನ್ನು ಕಡಿಮೆ ಮಾಡಿ ಮುಂದುವರಿದ ವರ್ಗಕ್ಕೆ ನೀಡಲು ಯತ್ನಿಸಿತು. ಆದರೆ, ಕಾಂಗ್ರೆಸ್ ಪಕ್ಷ ಅಹಿಂದ ಹಿನ್ನೆಲೆಯ ಸಿದ್ದರಾಮಯ್ಯ ಅವರಿಗೆ ಅಧಿಕಾರ ನೀಡಿ ಹಿಂದುಳಿದ ವರ್ಗದ ಪರವಾದ ತನ್ನ ಕಾಳಜಿಗೆ ಬದ್ಧವಾಗಿರುವುದನ್ನು ಸಾಬೀತುಪಡಿಸಿದೆ. ಬಿಜೆಪಿ ತನ್ನನ್ನು ಹಿಂದುಳಿದ ವರ್ಗದ ಪರ ಎಂದು ಬಿಂಬಿಸಿಕೊಳ್ಳಲು ಯತ್ನಿಸುತ್ತಿರುವುದು ಹಾಸ್ಯಾಸ್ಪದ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ

ಸಾಮಾನ್ಯರಿಗೆ ಆತ್ಮವಿಶ್ವಾಸ ಕೊಟ್ಟ ನಾಯಕ

ನನ್ನ ತಂದೆಯವರಿಗೆ ಜನನಾಯಕ ಸಿದ್ದರಾಮಯ್ಯ ಅವರ ಕುರಿತು ಅಪಾರ ಗೌರವ. ಆ ಗೌರವದಿಂದ, ನಾನು ಶಾಲೆಗೆ ಸೇರುವ ಸಮಯದಲ್ಲಿ (2004ರಲ್ಲಿ) ನನ್ನ ಹೆಸರನ್ನೇ ಸಿದ್ದರಾಮಯ್ಯ ಎಂದು ಬದಲಿಸಿದರು. ಚಿಕ್ಕವಯಸ್ಸಿನಲ್ಲೇ ಸಮಾಜದಲ್ಲಿನ ಭೇದಭಾವ, ತಾತ್ಸಾರ ಎಲ್ಲವನ್ನೂ ನೋಡಿದ್ದೇನೆ. ಈಗ ಕಾಲ ಬದಲಾಗಿದೆ. ನಮ್ಮ ಸಮುದಾಯದವರೂ ಶಿಕ್ಷಣದಲ್ಲಿ, ಉದ್ಯೋಗದಲ್ಲಿ, ಸಮಾಜದಲ್ಲಿ ತಮ್ಮದೇ ಆದ ಸ್ಥಾನ ರೂಪಿಸಿಕೊಂಡಿದ್ದಾರೆ. 'ಕುರಿ ಕಾಯುವವರ ಮಗ' ಎನ್ನುವ ಹಾದಿಯಿಂದ ಕರ್ನಾಟಕದ ಮುಖ್ಯಮಂತ್ರಿ ಸ್ಥಾನದವರೆಗೆ ಬಂದ ಸಿದ್ದರಾಮಯ್ಯ ಅವರ ಜೀವನ ನಮ್ಮಂತಹ ಸಾವಿರಾರು ಕುಟುಂಬಗಳಿಗೆ ಆತ್ಮವಿಶ್ವಾಸ ಮತ್ತು ಸ್ಫೂರ್ತಿ ಕೊಟ್ಟಿದೆ. ಇವರ ಆಡಳಿತದಲ್ಲಿ ಸರ್ಕಾರಿ ಉದ್ಯೋಗದ ಆಕಾಂಕ್ಷಿಗಳಿಗೆ ಉದ್ಯೋಗ ದೊರೆತಿಲ್ಲ ಎನ್ನುವ ಬೇಸರ ಇದ್ದರೂ, ಸಾಮಾನ್ಯ ಜನರ ಪರ ನಿಂತ ಅವರ ಆಡಳಿತವನ್ನು ನಾನು ಯಾವತ್ತೂ ಗೌರವಿಸುತ್ತೇನೆ.

ಸಿದ್ದರಾಮಯ್ಯ ಚಂದ್ರಪ್ಪ ಮೈದೊಳಲು, ಶಿವಮೊಗ್ಗ

ದಲಿತ ರಾಜಕೀಯ ಶಕ್ತಿ ರೂಪುಗೊಳ್ಳಲಿ

ದೇಶಕ್ಕೆ ಸ್ವಾತಂತ್ರ್ಯ ಬಂದು ಎಂಟು ದಶಕಗಳಾಗುತ್ತಾ ಬಂದರೂ ಕರ್ನಾಟಕದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳು ದಲಿತ ನಾಯಕನಿಗೆ ಮುಖ್ಯಮಂತ್ರಿ ಸ್ಥಾನ ನೀಡಿಲ್ಲ. ಜನಸಂಖ್ಯೆಯಲ್ಲಿ ದೊಡ್ಡ ಸಂಖ್ಯೆಯಲ್ಲಿರುವ ದಲಿತರು ಅಧಿಕಾರದಲ್ಲಿ ಕೊನೆಯಲ್ಲಿಯೇ ಉಳಿದಿದ್ದಾರೆ.

ಚುನಾವಣೆಯಲ್ಲಿ ಎಲ್ಲರಿಗೂ ದಲಿತರ ಮತ ಬೇಕು. ಅಧಿಕಾರ ಹಂಚಿಕೆಯಲ್ಲಿ ಮಾತ್ರ ದಲಿತರಿಗೆ ನ್ಯಾಯ ಇಲ್ಲ. ದಲಿತರು ಬರೀ ಮತಬ್ಯಾಂಕ್ ಅಲ್ಲ, ರಾಜ್ಯವನ್ನು ಮುನ್ನಡೆಸುವ ಶಕ್ತಿಯೂ ಅವರಲ್ಲಿದೆ. ದಲಿತರು ಇನ್ನಾದರೂ ಎಚ್ಚರಗೊಳ್ಳಬೇಕು. ಸ್ವಾಭಿಮಾನದಿಂದ ತಮ್ಮದೇ ಆದ ರಾಜಕೀಯ ಶಕ್ತಿಯನ್ನು ರೂಪಿಸಿಕೊಳ್ಳಬೇಕು. ರಾಜಕೀಯವಾಗಿ ಸಂಘಟನೆಗೊಂಡು ತಮ್ಮದೇ ಅಸ್ತಿತ್ವವನ್ನು ಕಂಡುಕೊಳ್ಳದೆ ಹೋದರೆ ದಲಿತ ಸಮುದಾಯದ ಏಳಿಗೆ ಸಾಧ್ಯವಿಲ್ಲ.

ಕದ್ರೇಶ್‌ಕುಮಾರ್ ವಿ.ಎನ್., ಮಳವಳ್ಳಿ

ಸಿದ್ದು–ಸದ್ದು–ಗುದ್ದು

ಹೈಕಮಾಂಡಿನ
ಆದೇಶಕ್ಕೆ ಬಾಗಿದರು
ಸಿಎಂ ಸಿದ್ದು;
ರಾಜ್ಯದಲ್ಲಿ ಅಡಗಿತೇ
ಸಾಮಾಜಿಕ ನ್ಯಾಯದ
ಸದ್ದು!
ದಮನಿತರು
'ಕೈ'ಗೆ ಕೊಡುವರೆ
ಚುನಾವಣೆಯಲ್ಲಿ
ಗುದ್ದು?

ವೈ. ಯಮುನೇಶ್, ಹೊಸಪೇಟೆ

'ಸಿದ್ದರಾಮಯ್ಯ ಮಾದರಿ' ಅನುಕರಣೀಯ

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿರುವುದು ರಾಜ್ಯದ ಜನರಲ್ಲಿ ತೀವ್ರ ಬೇಸರ ಮತ್ತು ಶೂನ್ಯಭಾವವನ್ನು ಮೂಡಿಸಿದೆ. ಅವರು ಒಬ್ಬ ರಾಜಕಾರಣಿ ಮಾತ್ರವಾಗಿರದೆ ಶೋಷಿತರ, ಬಡವರ ಮತ್ತು ಹಿಂದುಳಿದ ವರ್ಗಗಳ ಆಶಾಕಿರಣವಾಗಿದ್ದರು. ಅವರ ನಿರ್ಗಮನದಿಂದಾಗಿ ಮುಂಬರುವ ದಿನಗಳಲ್ಲಿ ರಾಜ್ಯದ ಸಾಮಾನ್ಯ ಜನರಿಗೆ ಸರ್ಕಾರದ ಸೌಲಭ್ಯಗಳು ತಲಪುವಲ್ಲಿ ತೊಂದರೆಯಾಗಬಹುದು ಎಂಬ ಆತಂಕ ಮೂಡಿದೆ. ಸಿದ್ದರಾಮಯ್ಯ ಅವರ ದೂರದೃಷ್ಟಿಯ ಯೋಜನೆಗಳ ಫಲವಾಗಿ ರಾಜ್ಯ ದೇಶದ ಗಮನಸೆಳೆದಿದೆ ಹಾಗೂ ಇಲ್ಲಿನ ಕಲ್ಯಾಣ ಕಾರ್ಯಕ್ರಮಗಳನ್ನು ಬೇರೆ ಬೇರೆ ರಾಜ್ಯಗಳು ಅನುಕರಿಸುತ್ತಿವೆ. ಸಿದ್ದರಾಮಯ್ಯ ಅವರ ರಾಜೀನಾಮೆಯಿಂದಾಗಿ ಕಡುಬಡವರು, ಕಾರ್ಮಿಕರು ಮತ್ತು ರೈತ ವರ್ಗದ ಜನರಲ್ಲಿ ಒಂದು ರೀತಿಯ ಅಸುರಕ್ಷಿತ ಭಾವನೆ ಕಾಡುತ್ತಿದೆ. ಇಷ್ಟು ದಿನ ತಮಗೆ ಆಸರೆಯಾಗಿದ್ದ ನಾಯಕನ ನಿರ್ಗಮನದಿಂದಾಗಿ ಜನಪರ ಯೋಜನೆಗಳ ವೇಗ ಕುಂಠಿತಗೊಳ್ಳಬಹುದು ಎಂಬ ಭೀತಿ ಅವರಲ್ಲಿದೆ. ಆ ಆತಂಕ ಸುಳ್ಳಾಗುವಂತೆ ಬರಲಿರುವ ಮುಖ್ಯಮಂತ್ರಿ ಕಾರ್ಯನಿರ್ವಹಿಸಲಿ.

ಶಿವಕುಮಾರ ಎಂ. ಹೊಸಹಳ್ಳಿ, ಬೆಂಗಳೂರು

ಕ್ರಿಕೆಟ್ ನವತಾರೆ: ಅಸಾಧಾರಣ 'ವೈಭವ'

ಐಪಿಎಲ್ ಎಲಿಮಿನೇಟರ್ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ತಂಡದ ವೈಭವ್ ಸೂರ್ಯವಂಶಿ ಅವರು ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಬ್ಯಾಟಿಂಗ್‌ನಲ್ಲಿ ತೋರಿದ ಪ್ರದರ್ಶನ ಅಸಾಧಾರಣವಾದುದು. ಬರೀ 27 ಎಸೆತಗಳಲ್ಲಿ 97 ರನ್ ಸೂರೆಗೊಂಡು, ಮೂರು ರನ್‌ಗಳ ಅಂತರದಲ್ಲಿ ಶತಕ ವಂಚಿತರಾದರು. 15ನೇ ವಯಸ್ಸಿನ ಬಾಲಕನ ಬ್ಯಾಟಿಂಗ್ ನೋಡುಗರ ಕಣ್ಣಿಗೆ ರಸದೌತಣ. ಕ್ರಿಸ್ ಗೇಲ್ ಅವರ ದಾಖಲೆ ಮುರಿದು, ಐಪಿಎಲ್ ಆವೃತ್ತಿಯೊಂದರಲ್ಲಿ ಗರಿಷ್ಠ ಸಿಕ್ಸರ್ ಬಾರಿಸಿದ ದಾಖಲೆ ವೈಭವ್ ಅವರದ್ದಾಗಿದೆ. ಈಗವರು ಭಾರತೀಯ ಕ್ರಿಕೆಟ್ ಜಗತ್ತಿನ ತಾರೆ. ಈ ಪ್ರತಿಭೆಯನ್ನು ಬಿಸಿಸಿಐ ಹೇಗೆ ಬಳಸಿಕೊಳ್ಳುವುದೋ ನೋಡಬೇಕು.

ಬೆಂ.ಮು. ಮಾರುತಿ, ಬೆಂಗಳೂರು

ಚುರುಮುರಿ

ಕಂಡೀಶನ್ಸ್ ಅಪ್ಲೈ!

• ಬಿ.ಎನ್. ಮಲ್ಲೇಶ್

'ರೀ... ಎಲ್ಲ ಕಡಿ ನಾಯಕತ್ವ, ಯಜಮಾನಿಕಿ ಬದಲಾಗ್ತದಾವು, ನೀವ್ಯಾವಾಗ ನಂಗೆ ಮನಿ ಯಜಮಾನಿಕಿ ಬಿಟ್ಟು ಕೊಡೋದು?' ಹೆಂಡತಿಯ ದಿಢೀರ್ ಪ್ರಶ್ನೆಗೆ ತಬ್ಬಿಬ್ಬಾದ ತೆಪರೇಸಿ, 'ಅಲ್ಲೇ ನೀನೇ ಮನಿ ಯಜಮಾನಿ, ನಿನಗೇನ್ ಬಿಟ್ಟು ಕೊಡೋದೈತಿ?' ಎಂದ.

'ಇವೆಲ್ಲ ನಾಟಕ ಸಾಕು, ಮದುವ್ಯಾಗಿ ಎಂಟು ವರ್ಷಾತು, ನೀವೇ ಅಧಿಕಾರ ನಡೆಸ್ತಿದೀರಿ, ಈಗಾದ್ರು ನಂಗೆ ಬಿಟ್ ಕೊಡ್ರಿ...'

'ಅಲ್ಲ, ಅದೂ...'

'ಅಲ್ಲನೂ ಇಲ್ಲ, ಬೆಲ್ಲನೂ ಇಲ್ಲ. ನಾ ನಿಮ್ಮ ಅರ್ಧಾಂಗಿ ಅಂದಮ್ಯಾಲ ಅರ್ಧ ಅಧಿಕಾರ ನಂಗೂ ಐತಿ. ನಾನೂ ನಿಮ್ ಸಮಕ್ಕೆ ದುಡುದು ಈ ಮನಿ ನಡೆಸೀನಿ, ಹೌದಿಲ್ಲೋ?'

ಇದೊಳ್ಳೆ ಪೀಕಲಾಟಕ್ಕೆ ಬಂತಲ್ಲಪ ಅಂದುಕೊಂಡ ತೆಪರೇಸಿ, 'ಆತು, ಅಧಿಕಾರ ಬಿಟ್ಟು ಕೊಡ್ತೀನಿ, ಆದ್ರೆ ಕಂಡೀಶನ್ಸ್ ಅಪ್ಲೈ...' ಎಂದ.

'ಕಂಡೀಶನ್ಸಾ? ಏನವು?'

'ವೆರಿ ಸಿಂಪಲ್, ನೀನು ಯಾವುದೇ ನಿರ್ಧಾರ ಮಾಡೋ ಮುಂಚೆ ನನ್ ಪರ್ಮಿಶನ್ ತಗಾಬೇಕು. ನನ್ ಕೇಳದೆ ರೊಕ್ಕ ಖರ್ಚು ಮಾಡಬಾರದು, ನನ್ನ ಮಕ್ಕಳನ್ನ ಟಾರ್ಗೆಟ್ ಮಾಡಬಾರದು, ಅವರು ಕೇಳಿದಾಗೆಲ್ಲ ರೊಕ್ಕ ಕೊಡ್ಬೇಕು, ನಾನು ರಾತ್ರಿ ಲೇಟಾಗಿ ಬಂದ್ರೂ ಕೇಳಬಾರದು...'

'ಅಷ್ಟೇನಾ, ಇನ್ನೇನರೆ ಐತಾ?'

'ರೊಕ್ಕ ಸಿಕ್ಕಾವು ಅಂತ ಗುಡಿ–ಗುಂಡಾರ ಸುತ್ತೋದು, ನೀರು ಕಂಡಲ್ಲಿ ಮುಳುಗೋದು... ಶಾಸ್ತ್ರ, ಭವಿಷ್ಯ ಕೇಳಾದು ಇದೆಲ್ಲ ಮಾಡಬಾರದು...'

'ಸರಿ, ಮತ್ತ?'

'ಪದೇಪದೇ ಸಿಟ್ಟಾಗೋದು, ನಟ್ಟು–ಬೋಲ್ಟು ಟೈಟ್ ಮಾಡ್ತೀನಿ ಅನ್ನೋದು ಮಾಡಬಾರದು. ಆವಾಗಾವಾಗ ನನ್ ಕಾಲಿಗೆ ಬಿದ್ದು ಆಶೀರ್ವಾದ ತಗೋತಿರಬೇಕು...'

'ಅಲ್ಲ, ನೀವೇನು ನಂಗೆ ಯಜಮಾನಿಕಿ ಕೊಡ್ತಿದೀರೋ ಅಥ್ವ ಜವಾನಿಕಿ ಮಾಡಿಸ್ತಿದೀರೋ? ಇಂಥ ಅಧಿಕಾರ ನೀವೇ ಇಟ್ಕಳ್ರಿ, ಇಲ್ಲಿಮಟ ನೀವು ಏನೇನು ಹೇಳಿದ್ರಲ್ಲ, ಇನ್ ಮುಂದಕೆ ಅವೇ ಕಂಡೀಶನ್ಸ್ ನಿಮ್ಗೂ ಅಪ್ಲೈ ಆಗ್ತಾವು... ಬರ್ರೀ ಅಖಾಡಕ್ಕೆ, ನಾನೂ ನೋಡ್ತೀನಿ...'

ಹೆಂಡತಿ ಕಟ್ಟಾ ರೋಪಿಗೆ ತೆಪರೇಸಿ ಒಳಗೇ ಬೆವೆತ.

ಸಂಗತ

ಅಂಚೆ ಇಲಾಖೆ ಆಗಬೇಕಿದೆ ಇನ್ನಷ್ಟು ಜನಸ್ನೇಹಿ

ಜನಪರ ಯೋಜನೆಗಳು ಭಾರತೀಯ ಅಂಚೆ ಇಲಾಖೆಯ ಹೆಗ್ಗುರುತು. ಆದರೆ, ಸೇವೆ ಒದಗಿಸುವಲ್ಲಿ ಇಲಾಖೆ ಇನ್ನೂ ಸಾಂಪ್ರದಾಯಿಕವಾಗಿದೆ, ಕಾಲಕ್ಕೆ ತಕ್ಕಂತಿಲ್ಲ.

• ಡಾ. ಮುರಳೀಧರ ಕಿರಣಕೆರೆ

ಅಂಚೆ ಕಚೇರಿ ಎದುರಿನಲ್ಲಿ ಸಿಕ್ಕ ಆ ಪರಿಚಿತ ಹಿರಿಯರು ಬಳಲಿದಂತೆ ಕಾಣುತ್ತಿದ್ದರು. ಅವರು ಸರ್ಕಾರಿ ಸೇವೆಯಲ್ಲಿ ಉನ್ನತ ಹುದ್ದೆಯಲ್ಲಿದ್ದು ನಿವೃತ್ತರಾದವರು. 'ಎನ್‌ಎಸ್‌ಸಿ ಠೇವಣಿ ಅವಧಿ ಮುಗಿದಿತ್ತು. ಅದರ ಹಣ ತೆಗೆದುಕೊಳ್ಳಲು ಬಂದಿದ್ದೆ. ಅಂತೂ ದುಡ್ಡು ಕೈಗೆ ಸಿಗಲು ಎರಡು ಗಂಟೆ ಹಿಡೀತು. ಮೂರು ಮೂರು ಚಲನ್ ತುಂಬಿಸಿ, ಉದ್ದನೆಯ ಸಾಲಲ್ಲಿ ನಿಂತು ಕೆಲಸ ಮುಗಿಸಬೇಕಾದರೆ ಸಾಕು ಸಾಕಾಯ್ತು. ನಮ್ಮಂತೋರಿಗೇ ಹೀಗಾದ್ರೆ ಇನ್ನು ಹಳ್ಳಿ ಜನರ ಪಾಡೇನು?' ಎನ್ನುತ್ತಾ ಬೆವರೊರೆಸಿಕೊಂಡರು! ಆ ಹಿರಿಯರ ಅನುಭವ ವೈಯಕ್ತಿಕ ಮಾತ್ರವಲ್ಲ, ಅದು ಅನೇಕ ಹಿರಿಯ ನಾಗರಿಕರು ಎದುರಿಸುತ್ತಿರುವ ಸಮಸ್ಯೆಯೂ ಆಗಿದೆ.

ಅಂಚೆ ಇಲಾಖೆಯು ಸಾರ್ವಜನಿಕರಿಗೆ ಅಗತ್ಯ ಸೇವೆಗಳನ್ನು ಅತ್ಯಂತ ಕನಿಷ್ಠ ಶುಲ್ಕದಲ್ಲಿ ಒದಗಿಸುತ್ತಿದೆ. ಆದರೆ, ಕಚೇರಿಯೊಳಗಿನ ವಾತಾವರಣ ಅಷ್ಟೇನೂ ಹಿತಕರವಾಗಿಲ್ಲ, ಗ್ರಾಹಕಸ್ನೇಹಿಯಾಗಿಲ್ಲ. ತಂತ್ರಜ್ಞಾನವನ್ನು ಸಮರ್ಪಕವಾಗಿ ಅಳವಡಿಸಿಕೊಳ್ಳುವಲ್ಲಿ ಹಾಗೂ ಬಳಸುವಲ್ಲಿ ಹಿಂದೆ ಬಿದ್ದಿರುವ ಇಲಾಖೆ, ಇನ್ನೂ ತನ್ನ ಸಾಂಪ್ರದಾಯಿಕ ಕಾರ್ಯ ವಿಧಾನದಿಂದ ಹೊರಬಂದಿಲ್ಲದಿರುವುದು ಗ್ರಾಹಕರಿಗೆ ಕಿರಿ ಕಿರಿ ಉಂಟುಮಾಡುತ್ತಿದೆ.

ಉದ್ದುದ್ದ ಸರದಿ ಸಾಲುಗಳು, ತಾಲ್ಲೂಕು–ಜಿಲ್ಲಾ ಕಚೇರಿಗಳಲ್ಲಿ ಅಗತ್ಯ ಸಂಖ್ಯೆಯ ಸಿಬ್ಬಂದಿ ಇಲ್ಲದಿರುವುದು, ಗ್ರಾಹಕರೇ ಖುದ್ದು ಭರ್ತಿ ಮಾಡಬೇಕಾದ ಉದ್ದನೆಯ ಗೊಂದಲ ಮೂಡಿಸುವ ಅರ್ಜಿ ನಮೂನೆಗಳು, ಚಲನ್‌ಗಳು, ಹೆಚ್ಚಿನೆಡೆ ಕನ್ನಡದಲ್ಲಿ ನಮೂನೆಗಳು ಲಭ್ಯವಿಲ್ಲದಿರುವುದು, ಭರ್ತಿ ಮಾಡುವಾಗ ತುಸು ತಪ್ಪಾದರೂ ಮತ್ತೆ ಹೊಸದಾಗಿ ತುಂಬಿ ಪುನಃ ಸರದಿ ಸಾಲು ಹಿಡಿಯಬೇಕಿರುವ ಅನಿವಾರ್ಯತೆ... ಇಂತಹ ಸೇವಾವೈಖರಿಯ ಕಾರಣ ಒಂದು ಸಣ್ಣ ಕೆಲಸಕ್ಕೂ ಒಮ್ಮೊಮ್ಮೆ ತಾಸುಗಟ್ಟಲೆ ಸಮಯ ಬೇಕಾಗುತ್ತದೆ.

ಗ್ರಾಹಕರ 'ಎನ್‌ಎಸ್‌ಸಿ', 'ಕೆವಿಪಿ'ಯಂತಹ ಹೂಡಿಕೆಗಳು ಪಕ್ವಗೊಂಡಾಗ ಹಣವನ್ನು ಹಿಂಪಡೆಯಲು ಆ ಠೇವಣಿ ಪತ್ರಕ್ಕೆ ಸಹಿ ಮಾಡಿ ಹಿಂದಿರುಗಿಸುವ ಜೊತೆಗೆ, ಅದನ್ನು ಮುಕ್ತಾಯಗೊಳಿಸಲು ಅರ್ಜಿ ನಮೂನೆಯೊಂದನ್ನು ತುಂಬಿಸಿಕೊಡಬೇಕು. ಪೂರ್ಣ ಮೊತ್ತ ಮೊದಲು ಉಳಿತಾಯ ಖಾತೆಗೆ ಜಮೆ ಆಗಬೇಕಿರುವುದರಿಂದ ಖಾತೆ ಸಂಖ್ಯೆಯೊಂದಿಗೆ ಮತ್ತೊಂದು ನಮೂನೆ ತುಂಬಿಸಿ ಕೊಡಬೇಕು. ನಂತರದಲ್ಲಿ ಹಣ ಪಡೆದು ಕೊಳ್ಳಲು ಚಲನ್ ತುಂಬಿಸಿ ಕೊಡಬೇಕು. ಹೀಗೆ ವಾಯಿದೆ ನಂತರ ಹಣ ಮರಳಿ ಪಡೆಯಲು ಮೂರು ಮೂರು ನಮೂನೆಗಳನ್ನು ಸಲ್ಲಿಸಬೇಕು! ಇದು ಸಿಬ್ಬಂದಿಗೆ ಕೆಲಸದ ಹೊರೆಯನ್ನು ಹೆಚ್ಚು ಮಾಡುವುದಲ್ಲದೆ, ಗ್ರಾಹಕನ ಸಮಯವನ್ನೂ ವೃಥಾ ಪೋಲು ಮಾಡುತ್ತದೆ.



ಭಾರತೀಯ ಅಂಚೆ ಇಲಾಖೆ (ಇಂಡಿಯಾ ಪೋಸ್ಟ್) ವಿಶ್ವದಲ್ಲೇ ಅತಿ ದೊಡ್ಡ ಸೇವಾ ಜಾಲ ಹೊಂದಿರುವ ಸಂಸ್ಥೆ. ಬ್ರಿಟಿಷರ ಕಾಲದಲ್ಲಿ ಆರಂಭವಾಗಿ, ಒಂದೂಮುಕ್ಕಾಲು ಶತಮಾನ ಕಾಣುತ್ತಿರುವ ಇದು ಕಾಲಕ್ಕೆ ತಕ್ಕಂತೆ ತನ್ನ ಕಾರ್ಯಚಟುವಟಿಕೆಗಳನ್ನು ವೈವಿಧ್ಯಮಯಗೊಳಿಸುತ್ತಾ ಬಂದಿದೆ. ಸಾಮಾನ್ಯ ಪತ್ರಗಳು, ಸ್ಪೀಡ್ ಪೋಸ್ಟ್‌ನಂತಹ ತನ್ನ ಸಾಂಪ್ರದಾಯಿಕ ಕೆಲಸಗಳಲ್ಲದೆ, ಪಾರ್ಸೆಲ್ ಸೇವೆ, ಜನತೆಗೆ ಅದರಲ್ಲೂ ಗ್ರಾಮೀಣರಿಗೆ ಬ್ಯಾಂಕಿಂಗ್ ಸೌಲಭ್ಯ ನೀಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಅಂಚೆ ಜೀವವಿಮೆಯಂತೂ ಕಡಿಮೆ ಪ್ರೀಮಿಯಂನಲ್ಲಿ ಗ್ರಾಹಕರಿಗೆ ಜೀವವಿಮಾ ರಕ್ಷಣೆಯನ್ನು ಒದಗಿಸುತ್ತಿದೆ.

ಇ–ಮನಿ ಆರ್ಡರ್ ಮೂಲಕ ಗ್ರಾಹಕನ ಮನೆ ಬಾಗಿಲಿಗೆ ಅಂದೇ ಹಣ ತಲಪಿಸುವ ವ್ಯವಸ್ಥೆ, ಪಿಂಚಣಿದಾರರು ಅವರಿದ್ದಲ್ಲೇ ತಮ್ಮ ಇರುವಿಕೆಯ ಬಗ್ಗೆ ಡಿಜಿಟಲ್ ಪ್ರಮಾಣ ಪತ್ರ ಪಡೆಯುವ ಸೌಲಭ್ಯ, ಆಧಾರ್ ಜೋಡಿತ ಉಳಿತಾಯ ಖಾತೆಯಿಂದ ಅಂಚೆಯಣ್ಣನ ಮೂಲಕ ಮನೆಯಲ್ಲೇ ನಗದು ಪಡೆಯುವ ಸವಲತ್ತು ನಿಜಕ್ಕೂ ಅಂಚೆ ಇಲಾಖೆಯ ಜನಪರ ಕಾಳಜಿಯ ಯೋಜನೆಗಳೇ ಸರಿ. ಸರ್ಕಾರದ ಹಲವು ಕಲ್ಯಾಣ ಯೋಜನೆಗಳನ್ನು ಫಲಾನುಭವಿಗಳಿಗೆ ನೇರವಾಗಿ ತಲಪಿಸುತ್ತಿರುವ ಇಲಾಖೆಯ ಸಾಮಾಜಿಕ ಬದ್ಧತೆ ಶ್ಲಾಘನೀಯ.

ಇಲಾಖೆಯ ಕೆವಿಪಿ, ಎನ್‌ಎಸ್‌ಸಿ, ಸುಕನ್ಯಾ ಸಮೃದ್ಧಿ, ಹಿರಿಯ ನಾಗರಿಕರ ಉಳಿತಾಯ ಯೋಜನೆಗಳು ಬ್ಯಾಂಕ್ ಠೇವಣಿಗಿಂತ ಹೆಚ್ಚು ಬಡ್ಡಿ ತರುತ್ತವೆ. ಕೆಲವು ಉತ್ಪನ್ನಗಳಿಗೆ ತೆರಿಗೆ ವಿನಾಯಿತಿಯೂ ಇದೆ. ಜೊತೆಗೆ ಇಲ್ಲಿ ತೊಡಗಿಸುವ ಹಣಕ್ಕೆ ಕೇಂದ್ರ ಸರ್ಕಾರದ ಗ್ಯಾರಂಟಿ ಇರುವುದರಿಂದ ಸಂಪೂರ್ಣ ಸುರಕ್ಷಿತ. ವರಮಾನ, ಸುರಕ್ಷತೆ, ತೆರಿಗೆ ಉಳಿತಾಯ ಎಲ್ಲಾ ದೃಷ್ಟಿಯಿಂದಲೂ ಅಂಚೆ ಇಲಾಖೆಯ ವಿವಿಧ ಯೋಜನೆಗಳಲ್ಲಿ ಹಣ ಹೂಡುವುದು ಲಾಭಕರ. ಆದರೆ ಸಮಸ್ಯೆಯಿರುವುದು ಗ್ರಾಹಕರಿಗೆ ಒದಗಿಸುವ ಸೇವೆ ಸಂಕೀರ್ಣವಾಗಿರುವುದರಲ್ಲಿ.

ಕಚೇರಿಯಲ್ಲಿನ ಉದ್ದನೆಯ ಸರದಿ ಸಾಲು, ಸುಲಭವಾಗಿ ತುಂಬಿಸಲಾಗದ ನಮೂನೆಗಳು, ಕಾಯುವಿಕೆ, ಮುಂತಾದ ಕಾರಣಗಳಿಂದ ಜನರು ಅಂಚೆ ಇಲಾಖೆಯ ಸೌಲಭ್ಯ ಬಳಸಿಕೊಳ್ಳಲು ಹಿಂದೇಟು ಹಾಕುತ್ತಾರೆ. ಬ್ಯಾಂಕುಗಳಂತೆ ಅಂಚೆ ಕಚೇರಿಯೂ ಸರಳಗೊಳ್ಳುವುದರ ಜೊತೆಗೆ ಆಧುನಿಕ ತಂತ್ರಜ್ಞಾನವನ್ನು ವೇಗವಾಗಿ ಅಳವಡಿಸಿಕೊಳ್ಳಬೇಕಿದೆ. ಆನ್‌ಲೈನ್‌ನಲ್ಲೇ ಖಾತೆಗಳನ್ನು ತೆರೆಯುವ, ಕೆವೈಸಿ ದಾಖಲಿಸುವ ಹಾಗೂ ವಿವಿಧ ಉತ್ಪನ್ನಗಳನ್ನು ಖರೀದಿಸುವಂತಹ ಸೌಲಭ್ಯವನ್ನು ಒದಗಿಸಬೇಕು.

ಭಾರತೀಯ ಅಂಚೆಯು ಬರೀ ಒಂದು ಸರ್ಕಾರಿ ಸಂಸ್ಥೆಯಲ್ಲ. ಅದು ದೇಶದ ಭಾವನಾತ್ಮಕ ಕೊಂಡಿಯಾಗಿದೆ. ಖಾಸಗಿ ಸಂಸ್ಥೆಗಳು ಲಾಭವಿಲ್ಲದ ಕಡೆ ಸೇವೆ ನೀಡಲು ಹಿಂಜರಿಯುವಾಗ ಅಂಚೆ ಇಲಾಖೆಯೇ ಸಾಮಾನ್ಯ ಜನರ ಆಶಾಕಿರಣವಾಗಿದೆ. ತಂತ್ರಜ್ಞಾನದ ಅಳವಡಿಕೆ, ಸಿಬ್ಬಂದಿಯ ದಕ್ಷತೆ ಮತ್ತು ಗ್ರಾಹಕ ಕೇಂದ್ರಿತ ಮನೋಭಾವನೆಯನ್ನು ಮೈಗೂಡಿಸಿಕೊಂಡರೆ ಮಾತ್ರ ಭಾರತೀಯ ಅಂಚೆ ಇಲಾಖೆಯು ಮುಂಬರುವ ದಿನಗಳಲ್ಲೂ ಜಾಗತಿಕ ಮಟ್ಟದ ಜನಪ್ರಿಯ ಸೇವಾಸಂಸ್ಥೆಯಾಗಿ ಮುಂದುವರಿಯಲಿದೆ. ಹಾಗೆ ಉಳಿಯುವುದು ಜನಸಾಮಾನ್ಯರ ಹಿತದೃಷ್ಟಿಯಿಂದ ಅಗತ್ಯವೂ ಹೌದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬೆಲೆ ಏರಿಕೆಯ ಬರೆ-ಹೊರೆ

ಇಂಧನ ದರ ಏರಿಕೆ ಎನ್ನುವುದು ಕೇವಲ ಪೆಟ್ರೋಲ್–ಡೀಸೆಲ್ ಬಳಕೆದಾರರಿಗೆ ಮಾತ್ರ ಸಂಬಂಧಪಟ್ಟ ವಿಚಾರವಲ್ಲ. ಜನಜೀವನದ ಬಹುತೇಕ ವಲಯಗಳ ಮೇಲೆ ಇದು ಪರಿಣಾಮ ಬೀರುತ್ತದೆ. ಸಾರಿಗೆ ವೆಚ್ಚದಿಂದ ಹಿಡಿದು ಕುಟುಂಬ ವೆಚ್ಚ, ಉತ್ಪಾದನೆ, ಸೇವಾ ವಲಯ ಹೀಗೆ ಬಹುತೇಕ ವಲಯಗಳಲ್ಲಿ ಬಿಕ್ಕಟ್ಟು ಸೃಷ್ಟಿಸುತ್ತಿದ್ದು, ಜನರ ನಿತ್ಯದ ಅಗತ್ಯ ಸೇವೆ–ಸರಕುಗಳನ್ನು ದುಬಾರಿಯನ್ನಾಗಿಸಿದೆ; ಹಣದುಬ್ಬರ ಹೆಚ್ಚಿಸಿದೆ. ತಿನ್ನುವ ಆಹಾರ, ನಿತ್ಯದ ಸಂಚಾರ, ಮಕ್ಕಳ ವಿದ್ಯಾಭ್ಯಾಸ, ಬಳಸುವ ಸೇವೆ ಹೀಗೆ ಜನರ ಜೀವನದ ಮೇಲೆ ದರ ಏರಿಕೆಯು ಬರೆ ಎಳೆದಿದೆ

ಪ್ರಜಾವಾಣಿ ವಾರ್ತೆ

ಜಾಗತಿಕ ಮಾರುಕಟ್ಟೆಯಲ್ಲಿ ತೈಲ ದರದ ಏರಿಳಿತದ ನಡುವೆಯೂ ನಾಲ್ಕು ವರ್ಷಗಳಿಂದ ಭಾರತದಲ್ಲಿ ಪೆಟ್ರೋಲ್–ಡೀಸೆಲ್ ದರ ಬದಲಾವಣೆ ಆಗಿರಲಿಲ್ಲ. ಪಶ್ಚಿಮ ಏಷ್ಯಾದ ಅಸ್ಥಿರತೆ, ಯುದ್ಧದ ಪರಿಣಾಮವಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಈಗ ತೈಲ ದರ ಏರಿಕೆಯಾಗಿದೆ. ಅದಕ್ಕೆ ಸಂವಾದಿಯಾಗಿ ಭಾರತದಲ್ಲೂ ಮೇ 15ರಿಂದ ಆರಂಭವಾಗಿ ಇದುವರೆಗೆ ನಾಲ್ಕು ಬಾರಿ ದರ (ಒಟ್ಟು ಲೀಟರ್‌ಗೆ ₹7.5) ಏರಿಕೆಯಾಗಿದೆ. ಇದರ ಪರಿಣಾಮವು ಪೆಟ್ರೋಲ್ ಬಂಕ್‌ಗಳಲ್ಲಿ ಪೆಟ್ರೋಲ್–ಡೀಸೆಲ್ ಕೊಳ್ಳುವಾಗ ಮಾತ್ರವೇ ಅಲ್ಲ; ಆರ್ಥಿಕತೆಯ ಎಲ್ಲ ವಲಯಗಳಲ್ಲಿ ಜನರ ಅರಿವಿಗೆ ಬರುತ್ತಿವೆ. ತೈಲೋತ್ಪನ್ನಗಳ ಬೆಲೆ ಏರಿಕೆಯು ಹಣದುಬ್ಬರ ವರ್ಗಾವಣೆಯ ಮೊದಲ ಹಂತ. ಸಾರಿಗೆ, ಆಹಾರ, ಸರಕು, ಸೇವೆಗಳ ಬೆಲೆ ಏರಿಕೆಯು ಇದರ ಎರಡನೇ ಹಂತವಾಗಿದೆ.

ಸಾರಿಗೆ ದುಬಾರಿ: ಪೆಟ್ರೋಲ್–ಡೀಸೆಲ್ ದರ ಏರಿಕೆಯಾದ ಬೆನ್ನಲ್ಲೇ ರಾಜ್ಯದಲ್ಲಿ ಖಾಸಗಿ ಬಸ್‌ಗಳ ಪ್ರಯಾಣ ದರವನ್ನು ಶೇ 20ರಿಂದ ಶೇ 30ರವರೆಗೆ ಏರಿಸಲಾಗಿದೆ. ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಬಸ್ ದರವನ್ನೂ ಏರಿಸುವ ಪ್ರಸ್ತಾವ ಇದ್ದು, ಶೀಘ್ರದಲ್ಲೇ ಘೋಷಣೆ ಹೊರಬೀಳುವ ಸಾಧ್ಯತೆ ಇದೆ. ಆಟೊ, ಕ್ಯಾಬ್ ಡ್ರೈವರ್‌ಗಳು ಪ್ರಯಾಣ ದರ ಹೆಚ್ಚಿಸುವಂತೆ ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ. ಆದರೆ, ಆಟೊ, ಕ್ಯಾಬ್ ಸೇವೆ ನೀಡುವ ಬಹುತೇಕರು ಈಗಾಗಲೇ ಅನಧಿಕೃತವಾಗಿ ದರ ಹೆಚ್ಚಳ ಮಾಡಿದ್ದಾರೆ.

ಬೆಂಗಳೂರು ಸೇರಿದಂತೆ ರಾಜ್ಯದ ಬಹುತೇಕ ಖಾಸಗಿ ಶಾಲೆ, ಕಾಲೇಜುಗಳು ಪ್ರತಿ ವರ್ಷ ಶಾಲಾ ವಾಹನಗಳ ಶುಲ್ಕವನ್ನು ಹೆಚ್ಚಿಸುತ್ತವೆ. ಇಂಧನ ತುಟ್ಟಿಯಾದ ಕಾರಣಕ್ಕೆ ಈ ಬಾರಿ ಶೇ 15 ಮತ್ತು ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಶುಲ್ಕ ಹೆಚ್ಚಳ ಮಾಡಿವೆ. ಇದು ಕುಟುಂಬಗಳ ಒಟ್ಟಾರೆ ವೆಚ್ಚ ಹೆಚ್ಚಿಸಿದೆ.

ಆಹಾರ ಪದಾರ್ಥಗಳ ಬೆಲೆ ಏರಿಕೆ: ತೈಲೋತ್ಪನ್ನಗಳ ಬೆಲೆ ಏರಿಕೆಯ ಪ್ರಮುಖ ಪರಿಣಾಮ ಉಂಟಾಗುವುದು ಆಹಾರ ಉತ್ಪಾದನೆ ಮೇಲೆ. ಆಹಾರ ಉತ್ಪಾದನೆ, ನೀರಾವರಿ, ರಸಗೊಬ್ಬರ, ಶೈತ್ಯಾಗಾರ, ಸಾಗಣೆ ಮತ್ತು ಚಿಲ್ಲರೆ ಮಾರಾಟ– ಹೀಗೆ ಪ್ರತಿ ಹಂತದಲ್ಲೂ ಪದಾರ್ಥಗಳ ಬೆಲೆ ಹೆಚ್ಚಳವಾಗುತ್ತದೆ. ತರಕಾರಿ, ಹಣ್ಣು, ಧಾನ್ಯ ಇತ್ಯಾದಿಗಳ ಬೆಲೆ ಈಗಾಗಲೇ ಏರಿಕೆಯಾಗಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ದುಬಾರಿಯಾಗಬಹುದು.

ಇಂಧನ ದರದ ಏರಿಕೆಯು ಎಲ್ಲ ರೀತಿಯ ಸರಕು–ಸೇವೆಗಳ ಪೂರೈಕೆ ಸರಪಳಿ ಮತ್ತು ವಿತರಣಾ ಜಾಲದ ಮೇಲೆ ಒತ್ತಡ ಸೃಷ್ಟಿಸಿದ್ದು, ವ್ಯಾಪಾರ, ವ್ಯವಹಾರ, ಕಚ್ಚಾ ಪದಾರ್ಥಗಳ ಬೆಲೆ, ಉದ್ದಿಮೆ– ಎಲ್ಲ ವಲಯಗಳಲ್ಲೂ ಬಿಕ್ಕಟ್ಟು ಸೃಷ್ಟಿಸಿದೆ. ಈ ಬಿಕ್ಕಟ್ಟು ಜನರ ದೈನಂದಿನ ಜೀವನವನ್ನು ಸಂಕಷ್ಟಕ್ಕೂ ದೂಡಿದೆ.

ಟೋಲ್ ವಿನಾಯಿತಿಗೆ ಒತ್ತಾಯ

ಇಂಧನ ದರ ಏರಿಕೆ ಮತ್ತು ಇನ್ನಿತರ ಕಾರಣಗಳಿಂದಾಗಿ ಲಾರಿಡ ಮಾಲೀಕರು ಎದುರಿಸುತ್ತಿರುವ ಸಂಕಷ್ಟಗಳನ್ನು ವಿವರಿಸಿ ಸೌತ್ ಇಂಡಿಯಾ ಮೋಟಾರ್ ಟ್ರಾನ್ಸ್‌ಪೋರ್ಟರ್ಸ್ ಫೆಡರೇಷನ್ (ಎಸ್‌ಐಎಂಟಿಎ) ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದು, ಪ್ರಮುಖವಾಗಿ ಆರು ಬೇಡಿಕೆಗಳನ್ನು ಮುಂದಿಟ್ಟಿದೆ.

‘ಕನಿಷ್ಠ ಆರು ತಿಂಗಳಿಗೆ ದೇಶದಾದ್ಯಂತ ಹೆದ್ದಾರಿಗಳಲ್ಲಿ ಟೋಲ್ ಶುಲ್ಕ ಮನ್ನಾ ಮಾಡಬೇಕು, ಲಾರಿಗಳ ಮೇಲಿನ ದಂಡಗಳು ಹಾಗೂ ಅದಕ್ಕೆ ಸಂಬಂಧಿಸಿದ ಶುಲ್ಕಗಳನ್ನು ಮನ್ನಾ ಮಾಡಬೇಕು, ರಾಷ್ಟ್ರೀಯ ಪರವಾನಗಿ ನೀಡಲು ವಿಧಿಸಲಾಗುವ ಶುಲ್ಕಕ್ಕೆ ವಿನಾಯಿತಿ ನೀಡಬೇಕು, ಪ್ರಸ್ತುತ ಆರ್ಥಿಕ ವರ್ಷಕ್ಕೆ ವ್ಯಾಟ್ ಕಡಿತ ಮತ್ತು ವಾಹನಗಳ ಮೇಲಿನ ತೆರಿಗೆಯನ್ನು ಮನ್ನಾ ಮಾಡಲು ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಬೇಕು. ಸಾರಿಗೆ ಕ್ಷೇತ್ರಕ್ಕೆ ಹಣಕಾಸು ನೆರವಿನ ಯೋಜನೆಗಳು, ಪ್ರೋತ್ಸಾಹ ಕ್ರಮಗಳು, ಉತ್ತೇಜನಾ ಪ್ಯಾಕೇಜ್‌ಗಳನ್ನು ಘೋಷಿಸಬೇಕು, ಪೆಟ್ರೋಲಿಯಂ ಉತ್ಪನ್ನಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರಬೇಕು’ ಎಂದು ಪ್ರಧಾನಿ ಮೋದಿ ಅವರಿಗೆ ಬರೆದ ಪತ್ರದಲ್ಲಿ ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ಜಿ.ಆರ್.ಷಣ್ಮುಗಪ್ಪ ಅವರು ಒತ್ತಾಯಿಸಿದ್ದಾರೆ.

ತೆರಿಗೆ ಕಡಿಮೆ ಮಾಡಲಿ

ಇದುವರೆಗೆ ನಾಲ್ಕು ಬಾರಿ ಡೀಸೆಲ್ ದರ ಏರಿಕೆಯಾಗಿದೆ. ಇನ್ನು ಏರಿಕೆಯಾಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ಕೇಂದ್ರ ಸರ್ಕಾರ ಸ್ಪಷ್ಟವಾಗಿ ಏನೂ ಹೇಳುತ್ತಿಲ್ಲ. ಹಾಗಾಗಿ, ನಾವು ಏನು ಮಾಡುವುದು ಎಂದು ದಿಕ್ಕೇ ತೋಚುತ್ತಿಲ್ಲ. ಈಗ ಇಂಧನ ದರ ಮಾತ್ರ ಅಲ್ಲ, ಟೈರ್, ಲಾರಿಗಳ ಬಿಡಿ ಭಾಗಗಳು ಎಲ್ಲವೂ ದುಬಾರಿಯಾಗಿವೆ. ಹಲವು ಮಾಲೀಕರು ಲಾರಿಗಳ ಸಂಚಾರವನ್ನೇ ನಿಲ್ಲಿಸಿದ್ದಾರೆ. ಕೇಂದ್ರ ಸರ್ಕಾರ ಯುದ್ಧದಿಂದಾಗಲಿರುವ ಪರಿಣಾಮಗಳ ಬಗ್ಗೆ ದೇಶವನ್ನು ಸಜ್ಜುಗೊಳಿಸಬೇಕಿತ್ತು. ಆದರೆ, ಮೂರು ತಿಂಗಳು ಎಲ್ಲವೂ ಸರಿ ಇದೆ ಎಂದು ಹೇಳಿಕೊಂಡು ಏಕಾಏಕಿ ಪೆಟ್ರೋಲ್–ಡೀಸೆಲ್ ದರ ಹೆಚ್ಚಿಸಿದ್ದಾರೆ. ರಾಷ್ಟ್ರೀಯ ಹೆದ್ದಾರಿಗಳ ಬಂಕ್‌ಗಳಲ್ಲಿ ಸರಿಯಾಗಿ ಡೀಸೆಲ್ ಕೂಡ ಸಿಗುತ್ತಿಲ್ಲ. ಒಮ್ಮೆಗೆ 200 ಲೀಟರ್‌ಗಿಂತ ಜಾಸ್ತಿ ಡೀಸೆಲ್ ಕೊಡಬಾರದು ಎಂದು ತೀರ್ಮಾನ ಮಾಡಿದ್ದಾರೆ. ಕ್ಯಾನ್‌ಗಳಲ್ಲಿ ಕೊಡುವುದಕ್ಕೆ ನಿಷೇಧ ಹೇರಿದ್ದಾರೆ. ಲಾರಿಗಳ ನಿರ್ವಹಣೆ ದುಬಾರಿಯಾಗಿದೆ. ಪ್ರತಿಭಟನೆ ಮಾಡುವುದಕ್ಕೂ ಯೋಚನೆ ಮಾಡುತ್ತಿದ್ದೇವೆ. ಪ್ರತಿ ಲೀಟರ್ ಪೆಟ್ರೋಲ್, ಡೀಸೆಲ್‌ನ ದರದಲ್ಲಿ ಅಬಕಾರಿ ಸುಂಕ, ತೆರಿಗೆ ರೂಪದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೆಚ್ಚಿನ ಪಾಲನ್ನು ಪಡೆಯುತ್ತಿವೆ. ಈ ಬಿಕ್ಕಟ್ಟಿನ ಸಂದರ್ಭದಲ್ಲಿ ಎರಡೂ ಸರ್ಕಾರಗಳು ಅದನ್ನು ಕಡಿಮೆ ಮಾಡಬಹುದಲ್ಲವೇ? ಟೋಲ್ ಶುಲ್ಕವನ್ನೂ ಕಡಿಮೆ ಮಾಡಿ ಲಾರಿ ಮಾಲೀಕರ ಮೇಲಿನ ಹೊರೆಯನ್ನು ಸ್ವಲ್ಪವಾದರೂ ಇಳಿಸಬಹುದಲ್ಲವೇ? ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಬಗ್ಗೆ ಯೋಚಿಸಿ, ತುರ್ತು ಕ್ರಮ ಕೈಗೊಳ್ಳಬೇಕು.

ಸಿ. ನವೀನ್ ರೆಡ್ಡಿ, ಕರ್ನಾಟಕ ಲಾರಿ ಮಾಲೀಕರ ಒಕ್ಕೂಟದ ಅಧ್ಯಕ್ಷ

ಎಂಎಸ್‌ಎಂಇಗೆ ಹೊಡೆತ

ಇಂಧನ ದರ ಏರಿಕೆಯ ಹೊಡೆತ ಕೈಗಾರಿಕಾ ಕ್ಷೇತ್ರಕ್ಕೂ ಆಗಿದೆ. ರಾಜ್ಯದ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಗಾತ್ರದ ಕೈಗಾರಿಕೆಗಳು (ಎಂಎಸ್‌ಎಂಇ) ತೀವ್ರ ತೊಂದರೆಗೆ ಸಿಲುಕಿವೆ. ಡೀಸೆಲ್ ಆಧಾರಿತವಾಗಿ ನಡೆಯುವ ಘಟಕಗಳ ಕಾರ್ಯಾಚರಣೆಗೆ ಬೆಲೆ ಏರಿಕೆ ಅಡ್ಡಿಯಾಗಿದೆ. ಘಟಕಗಳ ನಿರ್ವಹಣೆಯ ವೆಚ್ಚ ಹೆಚ್ಚಾಗಿದ್ದು, ಪರಿಸ್ಥಿತಿ ಹೀಗೇ ಮುಂದುವರಿದರೆ ಕೈಗಾರಿಕೆಗಳನ್ನು ಮುಚ್ಚಬೇಕಾಗುತ್ತದೆ ಎಂದು ಉದ್ಯಮಿಗಳು ಆತಂಕ ವ್ಯಕ್ತಪಡಿಸಿದ್ದಾರೆ. ಆಸ್ತಿ ತೆರಿಗೆ ಹೆಚ್ಚಳ, ದುಬಾರಿ ವಿದ್ಯುತ್ ಶುಲ್ಕದಿಂದಾಗಿ ಈಗಾಗಲೇ ಸಣ್ಣ ಕೈಗಾರಿಕೆಗಳು ತೊಂದರೆಗೆ ಸಿಲುಕಿವೆ. ಅದರ ಜೊತೆಗೆ ಯುದ್ಧದ ಪರಿಣಾಮವೂ ಸೇರಿಕೊಂಡಿದೆ. ಈಗ ರಾಜ್ಯ ಸರ್ಕಾರ ಕಾರ್ಮಿಕರ ಕನಿಷ್ಠ ವೇತನವನ್ನು ಹೆಚ್ಚಿಸಿರುವುದು ಮತ್ತಷ್ಟು ಹೊಡೆತ ನೀಡಿದೆ ಎನ್ನುತ್ತಾರೆ ಉದ್ಯಮಿಗಳು.

ಪೆಟ್ರೋಲ್, ಡೀಸೆಲ್ ಮಾತ್ರವಲ್ಲದೆ ಎಲ್ಲ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಹೆಚ್ಚಾಗಿದೆ. ಕಚ್ಚಾ ವಸ್ತುಗಳು ದುಬಾರಿಯಾಗಿವೆ. ಸಾರಿಗೆ, ಸಾಗಣೆಯೂ ವೆಚ್ಚವೂ ಹೆಚ್ಚಿದೆ. ಬೇರೆ ಕಂಪನಿಗಳಿಂದ ಬರುವ ಆರ್ಡರ್‌ಗಳೂ (ಉತ್ಪನ್ನಗಳ ಖರೀದಿ ಬೇಡಿಕೆ) ಕಡಿಮೆಯಾಗಿರುವುದರಿಂದ ನಿರ್ವಹಣೆ ವೆಚ್ಚ ಜಾಸ್ತಿಯಾಗಿದ್ದು, ಲಾಭಾಂಶ ಕಡಿಮೆಯಾಗಿದೆ ಎಂಬುದು ಉದ್ಯಮದಲ್ಲಿ ತೊಡಗಿಸಿಕೊಂಡವರ ಮಾತು.

ನಷ್ಟ ಹೆಚ್ಚಲಿದೆ

ಎಂಎಸ್‌ಎಂಇ ವಲಯದ ಉದ್ದಿಮೆಗಳು ಯುದ್ಧ, ಜಾಗತಿಕ ಮಟ್ಟದ ಬಿಕ್ಕಟ್ಟುಗಳ ಕಾರಣದಿಂದಾಗಿ ಸಂಕಷ್ಟಕ್ಕೆ ಸಿಲುಕಿವೆ. ಉಕ್ಕು ಹಾಗೂ ವಿವಿಧ ಕಚ್ಚಾ ವಸ್ತುಗಳ ಬೆಲೆ ಏರಿಕೆ ಆಗಿದ್ದು, ಉತ್ಪಾದನಾ ವೆಚ್ಚವು ಗಣನೀಯ ಹೆಚ್ಚಳ ಕಂಡಿದೆ. ಇದರಿಂದಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕವಾಗಿ ಉಳಿಯುವುದು ಕಷ್ಟವಾಗುತ್ತಿದೆ. ಉತ್ಪಾದನಾ ಚಟುವಟಿಕೆಗಳಿಗಾಗಿ ಡೀಸೆಲ್ ಜನರೇಟರ್ ನೆಚ್ಚಿಕೊಂಡಿರುವ ಉದ್ಯಮಗಳು ಇಂಧನ ಬೆಲೆ ಹೆಚ್ಚಳದ ಪರಿಣಾಮವಾಗಿ ಸಮಸ್ಯೆಗೆ ಸಿಲುಕಿವೆ. ಈಗಾಗಲೇ ಪಡೆದುಕೊಂಡಿರುವ ಕಾರ್ಯಾದೇಶಗಳಿಗೆ ಸಂಬಂಧಿಸಿದಂತೆ ಹಳೆಯ ಬೆಲೆಗೇ ಸರಕುಗಳನ್ನು ಪೂರೈಸಬೇಕಾಗುತ್ತದೆ. ಆದರೆ ಕಚ್ಚಾ ವಸ್ತುಗಳು ಹಾಗೂ ಇಂಧನ ಬೆಲೆ ಏರಿಕೆಯಿಂದಾಗಿ ನಷ್ಟ ಹೆಚ್ಚಲಿದೆ.

ಬಿ.ಆರ್.ಗಣೇಶ್ ರಾವ್, ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) ಅಧ್ಯಕ್ಷ

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು 'Deccan Herald- Prajavani Relief Trust'ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ 2025ನೇ ಸಾಲಿನ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

ಸ್ಪರ್ಧಾತ್ಮಕ ಪರೀಕ್ಷೆಗಳ ಪುಸ್ತಕ ಖರೀದಿಸಿದೆ

‘ಪ್ರಜಾವಾಣಿ’ ಪತ್ರಿಕೆ ನೀಡಿದ ವಿದ್ಯಾರ್ಥಿವೇತನದಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಬೇಕಾದ ಪುಸ್ತಕಗಳನ್ನು ಖರೀದಿಸಿದೆ. ಪ್ರಸ್ತುತ ನಾನು ದ್ವಿತೀಯ ಪಿ.ಯು ವಿಜ್ಞಾನ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿದ್ದೇನೆ. ಪತ್ರಿಕೆ ನೀಡಿದ ನೆರವಿಗೆ ಚಿರಋಣಿ.

–**ಟಿ.ಪಿ. ಹಿತಾ,** ಚಿಕ್ಕಮಗಳೂರು

ಕಾಲೇಜು ಶುಲ್ಕ ಕಟ್ಟಿದೆ

‘ಪ್ರಜಾವಾಣಿ’ ಪತ್ರಿಕೆ ನೀಡಿದ ವಿದ್ಯಾರ್ಥಿ ವೇತನದಿಂದ ಪ್ರಥಮ ಪಿ.ಯು ಕಾಲೇಜು ಶುಲ್ಕ ಕಟ್ಟಿದೆ. ಮಿಕ್ಕ ಹಣವನ್ನು ಪುಸ್ತಕ, ಅಧ್ಯಯನ ಸಾಮಗ್ರಿ ಖರೀದಿಸಲು ಬಳಸಿಕೊಂಡೆ. ಪ್ರತಿಭಾವಂತ ಮಕ್ಕಳನ್ನು ಗುರುತಿಸಿ, ಶಿಷ್ಯವೇತನ ನೀಡುವ ‘ಪ್ರಜಾವಾಣಿ’ಯ ನಿಲುವು ಸ್ತುತ್ಯಾರ್ಹ.

ದಿಕ್ಷೀತ್, ಎನ್.ಆರ್.ಪುರ, ಚಿಕ್ಕಮಗಳೂರು

ಹಣದುಬ್ಬರ ಶೇ 5ಕ್ಕೆ ಏರುವ ಸಾಧ್ಯತೆ

ಆಹಾರ ಪದಾರ್ಥಗಳ ಬೆಲೆ ಏರಿಕೆಯ ಪರಿಣಾಮವಾಗಿ ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ಪ್ರಮಾಣವು ಏಪ್ರಿಲ್ ತಿಂಗಳಿನಲ್ಲಿ ಶೇ 3.48ಕ್ಕೆ ಏರಿಕೆಯಾಗಿದೆ. ಮೇ ತಿಂಗಳಲ್ಲಿ ಹಣದುಬ್ಬರ ಯಾವ ಮಟ್ಟವನ್ನು ತಲುಪಿದೆ ಎಂಬುದನ್ನು ಕೇಂದ್ರ ಸರ್ಕಾರವು ಜೂನ್ ಎರಡನೆಯ ವಾರದಲ್ಲಿ ಪ್ರಕಟಿಸಲಿದೆ. ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆಯು ಹಣದುಬ್ಬರದ ಮೇಲೆ ಯಾವ ಪರಿಣಾಮವನ್ನು ಬೀರಿದೆ ಎಂಬುದು ಆಗಲೇ ಸ್ಪಷ್ಟವಾಗಲಿದೆ. ಜೂನ್ ವೇಳೆಗೆ ಚಿಲ್ಲರೆ ಹಣದುಬ್ಬರ ಶೇ 5ರ ಮಟ್ಟಕ್ಕೆ ತಲುಪಬಹುದು ಎಂಬ ಅಂದಾಜು ಇದೆ.

‘ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳದ ಪರಿಣಾಮವಾಗಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 0.75ರಷ್ಟು ಜಾಸ್ತಿ ಆಗಬಹುದು. ಹೀಗಾಗಿ ಮೇ ತಿಂಗಳಲ್ಲಿ ಹಣದುಬ್ಬರ ಪ್ರಮಾಣವು ಶೇ 4ರಿಂದ ಶೇ 4.5ರ ಮಟ್ಟದಲ್ಲಿ ಇರಬಹುದು. ಜೂನ್‌ನಲ್ಲಿ ಇದು ಶೇ 4.5ರಿಂದ ಶೇ 5ರಷ್ಟು ಆಗಬಹುದು’ ಎಂದು ‘ಇವೈ ಇಂಡಿಯಾ’ ಹಿರಿಯ ಅಧಿಕಾರಿ ಡಿ.ಕೆ. ಶ್ರೀವಾಸ್ತವ ಹೇಳಿದ್ದಾರೆ.

ವಿಮಾನಯಾನ ಕ್ಷೇತ್ರಕ್ಕೆ ಬಿಸಿ

ಇಂಧನದ ದರ ಏರಿಕೆಯು ಜಾಗತಿಕವಾಗಿ ವಿಮಾನಯಾನ ಕ್ಷೇತ್ರಕ್ಕೆ ತೀವ್ರವಾದ ಬಿಸಿ ಮುಟ್ಟಿಸಿದ್ದು, ವಿಮಾನಗಳಲ್ಲಿ ಪ್ರಯಾಣಿಸುತ್ತಿರುವವರ ಸಂಖ್ಯೆ ಕಡಿಮೆಯಾಗಿದೆ. ವಿಮಾನದಲ್ಲಿ ಬಳಸುವ ಇಂಧನ ದುಬಾರಿಯಾಗಿರುವುದರಿಂದ ದೇಶದ ಪ್ರಮುಖ ವಿಮಾನಯಾನ ಕಂಪನಿಗಳಾದ ಏರ್ ಇಂಡಿಯಾ, ಇಂಡಿಗೊ, ಏರ್ ಇಂಡಿಯಾ ಎಕ್ಸ್‌ಪ್ರೆಸ್‌ಗಳು ವಿಮಾನಗಳ ಹಾರಾಟವನ್ನು ಕಡಿಮೆಗೊಳಿಸಲು ನಿರ್ಧರಿಸಿವೆ. ಹೊಸ ಮಾರ್ಗಗಳಲ್ಲಿ ಸಂಚಾರ ಆರಂಭಿಸುವ ತೀರ್ಮಾನಗಳನ್ನೂ ಮುಂದೂಡಿವೆ.

ಜಾಗತಿಕ ಮಾರುಕಟ್ಟೆಯಲ್ಲಿ ವಿಮಾನ ಇಂಧನದ ದರ ಪ್ರತಿ ಬ್ಯಾರಲ್‌ಗೆ 159.85 ಡಾಲರ್ ಇದೆ. ಯುದ್ಧದ ಸಮಯದಲ್ಲಿ ಇದು 196 ಡಾಲರ್‌ವರೆಗೂ ಏರಿಕೆ ಕಂಡಿತ್ತು. ಆ ಬಳಿಕ ಇಳಿಕೆಯಾದರೂ, ಇಂಧನಕ್ಕಾಗಿ ವಿಮಾನಯಾನ ಕಂಪನಿಗಳು ಹೆಚ್ಚು ಹಣ ವ್ಯಯಿಸಬೇಕಾಗಿದೆ. ಏರ್ ಇಂಡಿಯಾವು ಅಂತರರಾಷ್ಟ್ರೀಯ ಮಾರ್ಗಗಳಲ್ಲಿ ವಿಮಾನಗಳ ಹಾರಾಟವನ್ನು ಆಗಸ್ಟ್‌ವರೆಗೆ ಶೇ 27ರಷ್ಟು ಕಡಿತಗೊಳಿಸುವುದಾಗಿ ಈ ಮೊದಲೇ ಹೇಳಿತ್ತು. ಈಗ ದೇಶೀಯ ಮಾರ್ಗಗಳಲ್ಲಿ ಜೂನ್ ಮತ್ತು ಜುಲೈ ತಿಂಗಳಲ್ಲಿ ವಿಮಾನಗಳ ಹಾರಾಟವನ್ನು ಶೇ 20ರಿಂದ 22ರಷ್ಟು ಕಡಿತಗೊಳಿಸುವುದಾಗಿ ಹೇಳಿದೆ. ಅದರ ಅಂಗ ಸಂಸ್ಥೆ ಏರ್‌ಇಂಡಿಯಾ ಎಕ್ಸ್‌ಪ್ರೆಸ್ ಶೇ 10ರಷ್ಟು ಕಡಿತಗೊಳಿಸಲು ನಿರ್ಧರಿಸಿದೆ. ಇಂಡಿಗೊ ಕೂಡ ಅಂತರರಾಷ್ಟ್ರೀಯ ವಿಮಾನಗಳ ಹಾರಾಟವನ್ನು ಶೇ 17ರಷ್ಟು ಕಡಿತಗೊಳಿಸಿದ್ದು, ದೇಶೀಯ ಮಾರ್ಗಗಳಲ್ಲಿ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 12ರಿಂದ ಶೇ 15ರಷ್ಟು ಕಡಿಮೆಗೊಳಿಸಲು ತೀರ್ಮಾನಿಸಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ರಸ್ತೆಯಲ್ಲಿ ಕಾವಿಧಾರಿಯೊಬ್ಬರು ನಡೆದು ಬರುತ್ತಿರುತ್ತಾರೆ. ಅತಿವೇಗವಾಗಿ ಬಂದ ಕಾರೊಂದು ಇನ್ನೇನು ಹಿಂದಿನಿಂದ ಅವರಿಗೆ ಡಿಕ್ಕಿ ಹೊಡೆಯುತ್ತದೆ ಎನ್ನುವಾಗ, ಗೂಳಿಯೊಂದು ಓಡಿಬಂದು ಅವರನ್ನು ಪಕ್ಕಕ್ಕೆ ತಳ್ಳಿ, ಅಪಘಾತದಿಂದ ರಕ್ಷಿಸುತ್ತದೆ. ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ವಿಡಿಯೊವನ್ನು ಹಲವರು ಹಂಚಿಕೊಳ್ಳುತ್ತಿದ್ದು, ನಂದಿಯು ಸಾಧುವನ್ನು ಅಪಘಾತದಿಂದ ರಕ್ಷಿಸಿರುವ ಘಟನೆ ನಡೆದಿದೆ ಎಂದು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ನಿಜವಲ್ಲ.

ವಿಡಿಯೊದ ಕೀಫ್ರೇಮ್‌ಗಳನ್ನು ಇನ್‌ವಿಡ್ ಟೂಲ್ ಮೂಲಕ ಪ್ರತ್ಯೇಕಿಸಿ, ಗೂಗಲ್ ಲೆನ್ಸ್ ಮೂಲಕ ಪರಿಶೀಲನೆಗೊಳಪಡಿಸಿದಾಗ, ಹಲವರು ಇದೇ ವಿಡಿಯೊ ಅನ್ನು ಇಂಥದೇ ಪ್ರತಿಪಾದನೆಯೊಂದಿಗೆ ಹಂಚಿಕೊಂಡಿರುವುದು ಕಂಡಿತು. ಈ ಹುಡುಕಾಟವು ಇನ್‌ಸ್ಟಾಗ್ರಾಂನ ‘ಮೊಜಿಲೊ ವಂಡ್ರೊ’ ಎನ್ನುವ ಖಾತೆಗೆ ಸಂಪರ್ಕ ಕಲ್ಪಿಸಿತು. ಆ ಖಾತೆಯಲ್ಲಿ ಏಪ್ರಿಲ್ 27ರಂದು ಇದೇ ವಿಡಿಯೊ ಅಪ್‌ಲೋಡ್ ಮಾಡಲಾಗಿದೆ. ಅದು ಎಐ ನಿರ್ಮಿತ ವಿಡಿಯೊಗಳನ್ನು ಹಂಚಿಕೊಳ್ಳುವುದಕ್ಕೆ ಹೆಸರಾದ ಖಾತೆ. ಜತೆಗೆ, ವಿಡಿಯೊದಲ್ಲಿನ ದೃಶ್ಯಗಳು ಅನುಮಾನಾಸ್ಪದವಾಗಿ ಕಂಡವು. ವಿಡಿಯೊ ಅನ್ನು ಹೈವ್ ಮಾಡರೇಷನ್ ಎನ್ನುವ ಎಐ ಪತ್ತೆ ಟೂಲ್ ಮೂಲಕ ಪರೀಕ್ಷಿಸಿದಾಗ, ಅದು ಡೀಪ್‌ಫೇಕ್ ವಿಡಿಯೊ ಎನ್ನುವುದು ಖಚಿತವಾಯಿತು ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನಿಮ್ಮ ಹಣ ನಿಮ್ಮ ಕೈಯಲ್ಲಿರಲಿ

ನುಡಿ ಬೆಳಗು

ರೇಣುಕಾ ನಿಡಗುಂದಿ

ವಿಜಯಪತ್ ಸಿಂಘಾನಿಯಾ ಅವರು ರೇಮಂಡ್ ಗ್ರೂಪ್‌ನ (Raymond Group) ಮಾಜಿ ಅಧ್ಯಕ್ಷರು. ಅವರು ರೇಮಂಡ್ ಸಮೂಹವನ್ನು ವಿಶ್ವಪ್ರಸಿದ್ಧ ಬ್ರ್ಯಾಂಡ್ ಆಗಿಸಿ, ವಿಶ್ವದ ಅತಿ ದೊಡ್ಡ ಸೂಟ್ ತಯಾರಿಕಾ ಕಂಪನಿಗಳಲ್ಲೊಂದು ಆಗುವಂತೆ ಕಟ್ಟಿ ಬೆಳೆಸಿದರು. ಅವರನ್ನು ‘ಟೆಕ್ಸ್‌ಟೈಲ್ ಕಿಂಗ್’ ಎಂದು ಕರೆಯಲಾಗುತ್ತಿತ್ತು. ‘ದಿ ಕಂಪ್ಲೀಟ್ ಮ್ಯಾನ್’ ಎಂಬ ರೂಪಕದೊಂದಿಗೆ ರೇಮಂಡ್ ಅನ್ನು ಮನೆಮನೆಯಲ್ಲಿ ಪ್ರಸಿದ್ಧಗೊಳಿಸಿದರು. ಅವರು ಅದ್ಭುತ ಪೈಲಟ್ ಕೂಡ ಆಗಿದ್ದರು. 2005ರಲ್ಲಿ ಹಾಟ್ ಏರ್ ಬೆಲೂನ್‌ನಲ್ಲಿ ಅತಿ ಹೆಚ್ಚು ಎತ್ತರಕ್ಕೆ ಹಾರಿದ ವಿಶ್ವದಾಖಲೆಯನ್ನು ನಿರ್ಮಿಸಿದ್ದರು. ಭಾರತ ಸರ್ಕಾರವು ಅವರಿಗೆ ಪದ್ಮಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

2015ರಲ್ಲಿ ಇಂತಹ ಈ ಮಹಾನ್ ವ್ಯಕ್ತಿಯ ಜೀವನದಲ್ಲಿ ಅತಿ ದೊಡ್ಡ ತಿರುವು ಬಂತು. ಭಾವನಾತ್ಮಕವಾಗಿ ಅವರು ತಮ್ಮ ಕಂಪನಿಯ ಸಂಪೂರ್ಣ ಷೇರುಗಳನ್ನು (ಸುಮಾರು ಶೇ 37) ತಮ್ಮ ಮಗ ಗೌತಮ್ ಸಿಂಘಾನಿಯಾ ಅವರಿಗೆ ಹಸ್ತಾಂತರಿಸಿದರು. ನಂತರ ಅದನ್ನೇ ಅವರು ತಮ್ಮ ‘ಅತ್ಯಂತ ದೊಡ್ಡ ತಪ್ಪು’ ಎಂದು ಒಪ್ಪಿಕೊಳ್ಳುತ್ತಾರೆ. ಏಕೆಂದರೆ ಕೆಲಕಾಲದ ಬಳಿಕ ಆಸ್ತಿ ವಿವಾದದಲ್ಲಿ ಮಗನೇ ಅವರನ್ನು ಅವರು ನಿರ್ಮಿಸಿದ್ದ ಪ್ರಸಿದ್ಧ ‘ಜೆಕೆ ಹೌಸ್’ನಿಂದ ಹೊರಹಾಕಿದರು. ಸಾವಿರಾರು ಕೋಟಿ ಮೌಲ್ಯದ ಸಾಮ್ರಾಜ್ಯ ಕಟ್ಟಿ ನಿಲ್ಲಿಸಿದ್ದ ಸಿಂಘಾನಿಯ ವೃದ್ಧಾಪ್ಯದಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದರು ಎಂಬ ವರದಿಗಳು ಜನಮನದಲ್ಲಿ ಆಘಾತ ಮೂಡಿಸಿತು.

ಒಬ್ಬ ತಂದೆಯಾಗಿ ವಿಜಯಪತ್ ಸಿಂಘಾನಿಯಾ ದೊಡ್ಡ ಆಸ್ತಿಯ ಭಾಗವನ್ನು ಮಗನಿಗೆ ಹಸ್ತಾಂತರಿಸಿದಾಗ ತನ್ನ ಕುಟುಂಬದ ಪರಂಪರೆ ಸುರಕ್ಷಿತ ಕೈಗಳಲ್ಲಿದೆ ಎಂದು ಭಾವಿಸಿದ್ದರು. ಕಡೆಗೆ ಅನೇಕ ಕಷ್ಟಗಳನ್ನು ಅನುಭವಿಸಿದ ಆ ದೊಡ್ಡ ಜೀವ ಸಾರ್ವಜನಿಕವಾಗಿ ದುಃಖ ವ್ಯಕ್ತಪಡಿಸಿ, ತಮ್ಮ ಮಗನೇ ಬೀದಿಗೆ ತಳ್ಳಿದ ಮತ್ತು ಮೂಲಭೂತ ಸೌಲಭ್ಯಗಳನ್ನೂ ಕಸಿದುಕೊಂಡ ಎಂದು ನೋಯುವಂತಾಯಿತು. ಕೊನೆಗೆ ತಮ್ಮ ಆತ್ಮಗೌರವಕ್ಕಾಗಿ ಹೋರಾಟ ನಡೆಸುತ್ತಾ, ಇತ್ತೀಚೆಗೆ 28 ಮಾರ್ಚ್ 2026ರಂದು ಅವರು ಇಹಲೋಕ ತ್ಯಜಿಸಿದರು.

ಈ ಘಟನೆ ಬದುಕಿನ ಅತ್ಯಂತ ಕಹಿ ಪಾಠವನ್ನು ಕಲಿಸುತ್ತದೆ. ನಮ್ಮ ಮಕ್ಕಳು, ಜೀವನ ಸಂಗಾತಿ ಅಥವಾ ಯಾವುದೇ ಸಂಬಂಧಿಕರು ಎಷ್ಟೇ ಪ್ರಿಯರಾಗಿದ್ದರೂ, ತಾಯಿ-ತಂದೆಯೇ ಆಗಿದ್ದರೂ ನೀವು ಬದುಕಿರುವಾಗಲೇ ಎಲ್ಲವನ್ನೂ ಯಾರಿಗೂ ಸಂಪೂರ್ಣವಾಗಿ ಒಪ್ಪಿಸಬಾರದು. ಅನೇಕ ನಗರಗಳಲ್ಲಿ ಹೆಚ್ಚುತ್ತಿರುವ ವೃದ್ಧಾಶ್ರಮಗಳನ್ನು ನೋಡಿದರೆ ಚಿಂತೆಯಾಗುತ್ತದೆ. ಹಣ ಮಾಡುವ ಉದ್ಯಮದಂತೆ ಜನರು ವೃದ್ಧರಿಗಾಗಿ ಪಿಜಿ ವಸತಿಗಳನ್ನು ನಡೆಸುತ್ತಿದ್ದಾರೆ. ಹೆತ್ತ ಮಕ್ಕಳೇ ತಮ್ಮನ್ನು ಸಾಕಿ ಬೆಳೆಸಿ ವಿದ್ಯೆ ಕಲಿಸಿ ತಾವು ಕೂಡಿಟ್ಟ ಸಂಪತ್ತನ್ನು ಧಾರೆ ಎರೆದು ನೆಮ್ಮದಿಯ ಬದುಕನ್ನು ನೀಡಿದ ತಮ್ಮ ತಂದೆ ತಾಯಿಯರನ್ನು ಅಲ್ಲಿಗೆ ತಂದು ಬಿಡುವ ಕಲ್ಪನೆಯೇ ಅತ್ಯಂತ ಘೋರವಾದುದು.

ಇತ್ತೀಚೆಗೆ ಅನ್ನದಾನಕ್ಕಾಗಿ ವೃದ್ಧಾಶ್ರಮಕ್ಕೆ ಹೋಗಿದ್ದ ಗೆಳತಿಯೊಬ್ಬಳು ಅಲ್ಲಿನ ಸ್ಥಿತಿಯನ್ನು ಕಣ್ಣಾರೆ ಕಂಡು ಕಣ್ಣೀರಾಗಿದ್ದಳು. ಮಕ್ಕಳ ಮೊಮ್ಮಕ್ಕಳ ಪ್ರೀತಿ ವಾತ್ಸಲ್ಯದಲ್ಲಿ ಬಾಳಬೇಕಾದ ಜೀವಗಳನ್ನು ಈ ರೀತಿ ನರಕಕ್ಕೆ ದಬ್ಬುವ ಮಕ್ಕಳು ಇದ್ದರೇನು ಫಲ? ಜೀವವಿರುವ ತನಕ ನಿಮ್ಮ ಕೈಯಲ್ಲಿ ನಿಮ್ಮದಾದ ಹಣವಿರಲಿ, ಆರೋಗ್ಯವನ್ನು ಕಾಪಾಡಿಕೊಳ್ಳಿ. ಯಾರ ಮೇಲೂ ನಿರೀಕ್ಷೆಗಳಿಲ್ಲದ ಆತ್ಮವಿಶ್ವಾಸವಿರಲಿ. ❖

ಪದಬಂಧ 6417

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹಳೆಯದನ್ನು ಪುನಃ ಹೊಸದು ಮಾಡುವುದು (5)
3.ಪ್ರಯಾಸದಿಂದ ಅದ ಹೆರಿಗೆ (3)
5.ಪ್ರಾಂತವಿಲ್ಲಿ ಉಲ್ಟಾ ಪಲ್ಟಾ ಕಾಣುತಿದೆ (2)
7.ಕಲಹಂಸಕ್ಕಾಗಿ ನಡೆದ ಜಗಳ (3)
8.ತಪ್ಪಾಗಿ ಭಾವಿಸುವಿಕೆ (5)
11.ತಿರುಗಿ ನೋಡಿದರೂ ಇದು ವಂದನೆ (3)
12.ರಜೋಗುಣದಲ್ಲಿರುವ ಕಾಳಗ ಉಲ್ಟಾಪಲ್ಟಾ ಕಾಣುತಿದೆ (2)
14.ಸಾಗಿಸುವುದಕ್ಕೊಂದು ಪರ್ಯಾಯ ಪದ (3)
15.ಮೈಗುಣವಿದು (5)

ಮೇಲಿಂದ ಕೆಳಕ್ಕೆ

1.ತೆಳುವಾದ ಎಳೆಯಿದು (4)
2.ಉತ್ತರದವರ ವಿಪುಲತೆ (3)
4.ಪಾಳಯ ಇಲ್ಲಿದೆ (4)
6.ಹೆಸರಿಡುವ ಶಾಸ್ತ್ರ (5)
7.ಊಹೆಯನ್ನು ಹೀಗೆನ್ನಿ (3)
8.ತನಯನು ಈ ರೀತಿ ಮಗ್ನ! (3)
9.ವರ ಪಡೆದುಕೊಂಡಿರುವ ಬೇಡ (4)
10.ನಡುವೆ ವನ ಬಂದದ್ದಕ್ಕೇ ಈ ದುರ್ದಸೆ! (4)
13.ನಡುಮನೆ ಇಲ್ಲಿ ಉಲ್ಟಾ ಪಲ್ಟಾ ಕಾಣುತಿದೆ (3)



6416ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅಭಿಮಾನ 3.ಬಾಲಂಗೋಸಿ 5.ಗುಡಾಣ 6.ತಿಮಿರ 8.ಪುಳಕ 9.ಮಣಕ 10.ಲಾಲಸೆ 11.ಕವಳ 12.ಸುದಾಮ 14.ಮದುವೆ 16.ಸರೋವರ 17.ನಾಗರಿಕ

ಮೇಲಿಂದ ಕೆಳಕ್ಕೆ: 1.ಅದಿತಿ 2.ನಗು 3.ಬಾಣ 4.ಸಿಡುಕ 7.ರಸಕವಳ 8.ಪುಸಲಾಯಿಸು 11.ಕಳಸ 13.ಮಶಕ 14.ಮರ 15.ವೆನಾ

ಸುಡೊಕು 6800

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	4		2		9	6		1
	6	1		8		2	7	
	7		1		4			8
		4				1		
2	8		6	9	1			
		7					6	5
	5			1				7
	1	6	8		2	5	3	
4	2			5				6

6799 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

29 ಮೇ 2026 ಶುಕ್ರವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಅಧಿಕ ಜ್ಯೇಷ್ಠ ಶುಕ್ಲ ತ್ರಯೋದಶಿ ಗಂ. 09-51 ನಕ್ಷತ್ರ : ಸ್ವಾತಿ ಗಂ. 10-38 ಯೋಗ : ಪರಿಘ ಗಂ. 28-36 ಕರಣ : ತೈತಿಲ ಗಂ. 09-51, ವೃಷಭ ಮಾಸದ 15 ನೇ ದಿನ. ಮಳೆ ನಕ್ಷತ್ರ : ರೋಹಿಣಿ 2 ನೇ ಪಾದ. ರಾಹುಕಾಲ : ಬೆಳಿಗ್ಗೆ 10-30 - 12-00 ಸೂರ್ಯೋದಯ : 06-06 ಸೂರ್ಯಾಸ್ತ : 06-49 ಮುಸ್ಲಿಂ ದಿನಾಂಕ : 12 ದುಲ್ ಹಿಜ್ಜಾ ಅದೃಷ್ಟ ಸಂಖ್ಯೆ : 2, 6

ಮೇಷ: ವೃತ್ತಿ ವಿಚಾರದಲ್ಲಿ ಶತ್ರುಗಳ ಉಪಟಳದಿಂದ ತಪ್ಪಿಸಿಕೊಳ್ಳಲು ಹರಸಾಹಸ ಮಾಡಬೇಕಾಗುತ್ತದೆ. ಕಾಗದಪತ್ರಗಳ ನಿರ್ವಹಣೆಯಲ್ಲಿ ಎಚ್ಚರವಿರಲಿ. ಧಾರ್ಮಿಕತೆ ಅನುಸರಿಸುವುದರಿಂದ ಶುಭವಾಗುತ್ತದೆ.

ವೃಷಭ: ಕೋರ್ಟು, ಕಚೇರಿ ವ್ಯವಹಾರದಲ್ಲಿ ಜಯ ಪಡೆಯುವ ಬಗ್ಗೆ ಅಧಿಕ ಪ್ರಯತ್ನವಿರಲಿ. ಬಟ್ಟೆ ಉದ್ಯಮದವರಿಗೆ ಲಾಭ ಬರುವುದು. ಮನಃಶಾಸ್ತ್ರಜ್ಞರಿಗೆ ವೃತ್ತಿಯಲ್ಲಿ ಹಿನ್ನಡೆ ಉಂಟಾಗಬಹುದು.

ಮಿಥುನ: ಮಕ್ಕಳ ಆರೋಗ್ಯ ಉತ್ತಮ ಸ್ಥಿತಿಗೆ ಬರುತ್ತದೆ. ಜವಾಬ್ದಾರಿಗಳನ್ನು ಇತರರಿಗೆ ವಹಿಸಿ ಆರಾಮವಾಗಿರಲು ತೀರ್ಮಾನಿಸಿ. ಸಿವಿಲ್ ಎಂಜಿನಿಯರ್‌ಗಳು ಬಳಸುವ ತಂತ್ರಜ್ಞಾನದಲ್ಲಿ ಗಮನವಿರಲಿ.

ಕರ್ಕಾಟಕ: ಕುಟುಂಬದಲ್ಲಿ ಮಾತಿಗೆ, ಶ್ರಮಕ್ಕೆ ಉತ್ತಮ ಸಹಕಾರ ಇರುವುದು ಸಮಾಧಾನ ತರಲಿದೆ. ಶ್ರೀಮಂತ ಮನೆತನದ ಸಂಬಂಧ ಮಗನನ್ನು ಹುಡುಕಿಕೊಂಡು ಬರಲಿದೆ.

ಸಿಂಹ: ಆರೋಪಗಳು ನಿರಾಧಾರ ಎಂದು ಸಾಬೀತುಗೊಂಡು ಮನಸ್ಸಿಗೆ ನೆಮ್ಮದಿ ಉಂಟಾಗುವುದು. ಶುಭ ಕಾರ್ಯಕ್ಕಾಗಿ ನೆಂಟರಿಷ್ಟರ ಆಗಮನ ಹಬ್ಬದ ವಾತಾವರಣವನ್ನು ಮೂಡಿಸಲಿದೆ.

ಕನ್ಯಾ: ಸರ್ಕಾರಿ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುವವರಿಗೆ ಮೇಲಧಿಕಾರಿಗಳ ಒತ್ತಡ ಹೆಚ್ಚುವುದು. ಮರದ ವ್ಯಾಪಾರಿಗಳಿಗೆ ಅಥವಾ ಮರಗೆಲಸಕಾರರಿಗೆ ಲಾಭವಾಗಲಿದೆ. ಆಸಕ್ತಿಯ ಕೊರತೆ ಕಾಣಬಹುದು.

ತುಲಾ: ಇತರರೂ ಸಂತೋಷವಾಗಿರಬೇಕೆಂಬ ಮನೋಭಾವದಿಂದಾಗಿ ಗೌರವವನ್ನು ಪಡೆದುಕೊಳ್ಳುವಿರಿ. ಆರಕ್ಷಕ ವರ್ಗದವರಿಗೆ ಅಥವಾ ಕಾವಲು ಪಡೆಯವರಿಗೆ ಕಾರ್ಯದೊತ್ತಡ ಹೆಚ್ಚಲಿದೆ.

ವೃಶ್ಚಿಕ: ವ್ಯಾಪಾರಸ್ಥರಿಗೆ ಗುಣಮಟ್ಟಕ್ಕೆ ಪ್ರಾಮುಖ್ಯ ಕೊಡುವ ಬಗ್ಗೆ ಗಮನವಿರಲಿ. ಯೋಜನೆಗೆ, ಮಾತುಗಳಿಗೆ ಎಲ್ಲರಿಂದಲೂ ಮನ್ನಣೆ ದೊರೆಯಲಿದೆ. ಕೈಗೆತ್ತಿಕೊಂಡಿರುವ ಕೆಲಸಗಳು ಪ್ರಯೋಜನಕಾರಿ ಎನಿಸಲಿವೆ.

ಧನು: ಜೀವನಶೈಲಿಯಲ್ಲಿ ಸಮತೋಲಿತ ದಿನಚರಿಯನ್ನು ಅನುಸರಿಸಿ. ಏಕ ಮನಸ್ಕರರ ಮಿತ್ರರೊಡಗೂಡಿ ಸಣ್ಣಮಟ್ಟದ ಉತ್ಪಾದನಾ ಘಟಕ ಪ್ರಾರಂಭಿಸುವ ಯೋಚನೆಗಳು ಬರಲಿವೆ.

ಮಕರ: ಯೋಚನಾಬದ್ಧ ನಿರ್ಧಾರಕ್ಕೆ ತಕ್ಕ ಫಲವನ್ನು ಪಡೆಯಬಹುದು. ಗೌರವಕ್ಕೆ ಚ್ಯುತಿ ಬರುವಂತಹ ಅನಿವಾರ್ಯದ ಸಂದರ್ಭದಲ್ಲಿಯೂ ಧನಾರ್ಜನೆ ಆಶ್ಚರ್ಯವೆನಿಸುವುದು. ಅಪವಾದದ ಭೀತಿ ಕಳವಳ ಮೂಡಿಸಲಿದೆ.

ಕುಂಭ: ಉತ್ಸಾಹದಿಂದ ಜೀವನದಲ್ಲಿ ಹೊಸ ತಿರುವೊಂದನ್ನು ಪಡೆದುಕೊಳ್ಳುವಿರಿ. ಯೋಜನೆಗಳು ಪೂರ್ವ ನಿಯೋಜಿತವಾಗಿ ವ್ಯವಸ್ಥಿತ ರೂಪದಲ್ಲಿ ಸಾಗಲಿವೆ. ಸೋಮಾರಿತನವೇ ಶತ್ರುವಾಗಿ ಪರಿಣಾಮ ಬೀರುವುದು.

ಮೀನ: ಸಿದ್ಧ ಉಡುಪು ತಯಾರಕರಿಗೆ ಹಾಗೂ ಮಾರಾಟಗಾರರಿಗೆ ವಿಶೇಷ ಲಾಭ ಬರುವುದು. ಮಾತಾ-ಪಿತೃಗಳ ಆಶೀರ್ವಾದದಿಂದ ಕೆಲಸ ಕಾರ್ಯಗಳಲ್ಲಿ ವಿಜಯ ಪಡೆಯುವಿರಿ. ಧಾರ್ಮಿಕ ಕೆಲಸಗಳನ್ನು ಉತ್ತಮವಾಗಿ ಮಾಡಿಸುವಿರಿ.

ಗುಂಡಣ್ಣ

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1630 (1640)
ಸೋಯಾ (ರಿಫೈನ್ಡ್)	₹1510 (1500)
ಸೂರ್ಯಕಾಂತಿ (ರಿಫೈನ್ಡ್)	₹1650 (1650)
ಪಾಮೋಲಿನ್	₹1490 (1490)

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹247
ಆರ್‌ಎಸ್‌ಎಸ್-5	₹238
ಗುಡ್ ಲಾಟ್	₹205

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹620
	12 ಕ್ಕೆ	₹86
ಮೈಸೂರು:	100 ಕ್ಕೆ	₹630

₹ ಮೌಲ್ಯ ಕುಸಿಯಲು ಬಿಡಿ: ಸುಬ್ಬರಾವ್

ರೂಪಾಯಿ ಕುಸಿತದ ಹೊತ್ತಿನಲ್ಲಿ ಆರ್‌ಬಿಐ ಮಾಜಿ ಗವರ್ನರ್ ಅಭಿಪ್ರಾಯ

ಮುಂಬೈ (ಪಿಟಿಐ): ಬಾಹ್ಯ ಒತ್ತಡಗಳನ್ನು ನಿಭಾಯಿಸಲು ರೂಪಾಯಿ ಮೌಲ್ಯವು ಇನ್ನಷ್ಟು ಕುಸಿಯಲು ಕೇಂದ್ರೀಯ ಬ್ಯಾಂಕ್ ಬಿಡಬೇಕು ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಮಾಜಿ ಗವರ್ನರ್ ಡಿ. ಸುಬ್ಬರಾವ್ ಅಭಿಪ್ರಾಯಪಟ್ಟಿದ್ದಾರೆ.

ದೇಶದಲ್ಲಿ ಹಣದುಬ್ಬರದ ಅಪಾಯ ಜಾಸ್ತಿ ಆದರೆ, ರೆಪೊ ದರವನ್ನು ಹೆಚ್ಚು ಮಾಡುವ ಬದಲು ನಗದು ಹರಿವಿಗೆ ಸಂಬಂಧಿಸಿದ ಇತರ ಕ್ರಮಗಳ ಮೊರೆ ಹೋಗಬೇಕು ಎಂದು ಅವರು ಹೇಳಿದ್ದಾರೆ.

ರೆಪೊ ದರದ ಬಗ್ಗೆ, ಹಣಕಾಸಿನ ನೀತಿಯ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ಆರ್‌ಬಿಐನ ಹಣಕಾಸು ನೀತಿ ಸಮಿತಿಯ ಸಭೆಯು ಇನ್ನು ಕೆಲವೇ ದಿನಗಳಲ್ಲಿ ನಡೆಯಲಿದೆ. ಈ ಸಂದರ್ಭದಲ್ಲಿ ಸುಬ್ಬರಾವ್ ಅವರು ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮುಖ್ಯಾಂಶಗಳು

- ವರ್ಷದ ಅವಧಿಯಲ್ಲಿ ರೂಪಾಯಿ ಶೇ 10ರಷ್ಟು ಕುಸಿತ
- ಹಣಕಾಸು ನೀತಿಯು ಅಂತಿಮ ಅಸ್ತ್ರ: ಸುಬ್ಬರಾವ್

ರೂಪಾಯಿ ವಿನಿಮಯ ಮೌಲ್ಯವನ್ನು ರಕ್ಷಿಸಲು ಹಣಕಾಸು ನೀತಿಗಳನ್ನು ಅಂತಿಮ ಅಸ್ತ್ರವನ್ನಾಗಿ ಮಾತ್ರ ಬಳಸಬೇಕು ಎಂದು ಹೇಳಿದ್ದಾರೆ.

'ಹಣದುಬ್ಬರದ ವಿಚಾರವಾಗಿ ಅಗತ್ಯ ಸಂದರ್ಭ ಎದುರಾದರೆ ಆರ್‌ಬಿಐ ಹಣಕಾಸು ನೀತಿಯನ್ನು ಬಿಗಿಗೊಳಿಸಬಹುದು' ಎಂದು ಅವರು ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ. ಸುಬ್ಬರಾವ್ ಅವರು 2008ರಿಂದ 2013ರವರೆಗೆ ಆರ್‌ಬಿಐ ಗವರ್ನರ್ ಆಗಿದ್ದರು.

> ರೆಪೊ ದರ ಜಾಸ್ತಿ ಮಾಡಿದರೆ ಆರ್ಥಿಕ ಚಟುವಟಿಕೆಗಳ ಮೇಲೆ ಪರಿಣಾಮ ಆಗಬಹುದು, ಜಿಡಿಪಿ ಬೆಳವಣಿಗೆಗೆ ಪೆಟ್ಟು ಬೀಳಬಹುದು.
> **ಡಿ. ಸುಬ್ಬರಾವ್,** ಆರ್‌ಬಿಐ ಮಾಜಿ ಗವರ್ನರ್

'ಅಲ್ಪಮಟ್ಟದ ಹೊಂದಾಣಿಕೆಯನ್ನು ಮಾಡಿಕೊಳ್ಳದೆ ರೂಪಾಯಿ ವಿನಿಮಯ ಮೌಲ್ಯ ಕುಸಿತವನ್ನು ತಡೆಯುವ ಬದಲು, ಮೌಲ್ಯವು ತನ್ನದೇ ಮಟ್ಟ ಕಂಡುಕೊಳ್ಳಲು ಅವಕಾಶ ಕಲ್ಪಿಸಬೇಕು. ಏಕೆಂದರೆ ಈಗಿನ ಒತ್ತಡಗಳು ದೇಶದ ಪಾವತಿಗಳ ಬಾಕಿಯಲ್ಲಿನ ಸಮತೋಲನವು ತಪ್ಪಿರುವುದನ್ನು ಹೇಳುತ್ತಿವೆ. ದುರ್ಬಲಗೊಂಡಿರುವ ರೂಪಾಯಿ ಮೌಲ್ಯವು ಆಘಾತಗಳನ್ನು ತಾಳಿಕೊಳ್ಳುವ ಸಹಜ ಅಸ್ತ್ರವಾಗಿ ಕೆಲಸ ಮಾಡುತ್ತದೆ' ಎಂದು ಸುಬ್ಬರಾವ್ ಹೇಳಿದ್ದಾರೆ.

ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ಕುಸಿತ ಕಾಣುತ್ತಿದೆ. [illegible] 97.15ಕ್ಕೆ ಕುಸಿದಿತ್ತು.

ಪಶ್ಚಿಮ ಏಷ್ಯಾದಲ್ಲಿ ಯುದ್ಧ ಆರಂಭವಾದ ನಂತರದಲ್ಲಿ ರೂಪಾಯಿ ಮೌಲ್ಯವು ಶೇ 5ರಷ್ಟು ಕುಸಿದಿದೆ ಎಂದು ಮಾರುಕಟ್ಟೆ ಮೂಲಗಳ ಅಂಕಿ-ಅಂಶಗಳು ಹೇಳುತ್ತವೆ. ಈ ವರ್ಷದ ಆರಂಭದಿಂದ ಈವರೆಗೆ ಮೌಲ್ಯವು ಶೇ 6.10ರಷ್ಟು ಕುಸಿದಿದೆ. ಒಂದು ವರ್ಷದ ಅವಧಿಯನ್ನು ಪರಿಗಣಿಸಿದರೆ ಕುಸಿತವು ಶೇ 10ರಷ್ಟು ಆಗುತ್ತದೆ.

ಒತ್ತಡಗಳು ಹೆಚ್ಚಿರುವ ಸಂದರ್ಭಗಳಲ್ಲಿ ವಿನಿಮಯ ದರದಲ್ಲಿ ಸ್ಥಿರತೆ ತರಲು ಯತ್ನಿಸುವುದು ನಿರೀಕ್ಷೆಗಳನ್ನು ನಿಭಾಯಿಸುವ ಸವಾಲಿನಂತೆ ಇರುತ್ತದೆ ಎಂದು ಸುಬ್ಬರಾವ್ ಬಣ್ಣಿಸಿದ್ದಾರೆ.

'ವಿನಿಮಯ ದರಕ್ಕೆ ಸಂಬಂಧಿಸಿದ ನಿಶ್ಚಿತ ಗುರಿಗಳು ವಿಶ್ವಾಸಕ್ಕೆ ಸಂಬಂಧಿಸಿದ ನಿಶ್ಚಿತ ಗುರಿಗಳಾಗುತ್ತವೆ. ರೂಪಾಯಿ ಮೌಲ್ಯವು ಇನ್ನಷ್ಟು ಕುಸಿಯುತ್ತದೆ ಎಂದು ಹೂಡಿಕೆದಾರರು, ಆಮದುದಾರರು ಮತ್ತು ಕುಟುಂಬಗಳು ಭಾವಿಸಿದರೆ, ಅವರೆಲ್ಲ ಒಟ್ಟಾಗಿ ರೂಪಾಯಿ ಇನ್ನಷ್ಟು ಕುಸಿಯುವ ಬಗೆಯಲ್ಲಿ ವರ್ತಿಸುತ್ತಾರೆ. ರಫ್ತುದಾರರು ದೇಶಕ್ಕೆ ಹಣವನ್ನು ವಾಪಸ್ ತರುವುದನ್ನು ವಿಳಂಬ ಮಾಡುತ್ತಾರೆ, ಆಮದುದಾರರು ಡಾಲರ್ ಖರೀದಿಗೆ ಮುಗಿಬೀಳುತ್ತಾರೆ, ಕುಟುಂಬಗಳ ಮಟ್ಟದಲ್ಲಿ ಚಿನ್ನ ಖರೀದಿ ಜಾಸ್ತಿ ಆಗುತ್ತದೆ, ಹೂಡಿಕೆದಾರರು ನಷ್ಟವನ್ನು ತಗ್ಗಿಸಲು ಯತ್ನಿಸುತ್ತಾರೆ' ಎಂದು ವಿವರಿಸಿದ್ದಾರೆ.

ನೀತಿ ನಿರೂಪಕರು ನಿರ್ಣಾಯಕ ಕ್ರಮಗಳನ್ನು ಕೈಗೊಳ್ಳಬೇಕು. ಆದರೆ ಅವರು ಭೀತಿಗೆ ಒಳದಾದವರಂತೆ ವರ್ತಿಸಬಾರದು ಎಂದು ಸಲಹೆ ನೀಡಿದ್ದಾರೆ.

ಸುದ್ದಿ 2 ನಿಮಿಷ

ಹೊರ್ಮುಜ್ ಜಲಸಂಧಿ ಪ್ರಾಧಿಕಾರ ಮೇಲೆ ಅಮೆರಿಕ ನಿರ್ಬಂಧ

ವಾಷಿಂಗ್ಟನ್(ಎಎಫ್‌ಪಿ): ಹೊರ್ಮುಜ್ ಜಲಸಂಧಿ ಮೂಲಕ ಸಾಗುವ ಹಡಗುಗಳಿಂದ ಶುಲ್ಕ ಸಂಗ್ರಹಿಸುತ್ತಿರುವ ಇರಾನ್‌ನ 'ಪರ್ಷಿಯನ್ ಕೊಲ್ಲಿ ಜಲಸಂಧಿ ಪ್ರಾಧಿಕಾರ'ದ ಮೇಲೆ ನಿರ್ಬಂಧ ಹೇರಿದ್ದಾಗಿ ಅಮೆರಿಕದ ಹಣಕಾಸು ಇಲಾಖೆ ಘೋಷಿಸಿದೆ.

'ಜಗತ್ತಿನ ವಿವಿಧ ರಾಷ್ಟ್ರಗಳ ತೈಲ ಹೊತ್ತ ಹಡಗುಗಳು ಹೊರ್ಮುಜ್ ಜಲಸಂಧಿ ಮೂಲಕ ಸಾಗುತ್ತವೆ. ಈ ಹಡಗುಗಳಿಂದ ಇರಾನ್ ಸೇನೆ ಶುಲ್ಕ ಸಂಗ್ರಹಿಸಲು ಆರಂಭಿಸಿದೆ. ಹಣಕ್ಕಾಗಿ ಇರಾನ್ ಸರ್ಕಾರ ಹತಾಶಗೊಂಡಿರುವುದನ್ನು ಈ ವಿದ್ಯಮಾನ ತೋರಿಸುತ್ತದೆ' ಎಂದು ಹಣಕಾಸು ಇಲಾಖೆ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



'ಪ್ರಾಧಿಕಾರಕ್ಕೆ ಶುಲ್ಕ ಪಾವತಿಸುವ ದೇಶ/ಕಂಪನಿಗಳ ಮೇಲೂ ನಿರ್ಬಂಧ ವಿಧಿಸಲಾಗುವುದು' ಎಂದು ಅವರು ಎಚ್ಚರಿಸಿದ್ದಾರೆ. ಶುಲ್ಕ ಸಂಗ್ರಹಿಸುವ ಉದ್ದೇಶದಿಂದ ಐಆರ್‌ಜಿಸಿ ಈ ಪ್ರಾಧಿಕಾರವನ್ನು ಹೊಸದಾಗಿ ಸ್ಥಾಪಿಸಿದೆ.

ಆಸ್ತಿ ನಗದೀಕರಣಕ್ಕೆ 17 ಹೆದ್ದಾರಿ

ನವದೆಹಲಿ (ಪಿಟಿಐ): ಒಟ್ಟು 1,692 ಕಿ.ಮೀ. ಉದ್ದದ 17 ರಾಷ್ಟ್ರೀಯ ಹೆದ್ದಾರಿ ಆಸ್ತಿಗಳನ್ನು ಇನ್ವಿಟ್‌ಗಳ ಮೂಲಕ ಅಥವಾ ಟಿಒಟಿ ಮಾರ್ಗದಲ್ಲಿ ನಗದೀಕರಣಕ್ಕಾಗಿ ಗುರುತಿಸಲಾಗಿದೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಹೇಳಿದೆ.

ಹರಿಯಾಣ, ಜಾರ್ಖಂಡ್, ಕರ್ನಾಟಕ, ರಾಜಸ್ಥಾನ, ತಮಿಳುನಾಡು, ತೆಲಂಗಾಣ, ಉತ್ತರ ಪ್ರದೇಶ, ಬಿಹಾರ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಈ ಹೆದ್ದಾರಿ ಆಸ್ತಿಗಳು ಇವೆ.

ಇವುಗಳ ನಗದೀಕರಣದ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ಟಿಒಟಿ (ಶುಲ್ಕ-ನಿರ್ವಹಣೆ-ವರ್ಗಾವಣೆ ಮಾದರಿ) ಅಥವಾ ಇನ್ವಿಟ್ ಮಾದರಿಯ ಮೂಲಕ ನಡೆಸಲಾಗುತ್ತದೆ ಎಂದು ಪ್ರಾಧಿಕಾರ ತಿಳಿಸಿದೆ.

ದೀರ್ಘಾವಧಿಗೆ ಸಾಂಸ್ಥಿಕ ಹೂಡಿಕೆದಾರರನ್ನು ಆಕರ್ಷಿಸಲು ಟಿಒಟಿ ಹಾಗೂ ಇನ್ವಿಟ್ ಮಾದರಿಗಳು ಯಶಸ್ವಿಯಾಗಿವೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

ವೈಕುಂಠ ಸಮಾರಾಧನೆ

ಶ್ರೀ ಜಿ.ಎಂ. ಕಾಂತರಾಜ್ Rtd ACP

ನನ್ನ ಪೂಜ್ಯ ಪತಿಯವರಾದ ಶ್ರೀ ಜಿ.ಎಂ. ಕಾಂತರಾಜ್ ರವರು ದಿನಾಂಕ 20-05-2026ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇನೆ.

ಇವರ ತತ್ಸಂಬಂಧವಾದ ಉತ್ತರಕ್ರಿಯಾದಿಯನ್ನು ಮತ್ತು ವೈಕುಂಠ ಸಮಾರಾಧನೆ ದಿನಾಂಕ 30-05-2026ರಂದು ಶನಿವಾರ ಬೆಳಿಗ್ಗೆ 6:50 ರಿಂದ 8:30 ಗಂಟೆಯೊಳಗೆ ನಮ್ಮ ಸ್ವಗೃಹ 7ನೇ ಸೆಕ್ಟರ್, ಹೆಚ್. ಎಸ್. ಆರ್. ಲೇಔಟ್, ಬೆಂಗಳೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ

~ಇಂತಿ ದುಃಖತಪ್ತರು~

ಶ್ರೀಮತಿ ವಿ.ಆರ್.ಲಕ್ಷ್ಮೀದೇವಿ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು

ಮೊ: 9972225582

ಇಂಧನ ವಲಯದಲ್ಲಿ ಹೂಡಿಕೆ ಹೆಚ್ಚಳ: ಐಇಎ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದಲ್ಲಿ ಇಂಧನ ಕ್ಷೇತ್ರದ ಮೇಲೆ ದೇಶದಲ್ಲಿ ಆಗುವ ಹೂಡಿಕೆಯು 170 ಬಿಲಿಯನ್ ಅಮೆರಿಕನ್ ಡಾಲರ್‌ಗೆ (ಅಂದಾಜು ₹16.28 ಲಕ್ಷ ಕೋಟಿ) ಹೆಚ್ಚಲಿದೆ ಎಂದು ಅಂತರರಾಷ್ಟ್ರೀಯ ಇಂಧನ ಏಜೆನ್ಸಿ (ಐಇಎ) ಅಂದಾಜು ಮಾಡಿದೆ.

ಸೌರಶಕ್ತಿ ಹಾಗೂ ತೈಲ ಸಂಸ್ಕರಣೆ ಕ್ಷೇತ್ರದ ಮೇಲಿನ ಹೂಡಿಕೆಯು ಈ ಹೆಚ್ಚಳಕ್ಕೆ ಕಾರಣವಾಗಲಿದೆ ಎಂದು ಅದು ಹೇಳಿದೆ.

ಕಳೆದ ಐದು ವರ್ಷಗಳಲ್ಲಿ ಭಾರತವು ಇಂಧನ ಕ್ಷೇತ್ರದ ಮೇಲೆ ಮಾಡುವ ಹೂಡಿಕೆಯು ವಾರ್ಷಿಕ ಸರಾಸರಿ ಶೇ 11ರಷ್ಟು ಬೆಳವಣಿಗೆ ಕಾಣುತ್ತಿದೆ. ಸೌರಶಕ್ತಿ ಹಾಗೂ ತೈಲ ಸಂಸ್ಕರಣಾ ವಲಯಗಳ ಮೇಲಿನ ಹೂಡಿಕೆಯು ಒಟ್ಟು ಇಂಧನ ಹೂಡಿಕೆಯ ಕಾಲು ಭಾಗದಷ್ಟು ಆಗಿದೆ ಎಂದು ಐಇಎ ಸಿದ್ಧಪಡಿಸಿರುವ 'ವಿಶ್ವ ಇಂಧನ ಹೂಡಿಕೆ 2026' ವರದಿಯಲ್ಲಿ ಉಲ್ಲೇಖಿಸಲಾಗಿದೆ.

ತೈಲ ಸಂಸ್ಕರಣಾ ಕ್ಷೇತ್ರದ ಮೇಲಿನ ಹೂಡಿಕೆಯು ಹೆಚ್ಚಳ ಕಂಡಿರುವುದರಿಂದಾಗಿ ದೇಶವು ತನ್ನ ತೈಲ ಸಂಸ್ಕರಣಾ ಸಾಮರ್ಥ್ಯವನ್ನು 2030ರ ವೇಳೆಗೆ ಶೇ 15ರಷ್ಟು ಹೆಚ್ಚಿಸಿಕೊಳ್ಳುವ ಹಾದಿಯಲ್ಲಿದೆ. ಐಇಎ ವರದಿಯ ಪ್ರಕಾರ ಕಲ್ಲಿದ್ದಲು ಪೂರೈಕೆಯ ಮೇಲೆ ಭಾರಿ ಮೊತ್ತ ಹೂಡಿಕೆ ಮಾಡಿರುವ ದೇಶಗಳ ಪಟ್ಟಿಯಲ್ಲಿ ಭಾರತವು 2ನೇ ಸ್ಥಾನದಲ್ಲಿದೆ. ಒಂದು ದಶಕದ ಅವಧಿಯಲ್ಲಿ ಈ ವಲಯದಲ್ಲಿ ದೇಶದ ಹೂಡಿಕೆಯು 3 ಪಟ್ಟು ಹೆಚ್ಚಾಗಿದೆ.

ತಳಮಟ್ಟದಿಂದ ಮಾಹಿತಿ ಪಡೆಯುವ ಉದ್ದೇಶ

ಅಧಿಕಾರಿಗಳಿಂದ ಕ್ಷೇತ್ರ ಭೇಟಿ

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿನ ಯುದ್ಧದಿಂದಾಗಿ ಸೃಷ್ಟಿಯಾಗಿರುವ ಸವಾಲುಗಳನ್ನು ನಿಭಾಯಿಸಲು ಹಾಗೂ ಆರ್ಥಿಕ ನೀತಿ ರೂಪಿಸುವುದಕ್ಕೆ ನೆರವಾಗಲು ಕೇಂದ್ರ ಹಣಕಾಸು ಸಚಿವಾಲಯವು ಇದೇ ಮೊದಲ ಬಾರಿಗೆ ರಾಷ್ಟ್ರವ್ಯಾಪಿ ಕ್ಷೇತ್ರ ಭೇಟಿ ಕಾರ್ಯಕ್ಕೆ ಚಾಲನೆ ನೀಡಿದೆ.

ಇದರ ಭಾಗವಾಗಿ ಆರ್ಥಿಕ ವ್ಯವಹಾರಗಳ ಇಲಾಖೆಯ ಅಧಿಕಾರಿಗಳ ತಂಡವು ತಯಾರಿಕಾ ಘಟಕಗಳಿಗೆ ಹಾಗೂ ಕೈಗಾರಿಕಾ ಪ್ರದೇಶಗಳಿಗೆ ಭೇಟಿ ನೀಡಿ, ತಳಮಟ್ಟದಿಂದ ಪ್ರತಿಕ್ರಿಯೆ ಪಡೆಯಲಿದೆ. ಅಧಿಕಾರಿಗಳ ತಂಡವು ಬೃಹತ್ ಕೈಗಾರಿಕೆಗಳು ಹಾಗೂ ಮಧ್ಯಮ ಮತ್ತು ಸಣ್ಣ ಗಾತ್ರದ ತಯಾರಿಕಾ ಘಟಕಗಳಿಗೆ ಭೇಟಿ ನೀಡಲಿದೆ.

ಮೂಲಸೌಕರ್ಯದಲ್ಲಿ ಇರುವ ಸಮಸ್ಯೆಗಳು, ನಿಯಮಗಳಲ್ಲಿನ ಅಡ್ಡಿಗಳು, ಪೂರೈಕೆ ವ್ಯವಸ್ಥೆಯಲ್ಲಿ ಆಗಿರುವ ಸಮಸ್ಯೆಗಳು, ಹಣಕಾಸಿನ ನೆರವು ಪಡೆಯುವುದರಲ್ಲಿನ ಸಮಸ್ಯೆ, ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವಲ್ಲಿ ಇರುವ ಅಡ್ಡಿಗಳ ಬಗ್ಗೆ ನೇರವಾಗಿ ಮಾಹಿತಿ ಪಡೆಯಲು ತಂಡವು ಭೇಟಿ ನೀಡಲಿದೆ. ಈ ಕುರಿತಾಗಿ ಹಣಕಾಸು ಸಚಿವಾಲಯದಿಂದ ಪ್ರತಿಕ್ರಿಯೆ ಲಭ್ಯವಾಗಿಲ್ಲ.

ದೇಶದಲ್ಲಿ ಸರ್ಕಾರದ ಕಡೆಯಿಂದ ಬಂಡವಾಳ ವೆಚ್ಚಗಳು ದೊಡ್ಡ ಮಟ್ಟದಲ್ಲಿ ಆಗುತ್ತಿದ್ದರೂ, ಖಾಸಗಿ ವಲಯದಿಂದ ಹೂಡಿಕೆ ಸಮಾನವಾಗಿ ಆಗಿಲ್ಲ. ಪಶ್ಚಿಮ ಏಷ್ಯಾದಲ್ಲಿನ ಯುದ್ಧವು ಕಚ್ಚಾ ತೈಲದ ಬೆಲೆಯನ್ನು ಹೆಚ್ಚಿಸಿದೆ, ರೂಪಾಯಿ ಮೌಲ್ಯದ ಕುಸಿತಕ್ಕೆ ಕಾರಣವಾಗಿದೆ, ಚಾಲ್ತಿ ಖಾತೆ ಕೊರತೆಯನ್ನು ಹೆಚ್ಚಿಸಿದೆ. ಇದರಿಂದಾಗಿ ಉದ್ದಿಮೆಗಳ ಸಮಸ್ಯೆಗಳು ಹೆಚ್ಚಾಗಿವೆ.

ಸಮಸ್ಯೆಯ ತೀವ್ರತೆಯನ್ನು ಚೆನ್ನಾಗಿ ಅರಿತುಕೊಳ್ಳುವ ಉದ್ದೇಶದಿಂದ ಇಲಾಖೆಯು ತಳಮಟ್ಟದಲ್ಲಿ ಪ್ರತಿಕ್ರಿಯೆ ಪಡೆಯುವ ಬಯಕೆ ಹೊಂದಿದೆ. ಹೀಗಾಗಿ ಗರಿಷ್ಠ ಐದು ಮಂದಿ ಅಧಿಕಾರಿಗಳ ತಂಡವು ಬೇರೆ ಬೇರೆ ಕೈಗಾರಿಕಾ ಪ್ರದೇಶಗಳಿಗೆ ಭೇಟಿ ನೀಡಲಿದೆ.

ಅಧಿಕಾರಿಗಳ ತಂಡಗಳು ತಯಾರಿಕೆ, ಮೂಲಸೌಕರ್ಯ ಸೇರಿದಂತೆ ವಿವಿಧ ವಲಯಗಳ ಬಗ್ಗೆ ಪರಿಶೀಲನೆ ನಡೆಸಬೇಕಿದೆ. ಪ್ರತಿ ಭೇಟಿಯ ಸಂದರ್ಭ ದಲ್ಲಿ ತಂಡಗಳು ಕನಿಷ್ಠ2 ನವೋದ್ಯಮಗಳ ಜೊತೆ ಸಮಾಲೋಚನೆ ನಡೆಸಬೇಕಿದೆ.

ಮುಂಬೈ ಧಾರಣೆ (ಶೇಂಗಾ)	
28-05-2026	
ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ (ಹೊಸ)	8500-8600
ದಪ್ಪ ಗುಜರಾತ್ (ಹೊಸ)	9400-9500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1640 (1650)
ಒಂದು ವಾರದ ಡೆಲಿವರಿ	1635 (1645)
ಪಾಮ್ ವಾರದ ಡೆಲಿವರಿ	1488 (1488)
ಸೂರ್ಯಕಾಂತಿ ಎಣ್ಣೆ ಕಚ್ಚಾ	1550 (1550)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,55,000 (1,54,900)
ಬೆಳ್ಳಿ ಕೆ.ಜಿಗೆ	2,59,000 (2,60,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹23,000
ಎಸಿ	₹14,000
ಆರ್‌ಪಿ	₹18,300
ಆರ್‌ಸಿ	₹9,775

ಯಾವುದೇ ಗದ್ದಲವಿಲ್ಲದೇ ಸಲೀಸಾಗಿ ಅಧಿಕಾರ ಹಸ್ತಾಂತರಿಸಿದ ಸಿದ್ದರಾಮಯ್ಯ ನಡೆ ರಾಜಕಾರಣಿಗಳಿಗೆ ಮಾದರಿ

ಹೌದು ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಭಾರತ–ಚೀನಾ ಮಾತುಕತೆ

ನವದೆಹಲಿ (ಪಿಟಿಐ): ಪೂರ್ವ ಲಡಾಕ್‌ನ ವಾಸ್ತವ ನಿಯಂತ್ರಣ ರೇಖೆಯ (ಎಲ್‌ಎಸಿ) ಉದ್ದಕ್ಕೂ ಇರುವ ಪರಿಸ್ಥಿತಿಯ ಕುರಿತು ಭಾರತ ಮತ್ತು ಚೀನಾ ಬುಧವಾರ ಮಾತುಕತೆ ನಡೆಸಿವೆ.

ಗಡಿಯಲ್ಲಿ ಶಾಂತಿ ವಾತಾವರಣವನ್ನು ಕಾಪಾಡಿಕೊಳ್ಳುವ ಹಾಗೂ ಒಟ್ಟಾರೆ ಸಂಬಂಧವನ್ನು ಸುಧಾರಿಸುವ ಚರ್ಚೆಗಳು ನಡೆದವು ಎಂದು ಭಾರತದ ವಿದೇಶಾಂಗ ಇಲಾಖೆ ತಿಳಿಸಿದೆ.

ಬೀಜಿಂಗ್‌ನಲ್ಲಿ ಬುಧವಾರ ನಡೆದ 'ಸಮಾಲೋಚನೆ ಮತ್ತು ಸಮನ್ವಯತೆಗಾಗಿ ಕಾರ್ಯನೀತಿ (ಡಬ್ಲ್ಯುಎಂಸಿಸಿ)'ಯ ಸಭೆಯಲ್ಲಿ ಎರಡೂ ದೇಶಗಳ ಪ್ರತಿನಿಧಿಗಳು ಚರ್ಚಿಸಿದರು ಎಂದು ಇಲಾಖೆ ತಿಳಿಸಿದೆ.

ಭಾರತದ ವಿದೇಶಾಂಗ ಇಲಾಖೆ ಜಂಟಿ ಕಾರ್ಯದರ್ಶಿ (ಪೂರ್ವ ಏಷ್ಯಾ) ಸುಜಿತ್ ಘೋಷ್, ಚೀನಾದ ಗಡಿ ಮತ್ತು ಸಾಗರ ವ್ಯವಹಾರಗಳ ಮಹಾ ನಿರ್ದೇಶಕ ಹೋಯು ಯಾಂಕಿ ಮಾತುಕತೆಯ ನೇತೃತ್ವ ವಹಿಸಿದ್ದರು.

'2020ರಲ್ಲಿ ನಡೆದ ಗಾಲ್ವಾನ್ ಕಣಿವೆಯ ಸಂಘರ್ಷದ ನಂತರ ಎರಡೂ ದೇಶಗಳ ನಡುವೆ ಉಂಟಾಗಿದ್ದ ಸಂದಿಗ್ಧ ಸ್ಥಿತಿ ಸುಧಾರಣೆಗೆ ಒಂದು ವರ್ಷದಿಂದ ಸರಣಿ ಪ್ರಯತ್ನಗಳು ನಡೆದಿವೆ. ಗಡಿಯಲ್ಲಿ ಶಾಂತಿ ಕಾಪಾಡುವ ನಿಟ್ಟಿನಲ್ಲಿ ಆಗಿರುವ ಪ್ರಗತಿಗೆ ಚೀನಾ ತೃಪ್ತಿ ವ್ಯಕ್ತಪಡಿಸಿದೆ' ಎಂದು ಇಲಾಖೆ ತಿಳಿಸಿದೆ.

ಚೀನಾದಲ್ಲಿ ನಡೆಯಲಿರುವ ವಿಶೇಷ ಪ್ರತಿನಿಧಿಗಳ ಸಭೆಯ (ಎಸ್‌ಆರ್) ತಯಾರಿಯನ್ನು ಜಂಟಿಯಾಗಿ ನಡೆಸಲು ಎರಡೂ ರಾಷ್ಟ್ರಗಳು ಒಪ್ಪಿದವು. ರಾಜತಾಂತ್ರಿಕ ಮತ್ತು ಸೇನಾ ಮಟ್ಟದ ನಿಯಂತ್ರಿತ ಕಾರ್ಯತಂತ್ರ ವಿನಿಮಯಕ್ಕೂ ನಿರ್ಧರಿಸಲಾಯಿತು' ಎಂದು ಇಲಾಖೆ ತಿಳಿಸಿದೆ.

ಲೆಬನಾನ್ ಮೇಲೆ ಇಸ್ರೇಲ್ ದಾಳಿ: 14 ಸಾವು

ಬೈರೂತ್ (ಎಪಿ): ದಕ್ಷಿಣ ಲೆಬನಾನ್‌ನ ವಿವಿಧ ಪ್ರದೇಶಗಳ ಮೇಲೆ ಇಸ್ರೇಲ್ ಪಡೆಗಳು ಗುರುವಾರ ತೀವ್ರ ದಾಳಿ ನಡೆಸಿವೆ. ಘಟನೆಯಲ್ಲಿ 14 ಮಂದಿ ಮೃತಪಟ್ಟಿದ್ದಾರೆ.

ಲೆಬನಾನ್ ಮತ್ತು ಇಸ್ರೇಲ್ ನಡುವಿನ ಸಂಘರ್ಷವನ್ನು ಶಮನಗೊಳಿಸುವ ನಿಟ್ಟಿನಲ್ಲಿ ಉಭಯ ರಾಷ್ಟ್ರಗಳ ಸೇನಾಧಿಕಾರಿಗಳು ಶುಕ್ರವಾರ ವಾಷಿಂಗ್ಟನ್‌ನಲ್ಲಿ ಮಾತುಕತೆ ನಡೆಸಲಿದ್ದಾರೆ. ಈ ನಡುವೆಯೇ ದಾಳಿ ತೀವ್ರಗೊಂಡಿರುವುದು ಆತಂಕ ಹೆಚ್ಚಿಸಿದೆ.

ದಾಳಿಯಲ್ಲಿ ಮೃತರಾಗಿರುವವರ ಪೈಕಿ ಐವರು ಮಹಿಳೆಯರು, ಮಕ್ಕಳು ಮತ್ತು ಒಬ್ಬ ಲೆಬನಾನ್ ಸೈನಿಕ ಸೇರಿದ್ದಾರೆ. 12ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ ಎಂದೂ ಲೆಬನಾನ್ ಮಾಧ್ಯಮಗಳು ವರದಿ ಮಾಡಿವೆ.

ಇತ್ತ ಉತ್ತರ ಗಾಜಾದ ಮೇಲೆ ಹೆಜ್ಬುಲ್ಲಾ ಉಗ್ರರು ನಡೆಸಿದ ಡ್ರೋನ್ ದಾಳಿಯಿಂದ ಒಬ್ಬ ಇಸ್ರೇಲಿ ಸೈನಿಕ ಮೃತಪಟ್ಟಿದ್ದಾರೆಂದು ಇಸ್ರೇಲಿ ಮಿಲಿಟರಿ ಮಾಹಿತಿ ನೀಡಿದೆ.

ಬಿಎಸ್‌ಎಫ್‌ಗೆ 142.79 ಎಕರೆ ಭೂಮಿ ಹಸ್ತಾಂತರ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ಸರ್ಕಾರವು 142.9 ಎಕರೆ ಭೂ ಪ್ರದೇಶವನ್ನು ಗಡಿ ಭದ್ರತಾ ಪಡೆಗೆ (ಬಿಎಸ್‌ಎಫ್) ಹಸ್ತಾಂತರಿಸಿದೆ ಎಂದು ಮುಖ್ಯಮಂತ್ರಿ ಸುವೇಂದು ಅಧಿಕಾರಿ ತಿಳಿಸಿದ್ದಾರೆ.

ಸುವೇಂದು ಅಧಿಕಾರಿ

ಭಾರತ-ಬಾಂಗ್ಲಾದೇಶದ ಗಡಿಯುಲ್ಲಿ ಮುಳ್ಳುತಂತಿಯ ಬೇಲಿಗಳನ್ನು ನಿರ್ಮಿಸಲು ಹಾಗೂ ಹೊರ ಠಾಣೆಗಳನ್ನು ಸ್ಥಾಪಿಸುವುದಕ್ಕಾಗಿ ಈ ಭೂಮಿಯನ್ನು ನೀಡಲಾಗಿದೆ.

ಗಡಿಯಲ್ಲಿ ಬೇಲಿಗಳ ನಿರ್ಮಾಣ ಹಾಗೂ ಮೂಲಸೌಕರ್ಯಗಳಿಗಾಗಿ ಒಟ್ಟು 600 ಎಕರೆ ಭೂಮಿಯನ್ನು ಮುಂದಿನ 45 ದಿನಗಳ ಒಳಗೆ ಹಸ್ತಾಂತರಿಸಲಾಗುವುದು ಎಂದು ಮೇ 11ರಂದು ಸುವೇಂದು ನೇತೃತ್ವದಲ್ಲಿ ನಡೆದಿದ್ದ ಸರ್ಕಾರದ ಮೊದಲ ಸಂಪುಟ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿತ್ತು. ಅದರ ಭಾಗವಾಗಿ ಇದೀಗ 142.9 ಎಕರೆ ಭೂಮಿ ಹಸ್ತಾಂತರಿಸಲಾಗಿದೆ.

ಗಡಿ ಭದ್ರತೆ ಬಲಪಡಿಸುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದೂ ಸುವೇಂದು ತಿಳಿಸಿದ್ದಾರೆ.

ಇನ್ನೂ 60 ದಿನ ಕದನ ವಿರಾಮ?

ದುಬೈ (ಎಪಿ/ಎಎಫ್‌ಪಿ): ಅಮೆರಿಕ ಮತ್ತು ಇರಾನ್ ನಡುವಿನ ಕದನ ವಿರಾಮವನ್ನು 60 ದಿನಗಳವರೆಗೆ ವಿಸ್ತರಿಸುವ ಮತ್ತು ಇರಾನ್‌ನ ಪರಮಾಣು ಕಾರ್ಯಕ್ರಮ ಸಂಬಂಧ ಮಾತುಕತೆಗಳನ್ನು ಪ್ರಾರಂಭಿಸುವ ಕುರಿತು ಉಭಯ ದೇಶಗಳು ತಾತ್ಕಾಲಿಕ ಒಪ್ಪಂದಕ್ಕೆ ಬಂದಿವೆ ಎಂದು ಅಮೆರಿಕದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಕುರಿತ ಒಪ್ಪಂದಕ್ಕೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇನ್ನೂ ಸಹಿ ಹಾಕಿಲ್ಲ, ಅದನ್ನು ಪರಿಶೀಲಿಸುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ.

ಅಮೆರಿಕದ ಜತೆಗಿನ ತಾತ್ಕಾಲಿಕ ಒಪ್ಪಂದದ ಮಾಹಿತಿಯನ್ನು ಇರಾನ್ ತಕ್ಷಣಕ್ಕೆ ದೃಢಪಡಿಸಿಲ್ಲ. ಈ ಒಪ್ಪಂದದ ವಿವರಗಳನ್ನು 'ಆಕ್ಸಿಯೋಸ್' ಸುದ್ದಿ ಸಂಸ್ಥೆ ಮೊದಲಿಗೆ ವರದಿ ಮಾಡಿದೆ.

ವಾಷಿಂಗ್ಟನ್ ಮತ್ತು ಟೆಹರಾನ್ ಪರಸ್ಪರರ ವಿರುದ್ಧ ಪದೇ ಪದೇ ಕದನ ವಿರಾಮ ಉಲ್ಲಂಘಿಸಿದ ಆರೋಪಗಳನ್ನು ಮಾಡಿವೆ. ಇದರ ನಡುವೆಯೇ ಉಭಯ ದೇಶಗಳ ಸಮಾಲೋಚಕರು ಈ ತಾತ್ಕಾಲಿಕ ಒಪ್ಪಂದಕ್ಕೆ ಬಂದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ಒಪ್ಪಂದದ ಕರಡಿಗೆ ಎರಡೂ ದೇಶಗಳು ಬಹುತೇಕ ಒಪ್ಪಿಕೊಂಡಿವೆ. ಆದರೆ ಅನುಮೋದನೆ ಬಾಕಿಯಿದೆ ಎಂದು ಗೊತ್ತಾಗಿದೆ.

ಈ ಒಪ್ಪಂದಕ್ಕೆ ತಕ್ಷಣ ಸಹಿ ಹಾಕದ ಟ್ರಂಪ್, ಯೋಚಿಸಲು ಒಂದೆರಡು ದಿನಗಳ ಕಾಲಾವಕಾಶ ಬೇಕಾಗುತ್ತದೆ ಎಂದು ಅಧಿಕಾರಿಗಳ ಬಳಿ ಹೇಳಿದ್ದಾರೆ ಎಂದು ಮೂಲಗಳನ್ನು ಉಲ್ಲೇಖಿಸಿ 'ಆಕ್ಸಿಯೋಸ್' ವರದಿ ಮಾಡಿದೆ.

ಒಪ್ಪಂದದಲ್ಲಿ ಏನಿದೆ: ಒಪ್ಪಂದವು 60 ದಿನಗಳ ಕದನ ವಿರಾಮದ ಜತೆಗೆ ಹೊರ್ಮುಜ್ ಜಲಸಂಧಿಯಲ್ಲಿ ಮುಕ್ತ ಸಾಗಣೆಯ ಅಂಶವನ್ನು ಒಳಗೊಂಡಿದೆ. ಜಲಸಂಧಿಯಲ್ಲಿ ಸಾಗುವ ಹಡಗುಗಳಿಗೆ ಸುಂಕ ವಿಧಿಸದೇ, ಕಿರುಕುಳ ನೀಡದೆ ಸಾಗಲು ಇರಾನ್ ಅವಕಾಶ ಮಾಡಿಕೊಡಬೇಕು. ಅಲ್ಲದೆ, ಜಲಸಂಧಿಯಲ್ಲಿ ಅಡಗಿಸಿಟ್ಟಿರುವ ಸ್ಫೋಟಕಗಳನ್ನು 30 ದಿನಗಳಲ್ಲಿ ತೆರವುಗೊಳಿಸಬೇಕು ಎಂಬ ಅಂಶಗಳು ಪ್ರಮುಖವಾಗಿವೆ ಎಂದು ಮೂಲಗಳು ಹೇಳಿವೆ.

ಇದಕ್ಕೆ ಪ್ರತಿಯಾಗಿ ಅಮೆರಿಕವು ಇರಾನ್ ಮೇಲಿನ ನೌಕಾ ದಿಗ್ಬಂಧನ ತೆರವುಗೊಳಿಸುತ್ತದೆ. ಅಲ್ಲದೆ ಇರಾನ್‌ನ ತೈಲವನ್ನು ಮುಕ್ತವಾಗಿ ಮಾರಾಟ ಮಾಡಲು ಸಾಧ್ಯವಾಗುವಂತೆ ಕೆಲ ನಿರ್ಬಂಧಗಳನ್ನು ತೆಗೆದು, ವಿನಾಯಿತಿ ನೀಡಲು ಸಿದ್ಧವಾಗಿದೆ ಎನ್ನಲಾಗಿದೆ.

ಇರಾನ್‌ನಲ್ಲಿರುವ ಸಮೃದ್ಧೀಕರಿಸಿದ ಯುರೇನಿಯಂ ಅನ್ನು ಹೇಗೆ ವಿಲೇವಾರಿ ಮಾಡಬಹುದು ಎಂಬುದರ ಕುರಿತು ಎರಡೂ ದೇಶಗಳು ಚರ್ಚೆ ನಡೆಸಲಿವೆ ಎಂದು ಮೂಲಗಳು ಹೇಳಿವೆ.

ಕುಡಿಯುವ ನೀರಿನ ಸಮಸ್ಯೆ

ಪಿಟಿಐ ಚಿತ್ರ:

ಮಧ್ಯಪ್ರದೇಶದ ಉಮರಿಯಾ ಜಿಲ್ಲೆಯ ಹಳ್ಳಿಯೊಂದರಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗಿದ್ದು, ಮಹಿಳೆಯರು ಕೊಡಪಾನ, ಡ್ರಮ್‌ಗಳಲ್ಲಿ ನೀರನ್ನು ಹೊತ್ತು ಸಾಗಿದರು

'ಸಹಕಾರದ ಮೂಲಕ ಜಲವಿವಾದ ಪರಿಹರಿಸಿಕೊಳ್ಳಿ'

ನವದೆಹಲಿ (ಪಿಟಿಐ): ಪರಸ್ಪರ ಸಹಕಾರ, ಸಕಾಲಿಕ ಅನುಮತಿ ಮತ್ತು ತಂತ್ರಜ್ಞಾನ ಆಧಾರಿತ ಮೇಲ್ವಿಚಾರಣೆಯ ಮೂಲಕ ರಾಜ್ಯಗಳು ತಮ್ಮ ನಡುವಿನ ಜಲ ವಿವಾದವನ್ನು ಬಗೆಹರಿಸಿಕೊಳ್ಳಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಕರೆ ನೀಡಿದರು.

'ಕೆನ್-ಬೆಟ್ವಾ ಯೋಜನೆಯು ಇತರ ರಾಜ್ಯಗಳಿಗೆ ಮಾದರಿಯಾಗಬೇಕು' ಎಂದೂ ಮೋದಿ ಅವರು ಹೇಳಿದರು.

51ನೇ ಪ್ರಗತಿ ಸಭೆಯಲ್ಲಿ ಭಾಗಿಯಾದ ಅವರು ಒಂಬತ್ತು ರಾಜ್ಯಗಳಿಗೆ ಸಂಬಂಧಿಸಿದ ರಸ್ತೆ, ರೈಲ್ವೆ ಮತ್ತು ಇಂಧನ ವಲಯಗಳನ್ನೊಳಗೊಂಡ ₹30 ಸಾವಿರ ಕೋಟಿ ವೆಚ್ಚದ ಏಳು ಪ್ರಮುಖ ಮೂಲಸೌಕರ್ಯ ಯೋಜನೆಗಳ ಪ್ರಗತಿ ಪರಿಶೀಲನೆಯನ್ನು ಬುಧವಾರ ಮಾಡಿದರು.

ಈ ವೇಳೆ ಮಾತನಾಡಿದ ಅವರು, 'ಸಾರ್ವಜನಿಕ ಯೋಜನೆಗಳ ಅನುಷ್ಠಾನ ವಿಳಂಬಗೊಳ್ಳುವುದರಿಂದ ಹಣಕಾಸು ವೆಚ್ಚವಾಗುವುದು ಮಾತ್ರವಲ್ಲದೇ, ನಾಗರಿಕರು ಅಗತ್ಯ ಸೌಲಭ್ಯಗಳನ್ನು ಸಕಾಲಕ್ಕೆ ಪಡೆಯುವುದರಿಂದ ವಂಚಿತರಾಗುತ್ತಾರೆ' ಎಂದು ಹೇಳಿದರು.

'ಸ್ವಚ್ಛ ಭಾರತ ಅಭಿಯಾನ-ನಗರ 2.0' ಬಗ್ಗೆಯೂ ಪರಿಶೀಲನೆ ನಡೆಸಿದರು.

ಇರಾನ್, ಅಮೆರಿಕ ದಾಳಿ – ಪ್ರತಿದಾಳಿ

ಒಂದನೇ ಪುಟದಿಂದ...

'ಜಲಸಂಧಿಯಲ್ಲಿದ್ದ ವಾಣಿಜ್ಯ ಹಡುಗಳು ಮತ್ತು ನಮ್ಮ ಪಡೆಗಳ ಮೇಲೆ ಇರಾನ್‌ನ ಡ್ರೋನ್‌ಗಳು ದಾಳಿ ನಡೆಸಿದವು. ಇರಾನ್‌ನ ನಾಲ್ಕು ಡ್ರೋನ್‌ಗಳನ್ನು ಹೊಡೆದುರುಳಿಸಿದೆವು. ಐದನೇ ಡ್ರೋನ್ ಹಾರಲು ಅಣಿಯಾಗಿತ್ತಷ್ಟೇ, ಆಗಲೇ ಅದನ್ನು ಹೊಡೆದೆವು. ಇವುಗಳನ್ನು ಬಂದರ್ ಅಬ್ಬಾಸ್ ನಗರದಲ್ಲಿರುವ ಕೇಂದ್ರ ವೊಂದರಿಂದ ಹಾರಿಸಲಾಗುತ್ತಿತ್ತು. ಆ ಕೇಂದ್ರದ ಮೇಲೆಯೇ ದಾಳಿ ನಡೆಸಿದ್ದೇವೆ' ಎಂದು ಅಮೆರಿಕದ ಅಧಿಕಾರಿಗಳು ತಿಳಿಸಿದ್ದಾರೆ.

'ಬಂದರ್ ಅಬ್ಬಾಸ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ಅಮೆರಿಕ ದಾಳಿ ನಡೆಸಿದೆ. ಇದಕ್ಕೆ ಉತ್ತರವಾಗಿ ನಾವು ಕುವೈತ್‌ನಲ್ಲಿರುವ ಅಮೆರಿಕದ ನೆಲೆಗಳ ಮೇಲೆ ಗುರುವಾರ ಬೆಳಿಗಿನ ಜಾವ ದಾಳಿ ನಡೆಸಿದ್ದೇವೆ' ಎಂದು ಇರಾನ್ ಹೇಳಿದೆ.

ಆದರೆ, ಕುವೈತ್‌ನ ಯಾವ ಪ್ರದೇಶದ ಮೇಲೆ ದಾಳಿ ನಡೆಸಲಾಗಿದೆ ಎಂಬ ಮಾಹಿತಿಯನ್ನು ಇರಾನ್ ಹೇಳಿಲ್ಲ. 'ನಮ್ಮ ವಾಯು ಪ್ರದೇಶದೊಳಗೆ ಬಂದಿದ್ದ ಡ್ರೋನ್ ಹಾಗೂ ಕ್ಷಿಪಣಿಗಳನ್ನು ಯಶಸ್ವಿಯಾಗಿ ಹೊಡೆದುರುಳಿಸಿದ್ದೇವೆ' ಎಂದು ಕುವೈತ್ ಸೇನೆ ಹೇಳಿದೆ. ಇರಾನ್ ಯಾವ ಪ್ರದೇಶದ ಮೇಲೆ ದಾಳಿ ನಡೆಸಿದೆ ಎಂದು ಕುವೈತ್ ಕೂಡ ಮಾಹಿತಿಯನ್ನು ಬಹಿರಂಗ ಮಾಡಿಲ್ಲ.

ದಾಳಿ ಖಂಡಿಸುತ್ತೇವೆ

ರಾಷ್ಟ್ರೀಯ ಸಾರ್ವಭೌಮತ್ವ ರಕ್ಷಿಸಿಕೊಳ್ಳಲು ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗಿದೆ. ನಮ್ಮ ನಗರದ ಮೇಲೆ ದಾಳಿ ನಡೆಸಿದ್ದು ಖಂಡನೀಯ ಮತ್ತು ಇದು ಕದನ ವಿರಾಮದ ಉಲ್ಲಂಘನೆ. ಭಯ ಹುಟ್ಟಿಸಲು ಅಮೆರಿಕವು ಇಂಥ ದಾಳಿಗಳನ್ನು ನಡೆಸುತ್ತದೆ

ಇಸ್ಮಾಯಿಲ್ ಬಕಾಯ್, ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ

'ಒಪ್ಪಂದ: ನನಗೆ ಆತುರ ಇಲ್ಲ'

ನವೆಂಬರ್‌ನಲ್ಲಿ ಮಧ್ಯಂತರ ಚುನಾವಣೆ ಇದೆ ಎನ್ನುವ ಕಾರಣಕ್ಕೆ ಇರಾನ್‌ನೊಂದಿಗಿನ ಯುದ್ಧವನ್ನು ನಿಲ್ಲಿಸುವ ಆತುರ ನನಗಿಲ್ಲ. ಇದಕ್ಕಾಗಿ ನಾನು ಆತುರವಾಗಿ ಇರಾನ್‌ನೊಂದಿಗೆ ಒಪ್ಪಂದ ಮಾಡಿಕೊಳ್ಳು-ವುದಿಲ್ಲ. ವಾರಾಂತ್ಯದಲ್ಲಿ ಒಪ್ಪಂದ ಬಹುತೇಕ ಅಂತಿಮವಾಗಲಿದೆ

ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ (ಸಂಪುಟ ಸಭೆಯಲ್ಲಿ ಆಡಿತ ಮಾತು)

ಮೃಗಾಲಯಕ್ಕೆ ಸ್ಥಳಾಂತರಿಸಿದ ಅಧಿಕಾರಿಗಳು

ಬಕ್ರೀದ್ ಬಲಿ: 'ಟ್ರಂಪ್ ಎಮ್ಮೆ' ರಕ್ಷಣೆ

ಢಾಕಾ (ಪಿಟಿಐ): ಬಾಂಗ್ಲಾದೇಶದಲ್ಲಿ ಬಕ್ರೀದ್ ಹಬ್ಬದಂದು ಬಲಿಗೆ ಸಿದ್ಧವಾಗಿದ್ದ 'ಡೊನಾಲ್ಡ್ ಟ್ರಂಪ್' ಹೆಸರಿನ ಅಲ್ಬಿನೊ ಎಮ್ಮೆಯನ್ನು ರಕ್ಷಿಸಿರುವ ಇಲ್ಲಿನ ಅಧಿಕಾರಿಗಳು ರಾಜಧಾನಿಯಲ್ಲಿರುವ ಮೃಗಾಲಯಕ್ಕೆ ಸ್ಥಳಾಂತರಿಸಿದ್ದಾರೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕೇಶವಿನ್ಯಾಸವನ್ನೇ ಹೋಲುತ್ತಿದ್ದ ಕಾರಣ ಈ ಎಮ್ಮೆಯ ಚಿತ್ರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿ, ಚರ್ಚೆಗೆ ಕಾರಣವಾಗಿತ್ತು.

ಬಕ್ರೀದ್ ಹಬ್ಬದಂದು ಬಲಿಗೆ ಸಿದ್ಧಗೊಂಡ ಕೆಲ ಗಂಟೆಗಳ ಮುಂಚಿತವಾಗಿ, ಸರ್ಕಾರದ ನಿರ್ದೇಶನದಂತೆ 700 ಕೆ.ಜಿ ತೂಕ ಹೊಂದಿರುವ ಎಮ್ಮೆಯನ್ನು ಅಧಿಕಾರಿಗಳು ತಮ್ಮ ವಶಕ್ಕೆ ಪಡೆದುಕೊಂಡರು.

'ಸಂರಕ್ಷಣೆ ಮಾಡುವ ಉದ್ದೇಶದಿಂದ ಎಮ್ಮೆಯನ್ನು ಸರ್ಕಾರವು ವಶಕ್ಕೆ ಪಡೆಯಲು ನಿರ್ಧರಿಸಿದೆ ಎಂದು ಪೊಲೀಸ್ ಅಧಿಕಾರಿಗಳು ಬಂದು ತಿಳಿಸಿದರು. ಸರ್ಕಾರದ ಜೊತೆಗೆ ಯಾವುದೇ ಸಂಘರ್ಷ ಮಾಡಲು ಬಯಸದೇ, ಎಮ್ಮೆಯನ್ನು ಅವರಿಗೆ ಹಸ್ತಾಂತರಿಸಿದೆವು' ಎಂದು ಎಮ್ಮೆಯ ಮಾಲೀಕ ಮೊನಿರುಜ್ ಜಮಾನ್ ತಿಳಿಸಿದರು.

ಡೊನಾಲ್ಡ್ ಟ್ರಂಪ್ ಅವರ ಕೇಶ ವಿನ್ಯಾಸವನ್ನೇ ಹೋಲುವ ಎಮ್ಮೆಯನ್ನು ಬಾಂಗ್ಲಾದೇಶದ ಅಧಿಕಾರಿಗಳು ಗುರುವಾರ ಢಾಕಾದ ಮೃಗಾಲಯಕ್ಕೆ ಸ್ಥಳಾಂತರಿಸಿದರು —ಎಎಫ್‌ಪಿ ಚಿತ್ರ

'ಸರ್ಕಾರವು ಎಮ್ಮೆಯ ಬದಲಿಗೆ ಪರಿಹಾರ ಅಥವಾ ಬೇರೆ ಎಮ್ಮೆಯನ್ನು ನೀಡುವುದಾಗಿ ಅಧಿಕಾರಿಗಳು ಭರವಸೆ ನೀಡಿದ್ದಾರೆ. ಬಕ್ರೀದ್‌ಗೆ ಬಲಿ ನೀಡುವ ಉದ್ದೇಶದಿಂದ ಢಾಕಾ ಹೊರವಲಯದಲ್ಲಿರುವ ಕೆರನಿಗಂಜ್‌ನಲ್ಲಿ ಖರೀದಿಸಿದ್ದೆ' ಎಂದಿದ್ದಾರೆ.

'ಎಮ್ಮೆಯು ಸಣ್ಣ ವಯಸ್ಸಿನದಾಗಿದ್ದು, ಮೃಗಾಲಯದಲ್ಲಿಟ್ಟು ಇನ್ನಷ್ಟು ವರ್ಷ ಸಾಕಲು ಅಧಿಕಾರಿಗಳು ನಿರ್ಧರಿಸಿದ್ದಾರೆ' ಎಂದು ಕೆರನಿಗಂಜ್‌ನ ಠಾಣಾಧಿಕಾರಿ ರುಹುಲ್ ಖುದ್ದೂಸ್ ತಿಳಿಸಿದ್ದಾರೆ.

'ಮೃಗಾಲಯದಲ್ಲಿ ಎಮ್ಮೆಯನ್ನು ಪ್ರತ್ಯೇಕವಾಗಿಡಲಾಗಿದ್ದು, ಅದರ ನಿರ್ವಹಣೆಗಾಗಿಯೇ ಪ್ರತ್ಯೇಕ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ' ಎಂದು ಮೃಗಾಲಯದ ಮೇಲ್ವಿಚಾರಕ ಅತಿಕರ್ ರೆಹಮಾನ್ ತಿಳಿಸಿದ್ದಾರೆ.

ಟ್ರಂಪ್ ಅವರಂತೆ ಕೆಂಬಣ್ಣದ ಉದ್ದನೆಯ ಕೂದಲು, ಗುಲಾಬಿ ಬಣ್ಣದ ಮೂಗು ಹೊಂದಿದ್ದ ಕಾರಣ ಈ ಎಮ್ಮೆಯು ಹೆಚ್ಚು ಗಮನಸೆಳೆದಿತ್ತು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

PUBLIC NOTICE

PUBLIC NOTICE

This is to inform the general public that my client intends to purchase the immovable property mentioned and described in the schedule below from its owners **(i) Sri. P. Lakshminarayana** and **(ii) Sri. P. Venkatesh,** both sons of Late Puttappa, (hereafter collectively referred to as "Owners"). The Owners represent that the Schedule Property is free from any encumbrance, mortgage, charge, lien or litigation and they have not entered any sort of Agreement/MOU/Deeds etc., for transfer of the Schedule Property. Any person/s having any objection, claim, right, title and/or interest with respect to the Schedule Property or any part or portion thereof by way of sale, conveyance, acquisition, partition, transfer, memorandum of understanding, exchange, mortgage, pledge, charge, encumbrance, inheritance, succession, lease, easement or demand or objections or claims of any nature whatsoever for the proposed transaction shall lodge their claim(s)/objection(s)/demand(s) with the undersigned supported by documentary evidence **within Fifteen (15) days** from the date of publication of this Notice failing which, my client shall proceed with the above-mentioned transaction as though there are no claim(s)/objection(s)/demand(s) to the proposed transaction.

SCHEDULE

All the piece and parcel of the immovable property bearing Survey No. 129/5, measuring 28 guntas, situated at Kadugodi Village, Bidarahalli Hobli, Bengaluru East Taluk, Bengaluru Urban District and bounded on the:

East by : Land bearing Survey No.128;
West by : Naala/Kaluve;
North by : Land bearing Survey No.127; and
South by : Land bearing Survey Nos.129/1 and 129/6.

Vinay K. S., Advocate,
Vinay Kademane & Associates
307, 3rd Floor, Prestige Centre Point, No.7/49, Edward Road, Bengaluru-560001
Ph.: 080 22863885 / 49763233
email: vinay@vinaykademane.in

Place : Bengaluru
Date : 29-05-2026

ಉದ್ಯೋಗಾವಕಾಶ

Teachers/ Professors

REQUIRED TEACHERS

For NGO-supported School Programme in Bengaluru.

Qualified teachers required for English and Mathematics (Classes I–VII).

Must know Kannada & English. Retired teachers welcome. Competitive remuneration.

Send CV to: seniorcitizensbangalore@gmail.com

www.seniorsforchange.org

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 7795874991

Part-Time Jobs

ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ, ಪುರುಷರಿಗೆ ಮೊದಲ ಆದ್ಯತೆ. 19,000 -25,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 7090177446

ಸೌಂದರ್ಯ-ಆರೋಗ್ಯ

Health Clinic

ವೆರಿಕೋಸ್ ವೇನ್ಸ್/ಅಲ್ಸರ್ ತೊಂದರೆಯೇ? ಮಂಡಿನೋವಿನ ಸಮಸ್ಯೆಯೇ? ಸೋರಿಯಾಸಿಸ್‌ಯಿಂದ ಬಳಲುತ್ತಿದ್ದಿರಾ? ಯಾವುದೇ ವಿಧವಾದ ಔಷದಿ ಸೇವನೆ ಮತ್ತು ಆಪರೇಷನ್ ಇಲ್ಲದೆ ನುರಿತ ತಜ್ಞರಿಂದ ಸಂಶೋದಿಸಿದ ಔಷದದಿಂದ ಪರಿಣಾಮಕಾರಿ ಚಿಕಿತ್ಸೆ. ವಿಜಯ ಆಯುರ್ ಕ್ಲಿನಿಕ್, ರಾಜಾಜಿನಗರ, ಬೆಂಗಳೂರು: 8861137033

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

₹34 ಕೋಟಿ 'ಬ್ಲಡ್ ಮನಿ' ಸಂಗ್ರಹ: ರಹೀಂ ಬಿಡುಗಡೆಗೆ ಮಿಡಿದ ಕೇರಳಂ

ಕೋಯಿಕ್ಕೋಡ್: ಸೌದಿ ಅರೇಬಿಯಾದಲ್ಲಿ ಗಲ್ಲು ಶಿಕ್ಷೆ ವಿಧಿಸಲ್ಪಟ್ಟು ಗುರಿಯಾಗಿ, ಎರಡು ದಶಕ ಜೈಲು ಶಿಕ್ಷೆ ಅನುಭವಿಸಿದ ಅಬ್ದುಲ್ ರಹೀಂ, ಮಾಡಿದ ತಪ್ಪನ್ನು ಕ್ಷಮಿಸುವುದಕ್ಕಾಗಿ ಸಂತ್ರಸ್ತರ ಕುಟುಂಬದವರಿಗೆ ಪರಿಹಾರದ ರೂಪದಲ್ಲಿ ₹34 ಕೋಟಿ 'ಬ್ಲಡ್ ಮನಿ' ಪಾವತಿಸುವ ಮೂಲಕ, ಬಿಡುಗಡೆಯಾಗಿ ಕೇರಳಕ್ಕೆ ಮರಳಿದ್ದಾರೆ.

ಅಬ್ದುಲ್ ರಹೀಂ ಪಾವತಿಸಬೇಕಿದ್ದ 'ಬ್ಲಡ್ ಮನಿ'ಯನ್ನು (ಕ್ಷಮೆಗಾಗಿ ಪರಿಹಾರ), ಅವರ ತವರು ಜಿಲ್ಲೆಯಾದ ಕೇರಳಂನ ಕೋಯಿಕ್ಕೋಡ್‌ನ ಜನರು 'ಕ್ರೌಡ್ ಫಂಡಿಂಗ್' ಮೂಲಕ ಸಂಗ್ರಹಿಸಿ, ಪಾವತಿಸಿದ್ದಾರೆ. ಇದು ಕೇರಳಂನಲ್ಲಿ ಕ್ರೌಡ್ ಫಂಡಿಂಗ್ ಮೂಲಕ ಸಂಗ್ರಹವಾದ ಗರಿಷ್ಠ ಮೊತ್ತವಾಗಿದೆ.

ಗುರುವಾರ ಕೇರಳಂಗೆ ಬಂದಿಳಿದ ಅವರನ್ನು ಇಲ್ಲಿನ ಕರಿಪುರ ವಿಮಾನ ನಿಲ್ದಾಣದಲ್ಲಿ ಕುಟುಂಬ ಸದಸ್ಯರು, ಬಂಧುಗಳು ಆತ್ಮೀಯವಾಗಿ ಸ್ವಾಗತಿಸಿದರು.ವಿಮಾನ ನಿಲ್ದಾಣದಲ್ಲಿ ಉದ್ಯಮಿ ಬಾಬಿ ಚೆಮ್ಮನ್ನೂರ್ ಅವರು ಅಬ್ದುಲ್ ರಹೀಂ ಅವರನ್ನು ಆಲಂಗಿಸಿಕೊಂಡು ಹೊರಗೆ ಕರೆದುಕೊಂಡು ಬಂದರು. 'ನನಗೆ ಸಹಾಯ ಮಾಡಿದ ಎಲ್ಲರಿಗೂ ನಾನು ಕೃತಜ್ಞತನಾಗಿದ್ದೇನೆ' ಎಂದುರಹೀಂ ಗದ್ಗದಿತರಾಗಿನುಡಿದರು.

ಎರಡು ದಶಕಗಳ ಬಳಿಕ, ಬಕ್ರೀದ್ ಹಬ್ಬದ ದಿನದಂದೇ ಮನೆಗೆ ಮರಳಿದ ಮಗನನ್ನು ಕಂಡು ತಾಯಿ ಫಾತಿಮಾ ಬಿಗಿದಪ್ಪಿಕೊಂಡು ಆನಂದಭಾಷ್ಪ ಸುರಿಸಿದರು. ಕೋಯಿಕ್ಕೋಡ್‌ನಲ್ಲಿರುವ ಅಬ್ದುಲ್ ರಹೀಂ ಅವರ ನಿವಾಸವು ಭಾವುಕ ಕ್ಷಣಗಳಿಗೆ ಸಾಕ್ಷಿಯಾಯಿತು. ಅವರ ಸ್ನೇಹಿತರು ಮತ್ತು ಸ್ಥಳೀಯರು ಅವರನ್ನು ಸ್ವಾಗತಿಸಲು ಸೇರಿದ್ದರು. ಎಲ್ಲರನ್ನು ನೋಡುತ್ತಿದ್ದಂತೆ ಅಬ್ದುಲ್ ರಹೀಂ ಅವರು ಕಣ್ಣಾಲಿಗಳು ತುಂಬಿಬಂದವು.



ಸೌದಿ ಅರೇಬಿಯಾದ ಜೈಲಿನಿಂದ ಬಿಡುಗಡೆಯಾಗಿ ಕೋಯಿಕ್ಕೋಡ್‌ನಲ್ಲಿರುವ ಮನೆಗೆ ಮರಳಿದ ಅಬ್ದುಲ್ ರಹೀಂ ಅವರನ್ನು ಕುಟುಂಬ ಸದಸ್ಯರು, ಸ್ನೇಹಿತರು ಆತ್ಮೀಯವಾಗಿ ಬರಮಾಡಿಕೊಂಡರು – ಪಿಟಿಐ ಚಿತ್ರ

ಕ್ರೌಡ್ ಫಂಡಿಂಗ್: ಕೈಜೋಡಿಸಿದ ಜನರು

20 ವರ್ಷದ ಅಬ್ದುಲ್ ರಹೀಂ 2006ರಲ್ಲಿ ಉದ್ಯೋಗಕ್ಕಾಗಿ ಸೌದಿ ಅರೇಬಿಯಾಕ್ಕೆ ಹೋಗಿದ್ದರು. ಅಲ್ಲಿನ ಕುಟುಂಬವೊಂದರ ಕಾರು ಚಾಲಕರಾಗಿ ಅವರು ಕೆಲಸ ಮಾಡುತ್ತಿದ್ದರು. ಒಮ್ಮೆ ಈ ಕುಟುಂಬದ ವಿಶೇಷ ಸಾಮರ್ಥ್ಯ ಹೊಂದಿರುವ ಬಾಲಕನೊಬ್ಬ ರಹೀಂ ಜತೆಗೆ ಜಗಳವಾಡಿದ. ಈ ಸಂದರ್ಭದಲ್ಲಿ ಬಾಲಕನ ದೇಹದಲ್ಲಿ ಉಸಿರಾಟದ ಬೆಂಬಲಕ್ಕಾಗಿ ಅಳವಡಿಸಿದ್ದ ಉಪಕರಣ ಕಳಚಿ ಬಿತ್ತು. ರಹೀಂ ಇದನ್ನು ಗಮನಿಸಿರಲಿಲ್ಲ. ಸ್ವಲ್ಪದರಲ್ಲೇ ಬಾಲಕ ಮೃತಪಟ್ಟ.

ಆಕಸ್ಮಿಕವಾಗಿ ಸಂಭವಿಸಿದ ಈ ಘಟನೆಯಿಂದ ರಹೀಂ ಕೊಲೆ ಪ್ರಕರಣದ ಆರೋಪಿಯಾಗಿ ಜೈಲು ಸೇರಬೇಕಾಯಿತು. ಮೃತ ಬಾಲಕನ ಕುಟುಂಬವು 'ಕ್ಷಮಾದಾನ'ಕ್ಕೆ ಒಪ್ಪದ ಕಾರಣ, 2018ರಲ್ಲಿ ಅವರಿಗೆ ಗಲ್ಲು ಶಿಕ್ಷೆ ವಿಧಿಸಲಾಗಿತ್ತು.

2024ರ ಏಪ್ರಿಲ್ 18ರಂದು ಅಬ್ದುಲ್ ರಹೀಂಗೆ ಗಲ್ಲು ಶಿಕ್ಷೆ ಜಾರಿಗೊಳಿಸಲು ನಿರ್ಧರಿಸಲಾಗಿತ್ತು. ಆದರೆ, ಕೇರಳಂ ಜನತೆ ಅವರ ಬಿಡುಗಡೆಗಾಗಿ 'ಬ್ಲಡ್ ಮನಿ' ಪಾವತಿಸಲು ವಿಶೇಷ ಅಭಿಯಾನ ಪ್ರಾರಂಭಿಸಿದರು. ನಾಲ್ಕು ದಿನಗಳಲ್ಲಿ 15 ಮಿಲಿಯನ್ ಸೌದಿ ರಿಯಾಲ್ಸ್ (ಅಂದಾಜು ₹34 ಕೋಟಿ) ಸಂಗ್ರಹವಾಯಿತು. ಇದೀಗ, ಎರಡು ದಶಕಗಳ ಜೈಲು ಶಿಕ್ಷೆ ಪೂರ್ಣಗೊಳಿಸಿ, ರಹೀಂ ಸೌದಿ ಜೈಲಿನಿಂದ ಬಿಡುಗಡೆಯಾಗಿ ತವರಿಗೆ ಮರಳಿದ್ದಾರೆ.

ವಿಮಾನದಲ್ಲಿ ಪ್ರಶ್ನೆಪತ್ರಿಕೆ ರವಾನೆ

ಮರು ಪರೀಕ್ಷೆಯನ್ನು ಶೇ 100ರಷ್ಟು ದೋಷರಹಿತವಾಗಿಸಲು ಸಿದ್ಧತೆ

ನೀಟ್

ನವದೆಹಲಿ (ಪಿಟಿಐ): ಜೂನ್ 21ರಂದು ನಡೆಯಲಿರುವ ನೀಟ್-ಯುಜಿ ಮರು ಪರೀಕ್ಷೆಯನ್ನು ಶೇ 100ರಷ್ಟು ದೋಷರಹಿತವಾಗಿ ನಡೆಸಲು, ಭಾರತೀಯ ವಾಯುಪಡೆಯ (ಐಎಎಫ್) ನೆರವು ಪಡೆದುಕೊಳ್ಳಲು ಕೇಂದ್ರ ಸರ್ಕಾರ ಚಿಂತನೆ ನಡೆಸಿದೆ ಎಂದು ಮೂಲಗಳು ಹೇಳಿವೆ. ಐಎಎಫ್ ವಿಮಾನದ ಮೂಲಕ ಪ್ರಶ್ನೆಪತ್ರಿಕೆ ಸಾಗಿಸುವ ಸಾಧ್ಯತೆಯನ್ನು ಅಧಿಕಾರಿಗಳು ಪರಿಶೀಲಿಸುತ್ತಿದ್ದಾರೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದಲ್ಲಿ ಗುರುವಾರ ನಡೆದ ಉನ್ನತಾಧಿಕಾರ ಸಮಿತಿ ಸಭೆಯಲ್ಲಿ ಈ ಸಾಧ್ಯತೆಯನ್ನು ಚರ್ಚಿಸಲಾಗಿದೆ. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್, ಸಂಪರ್ಕ ಸಚಿವ ಜ್ಯೋತಿರಾಧಿತ್ಯ ಸಿಂಧಿಯಾ ಸಭೆಯಲ್ಲಿ ಭಾಗವಹಿಸಿದ್ದರು. ಆದರೆ, ಸಭೆಯಲ್ಲಿ ಯಾವುದೇ ನಿರ್ಧಾರ ಕೈಗೊಳ್ಳಲಾಗಿಲ್ಲ. ಅಂತಿಮವಾಗಿ ಈ ಸಾಧ್ಯತೆಯನ್ನು ಪ್ರಧಾನಿ ಮುಂದೆ ಇಡಲಾಗುವುದು, ಅವರು ನಿರ್ಧಾರ ಕೈಗೊಳ್ಳುವರು' ಎಂದು ಮೂಲಗಳು ಹೇಳಿವೆ.

ನೀಟ್-ಯುಜಿ ಮರು ಪರೀಕ್ಷೆಯ ಸಿದ್ಧತೆ, ಪ್ರಶ್ನೆಪತ್ರಿಕೆ ಸಿದ್ಧಪಡಿಸುವ ಶಿಕ್ಷಕರ ತಂಡ, ಮುದ್ರಣ, ಪರೀಕ್ಷಾ ಕೇಂದ್ರಗಳಿಗೆ ರವಾನೆ, ಭದ್ರತೆ ವಿಷಯಗಳ ಬಗ್ಗೆ ಪ್ರಧಾನಿ ನೇರವಾಗಿ ನಿಗಾ ವಹಿಸುತ್ತಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

'ಮೇ 3ರಂದು ನಡೆದಿದ್ದ ನೀಟ್-ಯುಜಿ ಪರೀಕ್ಷೆಯನ್ನು ಪ್ರಶ್ನೆಪತ್ರಿಕೆ ಸೋರಿಕೆ ಆರೋಪದ ಕಾರಣ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ರದ್ದುಪಡಿಸಿತ್ತು. ಈ ಕುರಿತು ಸಿಬಿಐ ತನಿಖೆ ನಡೆಸುತ್ತಿದೆ. 23ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದರು.

'ಸುರಕ್ಷಿತ ರವಾನೆ'

'ಪ್ರಶ್ನೆ ಪತ್ರಿಕೆ ಸೋರಿಕೆಗೆ ಪರಿಹಾರ ಕಂಡುಕೊಳ್ಳುವ ಎಲ್ಲ ಸಾಧ್ಯತೆಗಳನ್ನು ನಾವು ಪರಿಶೀಲಿಸುತ್ತಿದ್ದೇವೆ. ಸಾಮಾನ್ಯವಾಗಿ ಅಂಚೆ ಇಲಾಖೆಯ ಮೂಲಕ ನೀಟ್ ಪ್ರಶ್ನೆಪತ್ರಿಕೆ ರವಾನೆ ಕಾರ್ಯ ನಡೆಯುತ್ತಿತ್ತು. ಆದರೆ, ಈ ಬಾರಿ ಪರೀಕ್ಷಾ ಕೇಂದ್ರಗಳಿಗೆ ಪ್ರಶ್ನೆ ಪತ್ರಿಕೆ ಸಾಗಿಸಲು ವಾಯುಪಡೆಯ ನೆರವು ಕೇಳಿದ್ದೇವೆ. ಇದು ಕ್ಷಿಪ್ರ ಮತ್ತು ಸುರಕ್ಷಿತ ರವಾನೆಯನ್ನು ಖಚಿತಪಡಿಸುತ್ತದೆ. ಮರು ಪರೀಕ್ಷೆ ನಡೆಯುವ ಸಂದರ್ಭದಲ್ಲಿ ದೇಶದಾದ್ಯಂತ ಮುಂಗಾರು ಆರಂಭ ಆಗಿರುತ್ತದೆ. ಈ ಅಂಶವನ್ನೂ ಗಮನದಲ್ಲಿ ಇಟ್ಟುಕೊಳ್ಳಲಾಗಿದೆ' ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದರು.

ಸಿಬಿಎಸ್‌ಇ 'ಆನ್ ಸ್ಕ್ರೀನ್ ಮಾರ್ಕಿಂಗ್' (ಒಎಸ್‌ಎಂ) ವಿಧಾನ ವಿರೋಧಿಸಿ ಗುರುವಾರ ನವದೆಹಲಿಯಲ್ಲಿ 'ಎನ್‌ಎಸ್‌ಯುಐ' ನೇತೃತ್ವದಲ್ಲಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು – ಪಿಟಿಐ ಚಿತ್ರ

ಧರ್ಮೇಂದ್ರ ಪ್ರಧಾನ್ ಅವರ ದಪ್ಪ ಚರ್ಮ, ದುರಹಂಕಾರ ಹಾಗೂ ಸುಳ್ಳು ಹೇಳುವ ಧೈರ್ಯವು ಮೋದಿ-ಶಾ ಬ್ರ್ಯಾಂಡ್‌ನ ರಾಜಕೀಯಕ್ಕೆ ಹೊಂದಿಕೊಳ್ಳುತ್ತದೆ
ಜೈರಾಮ್ ರಮೇಶ್, ಕಾಂಗ್ರೆಸ್ ನಾಯಕ

ಪ್ರಧಾನ್- ರಾಹುಲ್ ಜಟಾಪಟಿ

ಸಿಬಿಎಸ್‌ಇ ನಡೆಸಿದ 12ನೇ ತರಗತಿ ಪರೀಕ್ಷೆಯ ಮೌಲ್ಯಮಾಪನ ಕುರಿತು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹಾಗೂ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪ–ಪ್ರತ್ಯಾರೋಪ ಮಾಡಿದ್ದಾರೆ

'ಹತಾಶೆಯ ಆರೋಪ'

'ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ನಿರಂತರ ಚುನಾವಣಾ ಸೋಲುಗಳಿಂದ ಹತಾಶರಾಗಿದ್ದಾರೆ. ಹೀಗಾಗಿ, ಸುಧಾರಣೆ ಮತ್ತು ತಾಂತ್ರಿಕ ಪ್ರಗತಿಯನ್ನು ವಿರೋಧಿಸುತ್ತಿದ್ದಾರೆ' ಎಂದು ಸಚಿವ ಧರ್ಮೇಂದ್ರ ಪ್ರಧಾನ್ ಆರೋಪಿಸಿದ್ದಾರೆ.

'ರಾಹುಲ್ ಅವರು ಎಸ್‌ಐಆರ್, ಇವಿಎಂ, ಡಿಜಿಟಲ್ ಇಂಡಿಯಾವನ್ನು ವಿರೋಧಿಸಿದ್ದರು. ಅವರು ಭಾರತದ ವೈಜ್ಞಾನಿಕ ಪ್ರಗತಿಯೊಂದಿಗೆ ನಿಲ್ಲುವಂತೆ ಕಾಣುತ್ತಿಲ್ಲ' ಎಂದು ಹೇಳಿದ್ದಾರೆ.

'ವಿದ್ಯಾರ್ಥಿಗಳು ಮತ್ತು ಪರೀಕ್ಷೆಗಳಿಗೆ ಸಂಬಂಧಿಸಿದ ವಿಷಯಗಳನ್ನು ರಾಜಕೀಯಗೊಳಿಸಬಾರದು. ಯಾರ ಮಾತು ಅಥವಾ ನಡವಳಿಕೆಯೂ ವಿದ್ಯಾರ್ಥಿಗಳ ಒತ್ತಡಕ್ಕೆ ಕಾರಣವಾಗಬಾರದು. ಈ ವಿಷಯದಲ್ಲಿ ಆಗಿರುವ ಅನನುಕೂಲತೆಯ ಹೊಣೆಯನ್ನು ನಾನೇ ಹೊರುತ್ತೇನೆ. ಇದು ರಾಜಕೀಯ ಮಾಡುವ ಸಮಯವಲ್ಲ' ಎಂದಿದ್ದಾರೆ. '12ನೇ ತರಗತಿಯ ಪರೀಕ್ಷಾ ಮೌಲ್ಯಮಾಪನ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕೆಲ ಸಮಸ್ಯೆಗಳು ಕಂಡುಬಂದಿವೆ. ಮರುಮೌಲ್ಯಮಾಪನ ಪ್ರಕ್ರಿಯೆಯು ಪ್ರಾರಂಭವಾಗುತ್ತದೆ' ಎಂದಿದ್ದಾರೆ.

'ಸುಮಾರು 17 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಪ್ರತಿ ವಿದ್ಯಾರ್ಥಿಯ ಉತ್ತರ ಪತ್ರಿಕೆಗಳನ್ನು ಸುರಕ್ಷಿತವಾಗಿ ಸಂರಕ್ಷಿಸಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

'ಅಪರಾಧಗಳಿಂದ ಮುಕ್ತರಾಗಲು ಸಾಧ್ಯವಿಲ್ಲ'

'ನನ್ನ ಮೇಲೆ ದಾಳಿ ಮಾಡುವುದರಿಂದ ಶಿಕ್ಷಣ ಸಚಿವರು ತಮ್ಮ ಅಪರಾಧ ಗಳಿಂದ ಮುಕ್ತರಾಗುವುದಿಲ್ಲ' ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.



'ಧರ್ಮೇಂದ್ರ ಪ್ರಧಾನ್ ಜಿ, ನೀವು ನನ್ನ ಮೇಲೆ ಎಷ್ಟು ಬೇಕಾದರೂ ದಾಳಿ ಮಾಡಬಹುದು. ಆದರೆ, ಅದು ನಿಮ್ಮ ಅಪರಾಧಗಳಿಂದ ಮುಕ್ತವಾಗುವುದಿಲ್ಲ. 18.5 ಲಕ್ಷ ವಿದ್ಯಾರ್ಥಿಗಳಿಗಾಗಿ ಉತ್ತರ ಬೇಡುವುದನ್ನು ಅದು ತಡೆಯುವುದಿಲ್ಲ' ಎಂದು ರಾಹುಲ್ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

'ಗ್ಲೋಬರೇನಾ ಎಂಬ ಹಳೆಯ ಹೆಸರಿನಲ್ಲಿ ಈಗಾಗಲೇ ವಿವಾದದಲ್ಲಿ ಸಿಲುಕಿರುವ ಕಂಪನಿ ಕೋಎಂಪ್ಟ್‌ಗೆ ಸಿಬಿಎಸ್‌ಇ ಒಎಸ್‌ಎಂ ಜವಾಬ್ದಾರಿಯನ್ನು ಏಕೆ ವಹಿಸಲಾಯಿತು? ಯಾರ ಆದೇಶದ ಮೇರೆಗೆ ಇದನ್ನು ಮಾಡಲಾಯಿತು? ಕೋಎಂಪ್ಟ್ ಮತ್ತು ಮೋದಿ ಸರ್ಕಾರದ ನಡುವಿನ ಸಂಬಂಧವೇನು' ಎಂದು ಪ್ರಶ್ನಿಸಿದ್ದಾರೆ.

ಎನ್‌ಟಿಎ, ಸಿಬಿಐಗೆ ಸಮನ್ಸ್

ಪರೀಕ್ಷಾ ಸಂಸ್ಥೆಯು ಪರೀಕ್ಷೆಗಳನ್ನು ನಡೆಸುವ ಬಗ್ಗೆ ನೀಡಿದ ಭರವಸೆಗಳಿಗೆ ಸಂಬಂಧಿಸಿದಂತೆ ಶುಕ್ರವಾರ ತನ್ನ ಮುಂದೆ ಹಾಜರಾಗುವಂತೆ ಸಂಸದೀಯ ಸಮಿತಿಯು ಕೇಂದ್ರ ಶಿಕ್ಷಣ ಸಚಿವಾಲಯ, ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಮತ್ತು ಸಿಬಿಐ ಅಧಿಕಾರಿಗಳಿಗೆ ಸಮನ್ಸ್ ಜಾರಿ ಮಾಡಿದೆ.

ರಾಜ್ಯಸಭಾ ಸಚಿವಾಲಯವು ಮೇ 27ರಂದು ಹೊರಡಿಸಿದ ನೋಟಿಸ್ ಪ್ರಕಾರ, ಸರ್ಕಾರಿ ಭರವಸೆಗಳ ಸಮಿತಿಯು ಶಿಕ್ಷಣ ಸಚಿವಾಲಯದ ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿ ವಿನೀತ್ ಜೋಶಿ, ಎನ್‌ಟಿಎ ಮಹಾನಿರ್ದೇಶಕ ಅಭಿಷೇಕ್ ಸಿಂಗ್ ಮತ್ತು ಸಿಬಿಐ ನಿರ್ದೇಶಕ ಪ್ರವೀಣ್ ಸೂದ್ ಅವರ ಹೇಳಿಕೆಯನ್ನು ದಾಖಲಿಸಲಿದೆ. ಸಮಿತಿ ಸಭೆ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ನಿಗದಿಯಾಗಿದೆ.

'ಲೋಪವಾದರೆ ಕಠಿಣ ಕ್ರಮ'

'ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಸಕಾಲದಲ್ಲಿ ಪಾರದರ್ಶಕ ಮತ್ತು ವಿದ್ಯಾರ್ಥಿ ಸ್ನೇಹಿ ರೀತಿಯಲ್ಲಿ ಪರಿಹರಿಸುವುದನ್ನು ಖಚಿತಪಡಿಸಿಕೊಳ್ಳಲು ಅಗತ್ಯವಿರುವ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಬೇಕು' ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಸಿಬಿಎಸ್‌ಇ ಕೇಂದ್ರ ಕಚೇರಿಯಲ್ಲಿ ಗುರುವಾರ ನಡೆದ ಉನ್ನತ ಮಟ್ಟದ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 'ವ್ಯವಸ್ಥೆಯ ಒಳಗೆ ಅಥವಾ ಹೊರಗೆ ಯಾವುದೇ ಲೋಪ ಅಥವಾ ನಿರ್ಲಕ್ಷ್ಯ ಕಂಡುಬಂದರೆ ಸಹಿಸುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಎಚ್ಚರಿಕೆ ನೀಡಿದ್ದಾರೆ.

'ಒಎಸ್‌ಎಂ ವ್ಯವಸ್ಥೆ ಸುರಕ್ಷಿತ'

'ಆನ್–ಸ್ಕ್ರೀನ್ ಮಾರ್ಕಿಂಗ್ ವ್ಯವಸ್ಥೆಯು ಸುರಕ್ಷಿತ ಹಾಗೂ ಬಲಿಷ್ಠವಾದ ಮಾಹಿತಿ ತಂತ್ರಜ್ಞಾನದ ವೇದಿಕೆಯಾಗಿದೆ. ಮೌಲ್ಯಮಾಪನ ಪೋರ್ಟಲ್‌ನಲ್ಲಿ ಯಾವುದೇ ದೋಷ ಕಂಡುಬಂದಿಲ್ಲ' ಎಂದು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ತಿಳಿಸಿದೆ.

'ಉತ್ತರ ಪತ್ರಿಕೆಗಳ ಸುರಕ್ಷಿತ ಸ್ಕ್ಯಾನಿಂಗ್ ಮತ್ತು ಪ್ರಕ್ರಿಯೆಗಾಗಿ ಈ ವೇದಿಕೆಯನ್ನು ತಪಾಸಣೆಗಳ ಮೂಲಕ ಪರೀಕ್ಷಿಸಿ ಪ್ರಮಾಣೀಕರಿಸಲಾಗಿದೆ. ಇದು ಬಹು ಗುಣಮಟ್ಟದ ತಪಾಸಣೆ ಹಾಗೂ ಸುರಕ್ಷತಾ ಕ್ರಮಗಳನ್ನು ಒಳಗೊಂಡ ಬಲವಾದ ಡಿಜಿಟಲ್ ಮೂಲಸೌಕರ್ಯದ ಬೆಂಬಲವನ್ನು ಹೊಂದಿದೆ' ಎಂದು ಹೇಳಿದೆ.

'ಕೋಎಂಪ್ಟ್ ಎಜುಟೆಕ್'ಗೆ ಒಪ್ಪಂದ ನೀಡಿದ ಕುರಿತಾದ ಆರೋಪಗಳನ್ನು ಸಿಬಿಎಸ್‌ಇ ತಿರಸ್ಕರಿಸಿದೆ. 'ಇದು ದಾರಿತಪ್ಪಿಸುವ ಮತ್ತು ಸತ್ಯಕ್ಕೆ ದೂರವಾದ ಸಂಗತಿ. ಸಾಮಾನ್ಯ ಹಣಕಾಸು ನಿಯಮಗಳ ಅಡಿಯಲ್ಲಿ ಸೂಕ್ತ ಕಾರ್ಯವಿಧಾನವನ್ನು ಅನುಸರಿಸಿದ ನಂತರ ಒಪ್ಪಂದ ನೀಡಲಾಗಿದೆ' ಎಂದು ತಿಳಿಸಿದೆ.

ಚುಟುಕೆ ಸುದ್ದಿ

ಸಿಯುಇಟಿ–ಯುಜಿ ಪರೀಕ್ಷೆ: ಪರಿಷ್ಕೃತ ದಿನಾಂಕ ಪ್ರಕಟ

ನವದೆಹಲಿ (ಪಿಟಿಐ): ಬಕ್ರೀದ್ ಹಬ್ಬದ ಕಾರಣಕ್ಕೆ ಮುಂದೂಡಲಾಗಿದ್ದ ವಿಶ್ವವಿದ್ಯಾಲಯ ಸಾಮಾನ್ಯ ಪ್ರವೇಶ ಪರೀಕ್ಷೆ(ಸಿಯುಇಟಿ–ಯುಜಿ–2026) ಮೇ 31, ಜೂನ್ 6 ಮತ್ತು 7ರಂದು ನಡೆಯಲಿದೆ. ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ(ಎನ್‌ಟಿಎ) ಪರಿಷ್ಕೃತ ದಿನಾಂಕವನ್ನು ಪ್ರಕಟಿಸಿದೆ. ಮೇ 31ರ ಪರೀಕ್ಷೆಯ ಪ್ರವೇಶ ಪತ್ರವನ್ನು ಬಿಡುಗಡೆಗೊಳಿಸಲಾಗಿದ್ದು, ಅಭ್ಯರ್ಥಿಗಳು ಅಧಿಕೃತ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಜೂನ್ 6 ಮತ್ತು 7ರ ಪರೀಕ್ಷೆಯ ಪ್ರವೇಶ ಪತ್ರವನ್ನು ಶೀಘ್ರದಲ್ಲಿ ಬಿಡುಗಡೆಗೊಳಿಸಲಾಗುವುದು ಎಂದು ಎನ್‌ಟಿಎ ತಿಳಿಸಿದೆ.

ಇ.ಡಿ ಕರ್ತವ್ಯಕ್ಕೆ ಅಡ್ಡಿ, ದಾಂದಲೆ: ಎಂಟು ಮಂದಿ ಬಂಧನ

ತಿರುವನಂತಪುರ (ಪಿಟಿಐ): 'ಕೇರಳಂನ ಮಾಜಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ನಿವಾಸಕ್ಕೆ ಇ.ಡಿ ಅಧಿಕಾರಿಗಳು ತನಿಖೆಗೆ ಬಂದ ಸಂದರ್ಭದಲ್ಲಿ ಕರ್ತವ್ಯಕ್ಕೆ ಅಡ್ಡಿಪಡಿಸಿ, ದಾಂದಲೆ ನಡೆಸಿದ ಆರೋಪದಲ್ಲಿ ಇದುವರೆಗೆ 8 ಮಂದಿಯನ್ನು ಬಂಧಿಸಲಾಗಿದೆ' ಎಂದು ಕೇರಳಂ ಡಿಜಿಪಿ ರಾವಡ ಎ. ಚಂದ್ರಶೇಖರ್ ಗುರುವಾರ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಕೇರಳಂನ ಗೃಹ ಸಚಿವ ರಮೇಶ್ ಚೆನ್ನಿತ್ತಲ ಅವರ ನಿವಾಸದಲ್ಲಿ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಡಿಜಿಪಿ, 'ಬುಧವಾರದ ದಾಂದಲೆ ಪ್ರಕರಣದ ತನಿಖೆ ಸರಿಯಾಗಿ ದಿಕ್ಕಿನಲ್ಲಿ ನಡೆಯುತ್ತಿದೆ. ಗಲಭೆಗೆ ಕಾರಣವಾದ ಇನ್ನಷ್ಟು ಜನರನ್ನು ಶೀಘ್ರದಲ್ಲೇ ಬಂಧಿಸಲಾಗುವುದು. ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಗೃಹ ಸಚಿವರು ಸೂಚಿಸಿದ್ದಾರೆ' ಎಂದರು.

'ಪಿಣರಾಯಿ ನಿವಾಸದ ಮೇಲೆ ದಾಳಿ ನಡೆಸುತ್ತಿರುವ ಬಗ್ಗೆ ಇ.ಡಿ ಅಧಿಕಾರಿಗಳು ನಮಗೆ ಮುಂಚಿತವಾಗಿ ಮಾಹಿತಿ ನೀಡಿರಲಿಲ್ಲ. ಆದರೆ, ಅಲ್ಲಿ ಕಲ್ಲು ತೂರಾಟ ವರದಿಯಾದ ಕೂಡಲೇ ಹೆಚ್ಚುವರಿ ಪೊಲೀಸರನ್ನು ನಿಯೋಜಿಸಲಾಯಿತು. ಭದ್ರತಾ ಸಿಬ್ಬಂದಿ ಮೇಲಿನ ಹಲ್ಲೆ ಸೇರಿ ಗಲಭೆಗೆ ಕಾರಣವಾದ ಒಟ್ಟು 300ರ ಜನರ ವಿರುದ್ಧ ಇಲ್ಲಿನ ಮ್ಯೂಸಿಯಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ' ಎಂದು ಡಿಜಿಪಿ ಹೇಳಿದರು.

ಎ.ಐ ಆಧಾರಿತ ಶಿಕ್ಷಣ: ಸಮಗ್ರ ಪುನರ್‌ರಚನೆಗೆ ಕೇಂದ್ರ ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಉದ್ದಿಮೆಗಳ ಅಗತ್ಯಗಳಿಗೆ ತಕ್ಕಂತೆ ತಾಂತ್ರಿಕ ಶಿಕ್ಷಣ ಕ್ಷೇತ್ರವನ್ನು ಅಣಿಗೊಳಿಸುವ ಉದ್ದೇಶದಿಂದ ದೇಶದಲ್ಲಿನ ಕೃತಕ ಬುದ್ಧಿಮತ್ತೆ (ಎ.ಐ) ಶಿಕ್ಷಣ ವ್ಯವಸ್ಥೆಯನ್ನು ಸಮಗ್ರವಾಗಿ ಪುನರ್‌ರಚಿಸಲು ಕೇಂದ್ರ ಸರ್ಕಾರ ಮುಂದಾಗಿದೆ.

'ಉಪನ್ಯಾಸದ ಮೂಲಕ ಬೋಧನೆ ಮಾಡುವ ಸಾಂಪ್ರದಾಯಿಕ ಪದ್ಧತಿ ಕೈಬಿಟ್ಟು ಕೈಗಾರಿಕೆಗಳಿಗೆ ಅಗತ್ಯವಿರುವ ಕೌಶಲಗಳನ್ನು ಮೈಗೂಡಿಸಿಕೊಳ್ಳಲು ನೆರವಾಗುವಂತಹ ಶಿಕ್ಷಣ ವ್ಯವಸ್ಥೆಯನ್ನು ಆರಂಭಿಸಬೇಕು. ಇಂತಹ ಬೋಧನೆ- ಕಲಿಕಾ ಪ್ರಕ್ರಿಯೆಯನ್ನು ಎಂಜಿನಿಯರಿಂಗ್‌ನ ಮೊದಲ ಸೆಮಿಸ್ಟರ್ ನಿಂದಲೇ ಆರಂಭಿಸಬೇಕು' ಎಂದು ಎ.ಐ ಪಠ್ಯಕ್ರಮ ಕುರಿತ ಕಾರ್ಯಪಡೆಯೊಂದು ಶಿಫಾರಸು ಮಾಡಿದೆ.



ಕಾರ್ಯಪಡೆಯ ಶಿಫಾರಸುಗಳ ಕುರಿತು ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ ಸಚಿವ ಅಶ್ವಿನಿ ವೈಷ್ಣವ್ ನೇತೃತ್ವದಲ್ಲಿ ಗುರುವಾರ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಚರ್ಚಿಸಲಾಯಿತು.

ಪ್ರಸ್ತುತ, ಎಂಜಿನಿಯರಿಂಗ್ ವಿದ್ಯಾರ್ಥಿಗಳು ಶೇ25–ಶೇ30ರಷ್ಟು ಪ್ರಾಯೋಗಿಕ ಕಲಿಕೆ ಕೈಗೊಳ್ಳುತ್ತಿದ್ದಾರೆ. ವಿದ್ಯಾರ್ಥಿಗಳ ಪದವಿ ಹಾಗೂ ನಿರ್ದಿಷ್ಟ ವಿಷಯದಲ್ಲಿ ಅವರು ಕೈಗೊಳ್ಳುವ ವಿಶೇಷ ಅಧ್ಯಯನ ಆಧರಿಸಿ ಇದನ್ನು ಶೇ40– ಶೇ75ಕ್ಕೆ ಹೆಚ್ಚಿಸಬೇಕು ಎಂದು ಕಾರ್ಯಪಡೆ ಪ್ರಸ್ತಾವಿಸಿದೆ.

ಎ.ಐ ಅಭಿವೃದ್ಧಿ, ಜನರೇಟಿವ್ ಎ.ಐ, ಮಷಿನ್ ಲರ್ನಿಂಗ್ ಆಪರೇಷನ್ಸ್ (ಎಂಎಲ್‌ಒಪಿಎಸ್) ನಂತಹ ಅತ್ಯಾಧುನಿಕ ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳನ್ನು ತಯಾರು ಮಾಡುವ ಉದ್ದೇಶದಿಂದ ಈ ಬದಲಾವಣೆಗಳು ಅಗತ್ಯ ಎಂದು ಹೇಳಿದೆ. ನಾಸ್ಕಾಮ್ ಅಧ್ಯಕ್ಷ ರಾಜೇಶ್ ನಂಬಿಯಾರ್, ವಿಪ್ರೊದ ಸಿಒಒ ಸಂಜೀವ್ ಜೈನ್, ಟಿಸಿಎಸ್ ಹಾಗೂ ವಿಪ್ರೊದ ಪ್ರತಿನಿಧಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ತಿರುಮಲ: 12 ಲಕ್ಷ ಭಕ್ತರಿಂದ ಮುಡಿ ಸಮರ್ಪಣೆ

ತಿರುಪತಿ (ಆಂಧ್ರಪ್ರದೇಶ) (ಪಿಟಿಐ): ಇಲ್ಲಿನ ತಿರುಮಲ ಶ್ರೀ ವೆಂಕಟೇಶ್ವರ ಸ್ವಾಮಿಗೆ ಮೇ ತಿಂಗಳಲ್ಲಿ 12 ಲಕ್ಷಕ್ಕೂ ಅಧಿಕ ಭಕ್ತರು ಮುಡಿ ಅರ್ಪಿಸಿದ್ದಾರೆ. ಕೂದಲು ಮಾರಾಟದ ಮೂಲಕ ಟಿಟಿಡಿ ವರ್ಷಕ್ಕೆ ₹150 ಕೋಟಿ ಗಳಿಸುತ್ತಿದೆ.

'ಕಪ್ಪು ಬಂಗಾರ(ಕೂದಲು) ಸಂಗ್ರಹದಲ್ಲಿ ಭಾರಿ ಏರಿಕೆಯಾಗಿದೆ. ಮೇ 27ರವರೆಗೆ 12.4 ಲಕ್ಷ ಜನ ಮುಡಿ ಅರ್ಪಿಸಿದ್ದಾರೆ. 2024ರ ಮೇ ತಿಂಗಳಲ್ಲಿ 10.6 ಲಕ್ಷ ಮತ್ತು 2025ರ ಮೇ ತಿಂಗಳಿನಲ್ಲಿ 10.1 ಲಕ್ಷ ಜನ ಮುಡಿ ನೀಡಿದ್ದರು' ಎಂದು ಟಿಟಿಡಿ ಗುರುವಾರ ಪ್ರಕಟಣೆ ನೀಡಿದೆ. ಬೇಸಿಗೆ ರಜೆ ಮತ್ತು ವಾರಂತ್ಯದ ಕಾರಣಕ್ಕೆ ತಿರುಮಲಕ್ಕೆ ಅಪಾರ ಸಂಖ್ಯೆಯಲ್ಲಿ ಭಕ್ತರು ಬರುತ್ತಿದ್ದಾರೆ. ಮೇ 18ರಿಂದ ಮೇ 23ರವರೆಗೆ ಪ್ರತಿದಿನ 50 ಸಾವಿರಕ್ಕೂ ಅಧಿಕ ಭಕ್ತರು ತಮ್ಮ ಕೂದಲನ್ನು ಹರಕೆಯ ರೂಪದಲ್ಲಿ ನೀಡಿದ್ದಾರೆ. ಮೇ 23ರಂದು 57,580 ಮಂದಿ ಮುಡಿ ಅರ್ಪಿಸಿದ್ದಾರೆ' ಎಂದು ಟಿಟಿಡಿ ತಿಳಿಸಿದೆ.

'ಗೋವಿಗೆ ರಾಷ್ಟ್ರೀಯ ಪ್ರಾಣಿ ಸ್ಥಾನ ನೀಡಿ'

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ದೆಹಲಿ, ಜೈಪುರ ಸೇರಿದಂತೆ ಹಲವೆಡೆ ಗೋವನ್ನು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸುವಂತೆ ಆಗ್ರಹಿಸಿ ಮುಸ್ಲಿಂ ಸಂಘಟನೆಗಳು ಪ್ರತಿಭಟನೆ ನಡೆಸಿದವು.

ದೆಹಲಿಯ ಸೀಲಾಂಪುರ ಪ್ರದೇಶದಲ್ಲಿ ಮುಸ್ಲಿಂ ಸಮುದಾಯದ ಗುಂಪು ಈದ್–ಉಲ್–ಅಝಾ ಪ್ರಾರ್ಥನೆ ಬಳಿಕ ಗೋವನ್ನು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸುವಂತೆ ಆಗ್ರಹಿಸಿ ಪ್ರತಿಭಟನಾ ಮೆರವಣಿಗೆ ನಡೆಸಿತು.

ಈ ಸಂಬಂಧ ಘೋಷಣೆಗಳನ್ನು ಕೂಗುತ್ತಾ, ಫಲಕ ಮತ್ತು ಪೋಸ್ಟರ್‌ಗಳನ್ನು ಹಿಡಿದು ಮುಸ್ಲಿಂ ಸಮುದಾಯದವರು ರಸ್ತೆಯಲ್ಲಿ ಮೆರವಣಿಗೆ ನಡೆಸಿದರು.

ಜಮಿಯತ್ ಉಲಮಾ–ಇ–ಹಿಂದ್ (ಅರ್ಷದ್ ಮದನಿ ಬಣ) ನೀಡಿದ್ದ ಕರೆಯನ್ನು ಬೆಂಬಲಿಸಿ ಉತ್ತರ ಪ್ರದೇಶ, ರಾಜಸ್ಥಾನ ಸೇರಿದಂತೆ ವಿವಿಧ ರಾಜ್ಯಗಳಲ್ಲೂ ಕೆಲ ಮುಸ್ಲಿಂ ಸಂಘಟನೆಗಳ ಸದಸ್ಯರು ಇದೇ ರೀತಿ ಪ್ರತಿಭಟನಾ ಮೆರವಣಿಗೆ ನಡೆಸಿದ್ದಾರೆ.

'ಸಹೋದರತ್ವ ಬಲಪಡಿಸುವುದು ಮತ್ತು ದೇಶದಲ್ಲಿ ಶಾಂತಿ, ಸಾಮರಸ್ಯ ಸಾಧಿಸುವುದು ನಮ್ಮ ಉದ್ದೇಶವಾಗಿದೆ. ಭಾರತೀಯ ಸಂಸ್ಕೃತಿಯಲ್ಲಿ ಮಹತ್ವ ಸ್ಥಾನ ಪಡೆದಿರುವ ಗೋವಿಗೆ ರಾಷ್ಟ್ರೀಯ ಪ್ರಾಣಿಯ ಸ್ಥಾನಮಾನ ಘೋಷಿಸುವಂತೆ ಈ ಮೂಲಕ ನಾವು ಸರ್ಕಾರವನ್ನು ಒತ್ತಾಯಿಸುತ್ತೇವೆ' ಎಂದು ಪ್ರತಿಭಟನೆನಿರತರು ಹೇಳಿದ್ದಾರೆ.

ಜೈಪುರದಲ್ಲಿ ರಾಜಸ್ಥಾನ ಹಜ್ ವೆಲ್ಫೇರ್ ಸೊಸೈಟಿ ಸದಸ್ಯರು ಗೋವನ್ನು ರಾಷ್ಟ್ರೀಯ ಪ್ರಾಣಿಯನ್ನಾಗಿ ಘೋಷಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಿದರು ಪಿಟಿಐ ಚಿತ್ರ

ಸುಪ್ರೀಂ ಕೋರ್ಟ್‌ನಿಂದ 'ಸೇವ್‌ಲೈಫ್ ಫೌಂಡೇಷನ್'ನ ಅರ್ಜಿ ವಿಚಾರಣೆ

'ತುರ್ತು ಚಿಕಿತ್ಸೆ ಬದುಕುವ ಹಕ್ಕಿನ ಅವಿಭಾಜ್ಯ ಭಾಗ'

ನವದೆಹಲಿ(ಪಿಟಿಐ): ಅಪಘಾತವೂ ಸೇರಿ ತುರ್ತು ಸಂದರ್ಭಗಳಲ್ಲಿ ವೈದ್ಯಕೀಯ ನೆರವು ಸಿಗಬೇಕು. ಇದು ಪ್ರತಿಯೊಬ್ಬ ನಾಗರಿಕನ ಹಕ್ಕು. ಇದು ಸಂವಿಧಾನದ 21ನೇ ವಿಧಿಯಲ್ಲಿ ಹೇಳಿರುವ ಬದುಕುವ ಹಕ್ಕಿನ ಅವಿಭಾಜ್ಯ ಭಾಗವೂ ಆಗಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ರಸ್ತೆ ಅಪಘಾತದಲ್ಲಿ ಗಾಯಗೊಂಡವರಿಗೆ ಸಕಾಲಿಕ ಚಿಕಿತ್ಸೆ ಸಿಗಬೇಕು. ಇದು ಎಲ್ಲರ ಹಕ್ಕು ಎಂಬುದಾಗಿ ಪರಿಗಣಿಸಬೇಕು ಎಂದು ಕೋರಿ 'ಸೇವ್‌ಲೈಫ್ ಫೌಂಡೇಷನ್' ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ ಹೊರಡಿಸಿರುವ ಆದೇಶದಲ್ಲಿ ಸುಪ್ರೀಂ ಕೋರ್ಟ್ ಈ ಮಾತು ಹೇಳಿದೆ. ನ್ಯಾಯಮೂರ್ತಿಗಳಾದ ಜೆ.ಕೆ.ಮಾಹೇಶ್ವರಿ ಹಾಗೂ ಎ.ಎಸ್.ಚಂದೂರಕರ್ ಅವರು ಇದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿ, ಮಂಗಳವಾರ ಆದೇಶ ಹೊರಡಿಸಿದೆ.

'ಯಾವುದೇ ವ್ಯಕ್ತಿ ಅಪಘಾತಕ್ಕೆ ಒಳಗಾಗಿ ಗಾಯಗೊಂಡಾಗ ತುರ್ತು ಚಿಕಿತ್ಸೆಯ ಅಗತ್ಯವಿರುತ್ತದೆ. ಇಂತಹ ಸಂದರ್ಭದಲ್ಲಿ, ಅವರಿಗೆ ಏನು ಮಾಡಬೇಕು ಎಂಬುದು ಕೂಡ ತೋಚುವುದಿಲ್ಲ. ಅವರಲ್ಲಿ ಅಸಹಾಯಕತೆ ಮನೆ ಮಾಡಿರುತ್ತದೆ. ತಮ್ಮ ಸುತ್ತಲು ಇರುವವರು ಏನಾದರೂ ಸಹಾಯ ಮಾಡುತ್ತಾರೆ ಎಂಬ ಭರವಸೆಯನ್ನೂ ಅವರು ಹೊಂದಿರುತ್ತಾರೆ' ಎಂದು ಪೀಠ ಹೇಳಿದೆ.

'ಅಪಘಾತ ಸಂಭವಿಸಿದ ಸಂದರ್ಭದಲ್ಲಿ ಪ್ರತಿ ನಿಮಿಷವೂ ಅಮೂಲ್ಯ. ಇಂತಹ ವೇಳೆ ವೈದ್ಯಕೀಯ ನೆರವು ಇಲ್ಲವೇ ತುರ್ತು ಆರೈಕೆ ಸಿಗದಿದ್ದರೆ ವ್ಯಕ್ತಿಯು ಬದುಕುಳಿಯುವ ಸಾಧ್ಯತೆ ಕ್ಷೀಣಿಸುತ್ತದೆ. ಇಂತಹ ಸಂದರ್ಭಗಳೆಲ್ಲಾ ಕ್ಷಿಪ್ರವಾಗಿ ಸ್ಪಂದಿಸುವುದು ಕೂಡ ಔಷಧವೇ ಎನಿಸಲಿದೆ' ಎಂದು ಹೇಳಿದೆ.

ರಸ್ತೆ ಅಪಘಾತ ಸಂಭವಿಸಿದ ಸಂದರ್ಭದಲ್ಲಿ ಗಾಯಾಳುಗಳಿಗೆ ನಗದು ರಹಿತ ಚಿಕಿತ್ಸೆ ಒದಗಿಸುವುದಕ್ಕೆ ರೂಪಿಸಿರುವ 'ಪಿಎಂ ರಾಹತ್' ಜಾರಿಗೊಳಿಸದ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ಈ ಯೋಜನೆಯನ್ನು ಮೂರು ತಿಂಗಳ ಒಳಗಾಗಿ ಜಾರಿಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದ ಪೀಠ, ವಿಚಾರಣೆಯನ್ನು ನಾಲ್ಕು ತಿಂಗಳ ನಂತರ ನಡೆಸುವುದಾಗಿ ಪ್ರಕಟಿಸಿತು.

'112': 3 ತಿಂಗಳಲ್ಲಿ ಕಾರ್ಯಾಚರಣೆಗೆ ಕ್ರಮ: ಸೂಚನೆ

ಅಪಘಾತವೂ ಸೇರಿ ತುರ್ತು ಸಂದರ್ಭಗಳಲ್ಲಿ ವೈದ್ಯಕೀಯ ನೆರವು ನೀಡುವುದಕ್ಕಾಗಿ ಸಹಾಯವಾಣಿ '112', ಮೂರು ತಿಂಗಳ ಒಳಗಾಗಿ ಕಾರ್ಯಾಚರಣೆ ಆರಂಭಿಸಬೇಕು. ಕುಂದು ಕೊರತೆಗಳ ಪರಿಹಾರಕ್ಕೆ ವ್ಯವಸ್ಥೆಯೊಂದನ್ನು ಸಹ ಸ್ಥಾಪಿಸುವಂತೆ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ.

ಈ ಸಂಬಂಧ ಕೈಗೊಂಡ ಕ್ರಮಗಳ ಪರಿಶೀಲನೆಗೆ ಪ್ರತಿ ತಿಂಗಳು ಸಭೆ ನಡೆಸಿ, ನಿಯಮಿತವಾಗಿ ಅನುಪಾಲನಾ ವರದಿ ಸಲ್ಲಿಸಬೇಕು. ಸಭೆಯ ನಡಾವಳಿಗಳನ್ನು ಸಂಬಂಧಪಟ್ಟ ಪೋರ್ಟಲ್‌ಗಳಲ್ಲಿ ಅಳವಡಿಸಬೇಕು ಎಂದೂ ಸೂಚಿಸಿದೆ.

ಅಪಘಾತಕ್ಕೆ ಒಳಗಾದವರಿಗೆ ವೈದ್ಯಕೀಯ ನೆರವು ನೀಡುವುದಕ್ಕೆ ಸಂಬಂಧಿಸಿ ಕೇಂದ್ರ ಸರ್ಕಾರ ಮಾರ್ಗಸೂಚಿ ಬಿಡುಗಡೆ ಮಾಡಬೇಕು. ಈ ಮಾರ್ಗಸೂಚಿ ಅನ್ವಯ ಸಹಾಯವಾಣಿಯು ಮೂರು ತಿಂಗಳ ಒಳಗಾಗಿ ಕಾರ್ಯಾಚರಣೆ ಆರಂಭಿಸಲು ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳು ಕ್ರಮ ಕೈಗೊಳ್ಳಬೇಕು ಎಂದೂ ನಿರ್ದೇಶನ ನೀಡಿದೆ.

ನಿರ್ದೇಶನಗಳು

- ನೋಂದಾಯಿತ ಆಂಬುಲೆನ್ಸ್‌ಗಳಲ್ಲಿ (ಸರ್ಕಾರಿ ಮತ್ತು ಖಾಸಗಿ) ಜಿಪಿಎಸ್ ಹಾಗೂ ವೆಹಿಕಲ್ ಲೊಕೇಷನ್ ಟ್ರ್ಯಾಕಿಂಗ್ ಡಿವೈಸ್ (ವಿಎಲ್‌ಟಿಡಿ) ಅಳವಡಿಸಬೇಕು
- ನೈಜ ಸಮಯದಲ್ಲಿ ಸ್ಪಂದಿಸಲು ಸಾಧ್ಯವಾಗುವಂತೆ ಈ ಸಾಧನಗಳನ್ನು ಸಹಾಯವಾಣಿ 112 ಜೊತೆ ಸಂಯೋಜಿಸಿರಬೇಕು
- ಅಪಘಾತ ರಿಜಿಸ್ಟ್ರಿ (ಟ್ರಾಮಾ ರಿಜಿಸ್ಟ್ರಿ) ನಿರ್ವಹಣೆ ಮಾಡಬೇಕು. ಇದಕ್ಕಾಗಿ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ 8 ವಾರಗಳ ಒಳಗಾಗಿ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಬೇಕು
- ಸಹಾಯವಾಣಿ 112 ಕುರಿತು ಬಹು ಭಾಷೆಗಳಲ್ಲಿ ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ ನಡೆಸಬೇಕು
- ಗಾಯಾಳುಗಳಿಗೆ ನೆರವು ನೀಡಲು ಧಾವಿಸುವವರಿಗೆ ಮೋಟಾರು ವಾಹನಗಳ ಕಾಯ್ದೆ ಸೆಕ್ಷನ್ 134ಎ ಅಡಿ ರಕ್ಷಣೆ ಒದಗಿಸಬೇಕು
- ಅಪಘಾತಕ್ಕೆ ಒಳಗಾದವರಿಗೆ ನಗದು ರಹಿತ ಚಿಕಿತ್ಸೆ ಯೋಜನೆ (ಪಿಎಂ ರಾಹತ್) ಅಡಿ ವೈದ್ಯಕೀಯ ನೆರವು ನೀಡಲು ಕ್ರಮ ಕೈಗೊಳ್ಳಬೇಕು



'ಹೊಸ ಕಾನೂನಿನ ಅಗತ್ಯ ಸಮಿತಿಯಿಂದ ಪರಿಶೀಲನೆ'

ಗಾಂಧಿನಗರ (ಪಿಟಿಐ): ಅಕ್ರಮ ವಲಸೆ ಹಾಗೂ ಇತರ ಅಸ್ವಾಭಾವಿಕ ಕಾರಣಗಳಿಂದಾಗಿ ಜನಸಂಖ್ಯೆ ಸ್ವರೂಪದಲ್ಲಿ 'ಕೃತಕ' ಬದಲಾವಣೆಗಳು ಕಂಡುಬರುತ್ತಿವೆ. ಈ ಸಮಸ್ಯೆ ನಿವಾರಿಸಲು ಹೊಸ ಕಾನೂನಿನ ಅಗತ್ಯವಿದೆಯೇ ಎಂಬ ಬಗ್ಗೆ ಉನ್ನತ ಮಟ್ಟದ ಸಮಿತಿ ಪರಿಶೀಲಿಸಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಗುರುವಾರ ಹೇಳಿದರು.

'ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಪ್ರಕಾಶ್ ಪ್ರಭಾಕರ್ ನವೋಲೇಕರ್ ನೇತೃತ್ವದ ಸಮಿತಿಯು ಈ ಕುರಿತ ಶಿಫಾರಸುಗಳನ್ನು ಒಳಗೊಂಡ ವರದಿಯನ್ನು ವರ್ಷದ ಒಳಗಾಗಿ ಸಲ್ಲಿಸಲಿದೆ' ಎಂದರು.

'ಅಕ್ರಮ ವಲಸಿಗರು ತಾವಾಗಿಯೇ ದೇಶ ತೊರೆದಲ್ಲಿ, ಪಶ್ಚಿಮ ಬಂಗಾಳದಲ್ಲಿನ ಬಿಜೆಪಿ ನೇತೃತ್ವದ ಸರ್ಕಾರವು ಅವರ ವಿರುದ್ಧ ಪ್ರಕರಣಗಳನ್ನು ದಾಖಲಿಸುವುದಿಲ್ಲ. ಅವರು ದೇಶ ತೊರೆಯುವುದಕ್ಕೆ ಸರ್ಕಾರವು ಅನುಕೂಲ ಮಾಡಿಕೊಡಲಿದೆ' ಎಂದು ಹೇಳಿದರು.

'ಪ್ರತಿಯೊಬ್ಬ ನುಸುಳುಕೋರನನ್ನು ಪತ್ತೆ ಹಚ್ಚಿ, ದೇಶದಿಂದ ಹೊರ ಹಾಕುವುದಕ್ಕೆ ಕೇಂದ್ರ ಸರ್ಕಾರ ಬದ್ಧವಾಗಿದೆ. ಇದೇ ಉದ್ದೇಶಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಉನ್ನತ ಮಟ್ಟದ ಸಮಿತಿ ರಚಿಸುವ ನಿರ್ಧಾರ ಕೈಗೊಂಡಿದ್ದಾರೆ' ಎಂದರು.

ಜನಸಂಖ್ಯೆ ಸ್ವರೂಪದಲ್ಲಿ ಬದಲಾವಣೆ

ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರ ಕಾರ್ಯವೈಖರಿಯನ್ನು ಹೊಗಳಿದ ಶಾ,'ಗಡಿ ಉದ್ದಕ್ಕೂ ಬೇಲಿ ಅಳವಡಿಸುವುದಕ್ಕಾಗಿ, ಸುವೇಂದು ಅವರು ಅಧಿಕಾರ ವಹಿಸಿಕೊಂಡ ಏಳು ದಿನಗಳಲ್ಲಿ 600 ಹೆಕ್ಟೇರ್ ಜಮೀನನ್ನು ಬಿಎಸ್‌ಎಫ್‌ಗೆ ಹಸ್ತಾಂತರಿಸಿ ದರು. ಚಿಕನ್ ನೆಕ್ ಕಾರಿಡಾರ್‌ನಲ್ಲಿ ಹೆಚ್ಚುವರಿಯಾಗಿ 121 ಹೆಕ್ಟೇರ್ ಭೂಮಿಯನ್ನು ಕೇಂದ್ರಕ್ಕೆ ಹಸ್ತಾಂತರಿಸಿದ್ದಾರೆ' ಎಂದು ಹೇಳಿದರು.



ಪಶ್ಚಿಮ ಬಂಗಾಳದಲ್ಲಿ ಅಕ್ರಮ ವಲಸಿಗಾರರನ್ನು ಬಂಧಿಸಿಡುವ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಆದರೆ, ಅಕ್ರಮ ವಲಸಿಗರು ತಾವಾಗಿಯೇ ತಮ್ಮ ಮೂಲ ಸ್ಥಳಗಳಿಗೆ ಹೋಗಬೇಕು ಎಂದು ಸರ್ಕಾರ ಬಯಸುತ್ತದೆ
ಅಮಿತ್ ಶಾ, ಕೇಂದ್ರ ಗೃಹ ಸಚಿವ

ರಾಯಲ್ಸ್ ವೈಭವಕ್ಕೆ ತಡೆಯೊಡ್ಡೀತೆ ಟೈಟನ್ಸ್?

ಮುಲ್ಲನಪುರ: 2ನೇ ಕ್ವಾಲಿಫಯರ್ ಪಂದ್ಯ ಇಂದು
ಗಿಲ್ ಪಡೆಗೆ ತವರಿನಲ್ಲಿ ಫೈನಲ್ ಆಡುವ ಹಂಬಲ

ಪ್ರಜಾವಾಣಿ ವಾರ್ತೆ

ಮುಲ್ಲನಪುರ (ಚಂಡೀಗಢ): 'ದೈತ್ಯ ಶಕ್ತಿ'ಯ ಬಾಲಕ ವೈಭವ್ ಸೂರ್ಯವಂಶಿಯ ಸಿಡಿಲಬ್ಬರದ ಬ್ಯಾಟಿಂಗ್‌ಗೆ ತಡೆಯೊಡ್ಡುವುದು ಹೇಗೆ?

ಪ್ರಬಲ ಗುಜರಾತ್ ಟೈಟನ್ಸ್ ತಂಡದ ಬೌಲರ್‌ಗಳು ಈ ಪ್ರಶ್ನೆಗೆ ಉತ್ತರ ಹುಡುಕುವ ಪ್ರಯತ್ನದಲ್ಲಿದ್ದಾರೆ. ಟೈಟನ್ಸ್ ತಂಡವು ಶುಕ್ರವಾರ ಇಲ್ಲಿ ನಡೆಯಲಿರುವ ಕ್ವಾಲಿಫಯರ್ (2) ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ತಂಡವನ್ನು ಎದುರಿಸಲಿದೆ. ಮೊದಲ ಕ್ವಾಲಿಫಯರ್‌ನಲ್ಲಿ ಗುಜರಾತ್ ತಂಡವು ರಾಯಲ್ ಚಾಲೆಂಜರ್ಸ್ ಬೆಂಗಳೂರು ಎದುರು ಸೋತು ಈ ಹಂತಕ್ಕೆ ಬಂದಿದೆ. ಎಲಿಮಿನೇಟರ್‌ನಲ್ಲಿ ವೈಭವ್ ಅವರ ಅಬ್ಬರದ 97 ರನ್‌ಗಳ (29 ಎಸೆತ) ಬ್ಯಾಟಿಂಗ್ ಅಭಿಮಾನಿಗಳಿಗೆ ಇನ್ನೂ ಕಣ್ಣಿಗೆ ಕಟ್ಟಿದಂತಿದೆ. 2008ರಲ್ಲಿ ಈ ಟೂರ್ನಿ ಆರಂಭವಾದಾಗಿನಿಂದಲೂ 'ಅನ್‌ಕ್ಯಾಪ್ಡ್' ಪ್ರತಿಭೆಗಳು ಬೆಳಗಲು ವೇದಿಕೆಯಾಗಿದೆ.

ಐಪಿಎಲ್‌ನಲ್ಲಿ ಮಿಂಚಿದವರು ರಾಷ್ಟ್ರೀಯ ತಂಡದಲ್ಲಿಯೂ ಸ್ಥಾನ ಪಡೆದಿದ್ದಾರೆ. ಆದರೆ 15 ವರ್ಷದ ವೈಭವ್ ಮಾತೇ ಬೇರೆ. ಪ್ರಸ್ತುತ ಕ್ರಿಕೆಟ್ ಲೋಕದ ಘಟಾನುಘಟಿ ಬೌಲರ್‌ಗಳ ಎಸೆತಗಳನ್ನು ಸಿಕ್ಸರ್ ಹೊಡೆಯುವ ಮೂಲಕ 'ಬೇಬಿ ಬಾಸ್' ಎಂದು ಹೆಸರು ಮಾಡಿದ್ದಾರೆ.

ಇದೇ ಕ್ರೀಡಾಂಗಣದಲ್ಲಿ ಬುಧವಾರ ಸನ್‌ರೈಸರ್ಸ್ ಹೈದರಾಬಾದ್ ಎದುರು ನಡೆದ ಎಲಿಮಿನೇಟರ್‌ನಲ್ಲಿ ಒಂದು ಡಜನ್ ಸಿಕ್ಸರ್ ಹೊಡೆದಿದ್ದರು. ಪ್ರಸಕ್ತ ಟೂರ್ನಿಯಲ್ಲಿ ಒಟ್ಟು 65 ಬಾರಿ ಚೆಂಡನ್ನು ಪ್ರೇಕ್ಷಕರ ಗ್ಯಾಲರಿಗಳಿಗೆ ಹೊಡೆದಟ್ಟದ ಕೀರ್ತಿಗೂ ಪಾತ್ರರಾಗಿದ್ದಾರೆ. ಈ ಹಾದಿಯಲ್ಲಿ 'ಯುನಿವರ್ಸಲ್ ಬಾಸ್' ಖ್ಯಾತಿಯ ಕ್ರಿಸ್ ಗೇಲ್ ದಾಖಲೆಯನ್ನು ಪುಡಿಗಟ್ಟಿದ್ದಾರೆ. ಶಾಂತಚಿತ್ತ, ತೀಕ್ಷ್ಣ ನೋಟ, ಚುರುಕಾದ ಚಲನೆ ಮತ್ತು ವೇಗವಾಗಿ ಬ್ಯಾಟ್ ಪ್ರಯೋಗಿಸುವ ರೀತಿ ಅವರ ಯಶಸ್ಸಿಗೆ ಪ್ರಮುಖ ಕಾರಣವಾಗಿವೆ. ವಯಸ್ಸಿಗೆ ಮೀರಿದ ಆಟ ಅವರದ್ದು.

ಗುಜರಾತ್ ಟೈಟನ್ಸ್ ನಾಯಕ ಶುಭಮನ್ ಗಿಲ್

ಇಂದಿನ ಪಂದ್ಯ		
ಗುಜರಾತ್ ಟೈಟನ್ಸ್	V/s	ರಾಜಸ್ಥಾನ ರಾಯಲ್ಸ್
ತಾಣ: ಮುಲ್ಲನಪುರ	ಆರಂಭ: ರಾತ್ರಿ 7.30	
ಲೈವ್	ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್	

ಬಲಾಬಲ	ಒಟ್ಟು ಪಂದ್ಯ 10
ಗುಜರಾತ್ ಗೆಲುವು	7
ರಾಜಸ್ಥಾನ ಜಯ	3

242.86ರ ಸ್ಟ್ರೈಕ್ ರೇಟ್‌ನಲ್ಲಿ 680 ರನ್ ಗಳಿಸಿದ್ದಾರೆ. ಇದೀಗ ಗುಜರಾತ್ ತಂಡದ ವೇಗಿ ಕಗಿಸೊ ರಬಾಡ, ಪ್ರಸಿದ್ಧ ಕೃಷ್ಣ, ಮೊಹಮ್ಮದ್ ಸಿರಾಜ್, ಜೇಸನ್ ಹೋಲ್ಡರ್ ಮತ್ತು ಸ್ಪಿನ್ನರ್ ರಶೀದ್ ಖಾನ್ ಅವರು ವೈಭವ್ ವಿಕೆಟ್ ಉರುಳಿಸುವ ತಂತ್ರ ಹೆಣೆಯುವುದರಲ್ಲಿ ಮಗ್ನರಾಗಿದ್ದಾರೆ. ಆರ್‌ಸಿಬಿ ಎದುರು ಕಣಕ್ಕಿಳಿದಿದ್ದ ಕುಲವಂತ್ ಖೆಜ್ರೊಲಿಯಾ ಅವರಿಂದ ಉಪಯುಕ್ತ ಆಟ ಮೂಡಿಬರಲಿಲ್ಲ. ಆದ್ದರಿಂದ ಅವರನ್ನು ಬದಲಾವಣೆ ಮಾಡುವ ಸಾಧ್ಯತೆ ಇದೆ.

ರಿಯಾನ್ ಪರಾಗ್

ಸಾಯಿ ಸುದರ್ಶನ್ (652), ಶುಭಮನ್ ಗಿಲ್ (618) ಮತ್ತು ಜೋಸ್ ಬಟ್ಲರ್ (498) ಅವರ ಬ್ಯಾಟಿಂಗ್ ಮೇಲೆಯೇ ತಂಡವು ಹೆಚ್ಚು ಅವಲಂಬಿತವಾಗಿದೆ. ಈ ಮೂವರ ವೈಫಲ್ಯದಿಂದಾಗಿಯೇ ತಂಡವು ಆರ್‌ಸಿಬಿ ಎದುರು ಸೋತಿತ್ತು. ಅದೇ ಪಂದ್ಯದಲ್ಲಿ ಕೆಳಕ್ರಮಾಂಕದಲ್ಲಿ ಅರ್ಧಶತಕ ಹೊಡೆದಿದ್ದ ರಾಹುಲ್ ತೆವಾಟಿಯಾ ಮತ್ತು ವಾಷಿಂಗ್ಟನ್ ಸುಂದರ್ ಅವರಿಂದಾಗಿ ತಂಡದ ಬ್ಯಾಟಿಂಗ್ ಬಲ ಹೆಚ್ಚಿದೆ.

ಟೈಟನ್ಸ್ ತಂಡವು ಪ್ರಮುಖವಾಗಿ ತನ್ನ ಫೀಲ್ಡಿಂಗ್ ವಿಭಾಗದಲ್ಲಿ ಸುಧಾರಣೆ ತರುವುದು ಮುಖ್ಯವಾಗಿದೆ. ಕ್ವಾಲಿಫಯರ್ (1) ಪಂದ್ಯದಲ್ಲಿ ರಜತ್ ಪಾಟೀದಾರ್ ಅವರ ಎರಡು ಕ್ಯಾಚ್‌ಗಳನ್ನು ನೆಲಕ್ಕೆಹಾಕಿದ್ದು ಟೈಟನ್ಸ್‌ಗೆ ದುಬಾರಿಯಾಗಿತ್ತು.

ರಾಜಸ್ಥಾನ ತಂಡಕ್ಕೆ ಬೌಲಿಂಗ್ ವಿಭಾಗದಲ್ಲಿ ಜೋಫ್ರಾ ಆರ್ಚರ್ ಅವರ ಬಲ ಇದೆ. ನಾಂದ್ರೆ ಬರ್ಗರ್, ಸ್ಪಿನ್ನರ್ ಯಶ್ ರಾಜ್ ಪೂಂಜ ಅವರೂ ಉತ್ತಮ ಲಯದಲ್ಲಿದ್ದಾರೆ. ಪವರ್‌ಪ್ಲೇಯಲ್ಲಿ ಜೋಫ್ರಾ ಮತ್ತು ಬರ್ಗರ್ ಅವರು ಈಗಾಗಲೇ ತಮ್ಮ ಸಾಮರ್ಥ್ಯ ಮೆರೆದಿದ್ದಾರೆ. ಅವರ ಮುಂದೆ ಈಗ ಗಿಲ್ ಬಳಗದ ಬ್ಯಾಟಿಂಗ್ ಪಡೆಗೆ ತಡೆಯೊಡ್ಡುವ ಸವಾಲು ಇದೆ.

ರಾಜಸ್ಥಾನ ರಾಯಲ್ಸ್ ತಂಡದ ವೈಭವ್ ಸೂರ್ಯವಂಶಿ

ವೈಭವ್ ಆಟಕ್ಕೆ ಮನಸೋತ ಸಚಿನ್

ಮುಲ್ಲನಪುರ (ಪಿಟಿಐ): ದಿಗ್ಗಜ ಸಚಿನ್ ತೆಂಡೂಲ್ಕರ್ ಅವರೂ ರಾಜಸ್ಥಾನ ರಾಯಲ್ಸ್ ತಂಡದ ವೈಭವ್ ಸೂರ್ಯವಂಶಿಯ ಬ್ಯಾಟಿಂಗ್‌ಗೆ ಮನಸೋತಿದ್ದಾರೆ.

'ವೈಭವ್ ಬ್ಯಾಟ್ ಬೀಸುವಿಕೆಯ ಶೈಲಿ ಅಮೋಘವಾಗಿದೆ. ಎಲ್ಲಕ್ಕಿಂತ ಚೆಂದ ಎಂದರೆ ಅವರ ಪಾದಚಲನೆ. ತಮ್ಮ ಕಾಲನ್ನು ಗುರಿಯಾಗಿಸಿಕೊಂಡು ಹಾಕುವ ಎಸೆತಗಳಿಗೆ ಮುಂದಡಿಯನ್ನು ನಿಖರವಾಗಿ ಇಟ್ಟು ಬ್ಯಾಟ್ ಬೀಸಲು ಸ್ಥಳಾವಕಾಶ ಮಾಡಿಕೊಳ್ಳುವ ಪರಿ ಸುಂದರವಾಗಿದೆ. ಅದರಿಂದಾಗಿ ಅವರು ಬ್ಯಾಟ್ ಬೀಸಲು ಮುಕ್ತ ಅವಕಾಶ ಮಾಡಿಕೊಳ್ಳುತ್ತಾರೆ' ಎಂದು ತೆಂಡೂಲ್ಕರ್ ಅವರು 'ಎಕ್ಸ್'ನಲ್ಲಿ ಸಂದೇಶ ಹಾಕಿದ್ದಾರೆ.

ಬುಧವಾರ ವೈಭವ್ ಅವರು ಸನ್‌ರೈಸರ್ಸ್ ಹೈದರಾಬಾದ್ ಎದುರು 29 ಎಸೆತಗಳಲ್ಲಿ 97 ರನ್ ಗಳಿಸಿದ್ದರು. ಈ ಇನಿಂಗ್ಸ್ 'ಅತ್ಯದ್ಭುತ' ಎಂದೂ ಸಚಿನ್ ಬಣ್ಣಿಸಿದ್ದಾರೆ.

'ಬಾಸ್ ಬೇಬಿ (ವೈಭವ್) ಮುಂಬರುವ ದಿನಗಳಲ್ಲಿ ವಿಶ್ವದ ದೊಡ್ಡ ಬಾಸ್‌ಗಳ ದಾಖಲೆಗಳನ್ನು ಮುರಿಯಲಿದ್ದಾನೆ' ಎಂದು ಕ್ರಿಕೆಟ್ ದಂತಕತೆ ಯುವರಾಜ್ ಸಿಂಗ್ ಕೂಡ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಮಾಜಿ ಕ್ರಿಕೆಟಿಗರಾದ ಸುರೇಶ್ ರೈನಾ, ಮೊಹಮ್ಮದ್ ಕೈಫ್, ವೆಸ್ಟ್ ಇಂಡೀಸ್‌ನ ಇಯಾನ್ ಬಿಷಪ್, ಇಂಗ್ಲೆಂಡ್‌ನ ಮೈಕೆಲ್ ವಾನ್, ದಕ್ಷಿಣ ಆಫ್ರಿಕಾದ ಎಬಿ ಡಿವಿಲಿಯರ್ಸ್ ಅವರು ವೈಭವ್ ಆಟವನ್ನು ಕೊಂಡಾಡಿದ್ದಾರೆ.

ರಾಜ್ಯದ ಬಾಲಕರು ಫೈನಲ್‌ಗೆ ಲಗ್ಗೆ

ಬೆಂಗಳೂರು: ಗೆಲುವಿನ ಓಟ ಮುಂದುವರಿಸಿದ ಕರ್ನಾಟಕ ಬಾಲಕರ ತಂಡವು ಗುರುವಾರ ಜೂನಿಯರ್ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ 83-68ರಿಂದ ಚಂಡೀಗಢ ತಂಡವನ್ನು ಮಣಿಸಿ ಫೈನಲ್‌ಗೆ ಲಗ್ಗೆ ಹಾಕಿತು. ಆದರೆ, ಬಾಲಕಿಯರ ತಂಡವು ಸೆಮಿಫೈನಲ್‌ನಲ್ಲಿ ನಿರಾಸೆ ಅನುಭವಿಸಿತು.

ಪುದುಚೆರಿಯ ರಾಜೀವಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ನಾಲ್ಕರ ಘಟ್ಟದ ಪಂದ್ಯದಲ್ಲಿ ಕರ್ನಾಟಕದ ಬಾಲಕರು ಸಾಂಘಿಕ ಆಟ ಪ್ರದರ್ಶಿಸಿದರು. ವಿರಾಮದ ವೇಳೆ 40–31ರಿಂದ ಮುನ್ನಡೆ ಪಡೆದಿದ್ದ ರಾಜ್ಯ ತಂಡ, ನಂತರವೂ ಹಿಡಿತ ಮುಂದುವರಿಸಿತು. ಕರ್ನಾಟಕ ಗೆಲುವಿನಲ್ಲಿ ಸಮರ್ಥ ಮಣ್ಣೂರು, ಆದಿತ್ಯ ಶೆಣೈ, ಹರ್ಷನ್ ಯತೀಶ್ (ತಲಾ 16 ಅಂಕ) ಮತ್ತು ವೈಭವ್ ಗೌಡ (15) ಮಿಂಚಿದರು.

ಕರ್ನಾಟಕ ತಂಡವು ಫೈನಲ್‌ನಲ್ಲಿ ಹರಿಯಾಣ ತಂಡವನ್ನು ಎದುರಿಸಲಿದೆ. ಮತ್ತೊಂದು ಸೆಮಿಫೈನಲ್‌ನಲ್ಲಿ ಹರಿಯಾಣ ತಂಡವು 87–71ರಿಂದ ರಾಜಸ್ಥಾನ ತಂಡವನ್ನು ಮಣಿಸಿತು.

ರಾಜ್ಯದ ಬಾಲಕಿಯರ ತಂಡವು 62–67ರಿಂದ ಛತ್ತೀಸಗಢ ತಂಡಕ್ಕೆ ಮಣಿಯಿತು. ಆ ತಂಡವು ಫೈನಲ್‌ನಲ್ಲಿ ಕೇರಳ ತಂಡವನ್ನು ಎದುರಿಸಲಿದೆ.

ಫ್ರೆಂಚ್ ಓಪನ್: ಸೆರೂನ್‌ಡೊಲೊಗೆ ಅಚ್ಚರಿಯ ಜಯ
ಸುಸ್ತಾದ ಸಿನ್ನರ್ ನಿರ್ಗಮನ

ಪ್ಯಾರಿಸ್ (ಎಎಫ್‌ಪಿ): ಸುಡುಬಿಸಿಲಿನ ಜೊತೆಗೆ ವಾನ್ ಮಾನುವೆಲ್ ಸೆರೂನ್‌ಡೊಲೊ ಅವರ ಅಸಾಧಾರಣ ಚೇತರಿಕೆಯ ಆಟದಿಂದಾಗಿ ಯಾನಿಕ್ ಸಿನ್ನರ್ ಅವರು ಫ್ರೆಂಚ್ ಓಪನ್ ಟೂರ್ನಿಯಿಂದ ಹೊರಬೀಳಬೇಕಾಯಿತು. ಇದರಿಂದ ಪುರುಷರ ಸಿಂಗಲ್ಸ್‌ನಲ್ಲಿ ಇತರ ಅಕಾಂಕ್ಷಿಗಳಿಗೂ ಪ್ರಶಸ್ತಿ ಅವಕಾಶ ಮುಕ್ತವಾಯಿತು.

ವಿಶ್ವದ ಅಗ್ರಮಾನ್ಯ ಆಟಗಾರನಾಗಿರುವ ಸಿನ್ನರ್ ಮೊದಲ ಎರಡು ಸೆಟ್‌ಗಳನ್ನು ಗೆದ್ದು ಮೂರನೇಯದರಲ್ಲಿ 5–1 ಮುನ್ನಡೆ ಸಾಧಿಸಿ ಗೆಲುವಿನ ಅಂಚಿನಲ್ಲಿದ್ದರು. ಆದರೆ ಬಿಸಿ ಗಾಳಿಗೆ ಅವರು ಬವಳಿದಂತೆ ಕಂಡರು. ಅಂಕಣದಲ್ಲಿ ಓಡಾಡಲು ಪರದಾಡಿದರು. ಒಂದು ಹಂತದಲ್ಲಿ ಸತತವಾಗಿ 18 ಪಾಯಿಂಟ್‌ಗಳನ್ನು ಕಳೆದುಕೊಂಡರು.

ಚೇರ್ ಅಂಪೈರ್ ಬಳಿ ತೆರಳಿದ ಸಿನ್ನರ್ 'ತಲೆಸುತ್ತಿನ' ಅನುಭವವಾಗುತ್ತಿದೆ ಎಂದು ಹೇಳಿ ವೈದ್ಯಕೀಯ ವಿರಾಮ ಪಡೆದು 'ಫಿಲಿಪ್ ಶಾಟಿಯೆ' ಕೋರ್ಟ್‌ನಿಂದ ಹೊರನಡೆದರು. ಹಿಂತಿರುಗಿದ ಬಳಿಕ ಪಂದ್ಯದ ಮೇಲೆ ಹಿಡಿತವನ್ನು ಕಳೆದು ಕೊಂಡರು. 3–6, 2–6, 7–5, 6–1, 6–1 ರಲ್ಲಿ 56ನೇ ಕ್ರಮಾಂಕದ ಸೆರೂನ್‌ಡೊಲೊ ಅವರಿಗೆ ಸೋತರು.

2023ರ ಫ್ರೆಂಚ್ ಓಪನ್ ನಂತರ ಸಿನ್ನರ್ ಅವರು ಗ್ರ್ಯಾನ್‌ಸ್ಲಾಮ್ ಟೂರ್ನಿಯಿಂದ ಇಷ್ಟುಬೇಗ ಹೊರಬಿದ್ದಿದ್ದು ಇದೇ ಮೊದಲು. ಇದು 24 ವರ್ಷದ ಸೆರೂನ್‌ಡೊಲೊ ಅವರಿಗೆ ವೃತ್ತಿಜೀವನದ ಬಲು ದೊಡ್ಡ ಯಶಸ್ಸು. ಇತ್ತೀಚಿನ ವರ್ಷಗಳಲ್ಲಿ ಟೆನಿಸ್‌ನ ಅತಿ ದೊಡ್ಡ ಆಘಾತಕಾರಿ ಫಲಿತಾಂಶಕ್ಕೆ ಅವರು ಕಾರಣರಾಗಿ 32ರ ಸುತ್ತನ್ನು ತಲುಪಿದರು.

ಸುಡುಬಿಸಿಲು: ಈ ಬಾರಿ ವಿರಳವೆಂಬಂತೆ ಇಲ್ಲಿ ಸುಡುಬಿಸಿಲು ಆಟಗಾರರನ್ನು ಕಾಡುತ್ತಿದೆ. ಅದರ ಪ್ರಕೋಪದಿಂದ ಅನೇಕ ಆಟಗಾರರು ತೊಂದರೆ ಎದುರಿಸಿದ್ದಾರೆ. ಝೆಕ್ ಆಟಗಾರ ಯಾಕುಬ್ ಮೆನ್ಸಿಕ್ ಅವರು ಗೆದ್ದ ಬಳಿಕ ಬುಧವಾರ ಕೋರ್ಟ್‌ನಲ್ಲೇ ಕುಸಿದಿದ್ದರು. 'ಪಂದ್ಯಗಳನ್ನು ಸಂಜೆಯ ನಂತರ ಆಡಿಸಬೇಕು' ಎಂದು ನೊವಾಕ್ ಜೊಕೊವಿಚ್ ಒತ್ತಾಯಿಸಿದ್ದರು.

ಬಿಸಿಲಿನ ಪ್ರತಾಪದಿಂದ ಬಳಲಿದವರಲ್ಲಿ 24 ವರ್ಷ ವಯಸ್ಸಿನ ಸಿನ್ನರ್ ಹೊಸ ಸೇರ್ಪಡೆ. ರೋಮ್, ಮಾಂಟೆಕಾರ್ಲೊ, ಮಯಾಮಿ ಮತ್ತು ಇಂಡಿಯನ್ಸ್ ವೆಲ್ಸ್ ಟೂರ್ನಿಗಳಲ್ಲಿ ಒಟ್ಟು 30 ಪಂದ್ಯಗಳ ಅವರ ಜಯದ ಸರಪಣಿ ಈ ಸೋಲಿನೊಡನೆ ಮುರಿಯಿತು.

ಆರಂಭದಲ್ಲಿ ಸಿನ್ನರ್ ಆಡಿದ ರೀತಿ ನೋಡಿದಾಗ ಅವರು ಇನ್ನೊಂದು ಸುಲಭ ಗೆಲುವು ದಾಖಲಿಸುವಂತೆ ಕಂಡಿತು. ಆದರೆ ಮೂರನೇ ಸೆಟ್‌ನಲ್ಲಿ ಇದಕ್ಕಿದ್ದ ಬಳಲತೊಡಗಿದರು. ಮೂರು ಗೇಮ್‌ಗಳಲ್ಲಿ ಒಂದೂ ಅಂಕ ಪಡೆಯಲಾಗಲಿಲ್ಲ. 9 ನಿಮಿಷ ನಂತರ ವಾಪಸು ಬಂದಾಗ ಪ್ರೇಕ್ಷಕರು ಚಪ್ಪಾಳೆಯೊಡನೆ ಹುರಿದುಂಬಿಸಿದರು. ಆದರೆ ಅಷ್ಟೇನೂ ಖ್ಯಾತರಲ್ಲದ ಅರ್ಜೆಂಟೀನಾದ ಎದುರಾಳಿ ಅಷ್ಟರಲ್ಲಿ ವಿರಾಮದ ಅವಕಾಶ ಪಡೆದು ಉತ್ಸಾಹದಿಂದ ಆಡಿದರು. ಸತತ ಒತ್ತಡ ಹೇರಿದ ಅರ್ಜೆಂಟೀನಾದ ಆಟಗಾರ 'ಫೋರ್‌ಹ್ಯಾಂಡ್ ವಿನ್ನರ್' ಮೂಲಕ ಗೆಲುವಿನ ಅಂಕ ಪಡೆದರು; ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಮೂರನೇ ಸುತ್ತು ತಲುಪಿದರು.

ಯಾನಿಕ್ ಸಿನ್ನರ್ ಅವರನ್ನು ಸೋಲಿಸಿದ ಮಾನುಯೆಲ್ ಸೆರೂನ್‌ಡೊಲೊ ಸಂಭ್ರಮ... ಎಎಫ್‌ಪಿ ಚಿತ್ರ

ಮೂರನೇ ಸುತ್ತಿಗೆ ಸಬಲೆಂಕಾ, ಗಾಫ್

ವಿಶ್ವದ ಅಗ್ರಮಾನ್ಯ ಆಟಗಾರ್ತಿ ಅರಿನಾ ಸಬಲೆಂಕಾ ಅವರು ಮಹಿಳಾ ಸಿಂಗಲ್ಸ್ ಮೂರನೇ ಸುತ್ತಿಗೆ ಮುನ್ನಡೆದರು. ಬೆಲರೂಸ್‌ನ ಆಟಗಾರ್ತಿ 7–5, 6–2ರಿಂದ ಫ್ರಾನ್ಸ್‌ನ ಎಲ್ಸಾ ಜಾಕ್ವೆಮೊಟ್ ಅವರನ್ನು ಮಣಿಸಿದರು.

ಹಾಲಿ ಚಾಂಪಿಯನ್ ಕೊಕೊ ಗಾಫ್ ಅವರೂ ಮುಂದಿನ ಸುತ್ತು ತಲುಪಿದರು. ನಾಲ್ಕನೇ ಶ್ರೇಯಾಂಕದ ಅಮೆರಿಕದ ಆಟಗಾರ್ತಿ 6–3, 6–2ರಿಂದ ಈಜಿಪ್ಟ್‌ನ ಮಾಯರ್ ಶೆರಿಫ್ ಅವರನ್ನು ಸೋಲಿಸಿದರು.

ಜಪಾನ್‌ನ ಅನುಭವಿ ಆಟಗಾರ್ತಿ ನವೊಮಿ ಒಸಾಕಾ ಅವರು ಮಹಿಳಾ ಸಿಂಗಲ್ಸ್ ಎರಡನೇ ಸುತ್ತಿನಲ್ಲಿ ಕ್ರೊವೇಷ್ಯಾದ ಡೊನಾ ವೆಕಿಕ್ ಅವರನ್ನು 7–6 (7–1), 6–4 ರಿಂದ ಸೋಲಿಸಿದರು.

ಕ್ರಿಕೆಟ್‌ಗೆ ಸಿದ್ಧಾರ್ಥ್ ವಿದಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ತಂಡದ ಬ್ಯಾಟರ್ ಕೆ.ವಿ. ಸಿದ್ಧಾರ್ಥ್ ದೇಶಿ ಕ್ರಿಕೆಟ್‌ಗೆ ವಿದಾಯ ಘೋಷಿಸಿದರು.

ಅಲ್ಪಕಾಲ ಆಡಿದರೂ ಸ್ಮರಣೀಯ ಇನಿಂಗ್ಸ್‌ಗಳನ್ನು ಕಟ್ಟಿಕೊಟ್ಟ ಆಟಗಾರ ಸಿದ್ಧಾರ್ಥ್. 2018ರಲ್ಲಿ ನಾಗಪುರದಲ್ಲಿ ನಡೆದ ರಣಜಿ ಟ್ರೋಫಿ ಪಂದ್ಯದಲ್ಲಿ ವಿದರ್ಭ ಎದುರು ಕರ್ನಾಟಕ ತಂಡದಲ್ಲಿ ಪದಾರ್ಪಣೆ ಮಾಡಿದರು.

31 ಪ್ರಥಮ ದರ್ಜೆಗಳಲ್ಲಿ ಆಡಿರುವ ಅವರು 2,103 ರನ್ ಗಳಿಸಿದ್ದಾರೆ. ಅದರಲ್ಲಿ ಐದು ಶತಕ ಮತ್ತು 13 ಅರ್ಧ ಶತಕಗಳು ಇವೆ. ಲಿಸ್ಟ್ ಎ ವಿಭಾಗದಲ್ಲಿ 28 ಪಂದ್ಯಗಳಿಂದ 925 ರನ್ ಸೇರಿಸಿದ್ದಾರೆ. ಅದರಲ್ಲಿ 1 ಶತಕ ಮತ್ತು 6 ಅರ್ಧಶತಕಗಳು ಇವೆ. ಸಾಂದರ್ಭಿಕ ವಿಕೆಟ್ ಕೀಪರ್ ಆಗಿಯೂ ಅವರು ಕೆಲವು ಪಂದ್ಯಗಳಲ್ಲಿ ಗಮನ ಸೆಳೆದಿದ್ದರು.

'ಬಾಲ್ಯದಿಂದಲೂ ಕ್ರಿಕೆಟ್ ಎಂದರೆ ಜೀವ. ಅಲ್ಲಿಂದ ಇಲ್ಲಿಯವರೆಗೂ ಆಡಿರುವ ಕ್ರಿಕೆಟ್ ಅನ್ನು ತ್ಯಜಿಸುವ ನಿರ್ಧಾರ ತೆಗೆದುಕೊಳ್ಳುವುದು ಬಹಳ ಕಠಿಣ. ಹೋದ ವರ್ಷ ತಂಡದಲ್ಲಿ ಸ್ಥಾನ ಸಿಗಲಿಲ್ಲ. ನನ್ನ ಸ್ನೇಹಿತರು ಹಾಗೂ ರಾಹುಲ್ ಸರ್ (ದ್ರಾವಿಡ್) ಅವರೊಂದಿಗೆ ಸಮಾಲೋಚನೆ ನಡೆಸಿದೆ. ನಿರ್ಧಾರಕ್ಕೆ ಬಂದೆ' ಎಂದು 33 ವರ್ಷದ ಬಲಗೈ ಆಟಗಾರ ಸಿದ್ಧಾರ್ಥ್ ತಮ್ಮ ವಿದಾಯದ ಕುರಿತು ಪ್ರತಿಕ್ರಿಯಿಸಿದರು.

ಸಿದ್ಧಾರ್ಥ್ ಅವರು 2023–24ರಲ್ಲಿ ಗೋವಾ ತಂಡಕ್ಕೆ ವಲಸೆ ಹೋಗಿದ್ದರು. 2025ರ ಜನವರಿಯಲ್ಲಿ ಅವರು ಕೊನೆಯ ಸಲ ಪಂದ್ಯದಲ್ಲಿ ಕಾಣಿಸಿಕೊಂಡಿದ್ದರು.

ತರಬೇತುದಾರರಾಗಿ ಯುವ ಆಟಗಾರರಿಗೆ ಮಾರ್ಗದರ್ಶನ ನೀಡಲು ಅವರು ನಿರ್ಧರಿಸಿದ್ದಾರೆ.

'ರಣಜಿ ತಂಡದಲ್ಲಿ ಸ್ಥಾನ ಪಡೆಯಲು ಪ್ರಯತ್ನಿಸುವ ಪ್ರತಿಭಾವಂತರಿಗೆ ಕೋಚ್ ಆಗಿ ಮಾರ್ಗದರ್ಶನ ನೀಡುವುದು ನನ್ನ ಗುರಿ' ಎಂದರು.

ಸಿದ್ಧಾರ್ಥ್ ಅವರು 2023ರಲ್ಲಿ ನಮೀಬಿಯಾ ಪ್ರವಾಸ ಕೈಗೊಂಡಿದ್ದ ಕರ್ನಾಟಕ ತಂಡದಲ್ಲಿ ಅವರಿದ್ದರು. 'ಸೈಯದ್ ಮುಷ್ತಾಕ್ ಅಲಿ ಮತ್ತು ವಿಜಯ್ ಹಜಾರೆ ಟ್ರೋಫಿ ಜಯಿಸಿದ್ದು ತಮ್ಮ ಜೀವನದ ಅವಿಸ್ಮರಣೀಯ ಕ್ಷಣಗಳು' ಎಂದು ಅವರು ಹೇಳಿದ್ದಾರೆ.

'ಸುಪ್ರೀಂ'ಗೆ ಅರ್ಜಿ ಸಲ್ಲಿಸಿದ ಫೆಡರೇಷನ್
ವಿನೇಶ್ ಫೋಗಟ್‌ಗೆ ಟ್ರಯಲ್ಸ್‌ನಲ್ಲಿ ಅವಕಾಶಕ್ಕೆ ವಿರೋಧ

ನವದೆಹಲಿ (ಪಿಟಿಐ): ಏಷ್ಯನ್ ಗೇಮ್ಸ್ ಆಯ್ಕೆ ಟ್ರಯಲ್ಸ್‌ನಲ್ಲಿ ಭಾಗವಹಿಸಲು ಒಲಿಂಪಿಯನ್ ವಿನೇಶ್ ಫೋಗಟ್ ಅವರಿಗೆ ಅವಕಾಶ ನೀಡಿರುವುದನ್ನು ಪ್ರಶ್ನಿಸಿ ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದೆ.

ಏಷ್ಯನ್ ಗೇಮ್ಸ್ ಆಯ್ಕೆ ಟ್ರಯಲ್ಸ್ ಇದೇ ಶನಿವಾರ ಮತ್ತು ಭಾನುವಾರ ಇಲ್ಲಿ ನಡೆಯಲಿದೆ.

ದೆಹಲಿ ಹೈಕೋರ್ಟ್‌ನ ವಿಭಾಗೀಯ ಪೀಠವು ಮೇ 22ರಂದು ನೀಡಿರುವ ಆದೇಶವು 'ಮೇಲ್ನೋಟಕ್ಕೆ ಅಕ್ರಮವಾಗಿದೆ' ಎಂದು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ರಜಾ ಕಾಲದ ಅರ್ಜಿಯಲ್ಲಿ ತಿಳಿಸಿರುವ ಫೆಡರೇಷನ್, 'ವಿನೇಶ್ ಪರವಾಗಿ ನಿರ್ದೇಶನಗಳನ್ನು ನೀಡುವ ಮೊದಲು ಪೀಠವು ತನಗೆ ವಿವರವಾದ ಉತ್ತರ ನೀಡಲು ಸಾಕಷ್ಟು ಕಾಲಾವಕಾಶವನ್ನೂ ನೀಡಲಿಲ್ಲ' ಎಂದು ವಾದಿಸಿದೆ.

'ಪ್ರಕಟವಾಗಿರುವ ಆಯ್ಕೆ ಮಾನದಂಡಗಳ ಪ್ರಕಾರ ವಿನೇಶ್ ಅವರು ಟ್ರಯಲ್ಸ್‌ನಲ್ಲಿ ಭಾಗವಹಿಸಲು ಅನರ್ಹರೆನಿಸಿಕೊಂಡಿದ್ದಾರೆ. ಆದರೂ ಅವರ ಸೇರ್ಪಡೆಗೆ ಹೈಕೋರ್ಟ್ ನಿರ್ದೇಶನ ನೀಡಿದೆ' ಎಂದು ಫೆಡರೇಷನ್ ಹೇಳಿದೆ.

ವಿನೇಶ್ ಫೋಗಟ್

ಅಂತರರಾಷ್ಟ್ರೀಯ ಬಹು ಕ್ರೀಡೆಗಳ ಕೂಟಗಳಿಗೆ ಅಥ್ಲೀಟುಗಳ ಆಯ್ಕೆಯು ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳ ಅಧಿಕಾರವಾಗಿದೆ ಎಂದೂ ವಾದಿಸಿದೆ.

ನಿವೃತ್ತಿ ತ್ಯಜಿಸಿ ಸಕ್ರಿಯ ಕ್ರೀಡೆಗೆ ಮರಳುವ ಕ್ರೀಡಾಪಟು, ವಾಡಾ ಮತ್ತು ವಿಶ್ವ ಕುಸ್ತಿ ಸಂಸ್ಥೆಯ (ಯುಡಬ್ಲ್ಯುಡಬ್ಲ್ಯು) ಉದ್ದೀಪನ ಮದ್ದುಸೇವನೆ ನಿಗ್ರಹ ನಿಯಮಗಳ ಪ್ರಕಾರ ಆರು ತಿಂಗಳು ಕಡ್ಡಾಯ ಅವಧಿಯಲ್ಲಿ ವೇರಬೌಟ್ಸ್ (ತಮ್ಮ ವಾಸ್ತವ್ಯಸ್ಥಳ) ಮತ್ತು ಡೋಪಿಂಗ್ ಪರೀಕ್ಷೆಗೆ ಒಳಗಾಗಬೇಕಾಗುತ್ತದೆ ಎಂದು ಹೇಳಿದೆ.

ಸೀನಿಯರ್ ರಾಷ್ಟ್ರೀಯ ಚಾಂಪಿಯನ್‌ಷಿಪ್, ಸೀನಿಯರ್ ಫೆಡರೇಷನ್ ಕಪ್ ಮತ್ತು 20 ವರ್ಷದೊಳಗಿವರ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಳಲ್ಲಿ ಗೆದ್ದಿರುವ ಪದಕಗಳ ಆಧಾರದಲ್ಲಿ ಪ್ರತಿಯೊಂದು ವಿಭಾಗದಲ್ಲಿ ಈಗಾಗಲೇ 12 ಕುಸ್ತಿಪಟುಗಳು ಅರ್ಹತೆ ಪಡೆದಿದ್ದಾರೆ. ಹೈಕೋರ್ಟ್ ಆದೇಶ ನೀಡುವ ಮೊದಲು ಅಭಿಪ್ರಾಯ ಆಲಿಸುವ ಗೋಜಿಗೆ ಹೋಗಿಲ್ಲ ಎಂದು ಫೆಡರೇಷನ್ ಅರ್ಜಿಯಲ್ಲಿ ತಿಳಿಸಿದೆ.

ಆಯ್ಕೆ ಟ್ರಯಲ್ಸ್‌ಗೆ ತಮ್ಮನ್ನು ಅನರ್ಹಗೊಳಿಸಿದ್ದನ್ನು ಪ್ರಶ್ನಿಸಿ ವಿನೇಶ್ ಈ ಮೊದಲು ದೆಹಲಿ ಹೈಕೋರ್ಟ್ ಮೊರೆಹೋಗಿದ್ದರು.

ಮಂಗಳೂರು: ಬ್ರಿಜ್ ರಾಷ್ಟ್ರೀಯ ಟೂರ್ನಿ ಜೂನ್ 4ರಿಂದ

ಪ್ರಜಾವಾಣಿ ವಾರ್ತೆ

ಮಂಗಳೂರು: ಭಾರತ ಬ್ರಿಜ್ ಫೆಡರೇಷನ್, ಕರ್ನಾಟಕ ರಾಜ್ಯ ಬ್ರಿಜ್ ಸಂಸ್ಥೆ ಮತ್ತು ಕರಾವಳಿ ಬ್ರಿಜ್ ಸಂಸ್ಥೆ ಆಶ್ರಯದಲ್ಲಿ ನಗರದ ಸೇಂಟ್ ಸೆಬಾಸ್ಟಿಯನ್ ಸೆಂಟೆನರಿ ಸಭಾಂಗಣದಲ್ಲಿ 'ಮ್ಯಾವೆರಿಕ್ಸ್ ಸಮ್ಮರ್ ನ್ಯಾಷನಲ್ಸ್ 2026' ಬ್ರಿಜ್ ಟೂರ್ನಿಯನ್ನು ಜೂನ್ 4ರಿಂದ 13ರವರೆಗೆ ಹಮ್ಮಿಕೊಳ್ಳಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾಹಿತಿ ನೀಡಿದ ಕರಾವಳಿ ಬ್ರಿಜ್ ಸಂಸ್ಥೆ ಅಧ್ಯಕ್ಷೆ ಮಾರ್ಜೋರಿ ಟೆಕ್ಸೇರಾ, 'ಟೂರ್ನಿಯಲ್ಲಿ ಪೋಲೆಂಡ್‌ನ ವಿಶ್ವ ಚಾಂಪಿಯನ್ ಬುರಾಸ್ ಕ್ರಿಸ್ಟಾಫ್ ಜೆರ್ಜಿ, ಡೊಮಿನಿಕ್ ಫಿಲೋಪೋವಿಚ್, ಜಾಕೋಬ್ ಪಾತ್ರೆಹುವಾ ಮತ್ತು ಪ್ಯಾಟ್ರಿಕ್ ಪಾತ್ರೆಹುವಾ ಸೇರಿದಂತೆ 450ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸುವ ನಿರೀಕ್ಷೆಯಿದೆ' ಎಂದರು.

'ನಗರಕ್ಕೆ ಇರುವ ವಿಮಾನ ಹಾಗೂ ರೈಲು ಸಂಪರ್ಕ, ಅತ್ಯುತ್ತಮ ಆತಿಥ್ಯ ಮತ್ತು ಇಲ್ಲಿನ ವೈವಿಧ್ಯಮಯ ರುಚಿಕರ ಆಹಾರ ಪದ್ಧತಿಯ ಕಾರಣಕ್ಕೆ ಬ್ರಿಜ್ ಫೆಡರೇಷನ್ ಈ ಟೂರ್ನಿಯನ್ನು ನಡೆಸಲು ಮಂಗಳೂರನ್ನು ಆಯ್ಕೆ ಮಾಡಿದೆ' ಎಂದರು.

ನಾರ್ವೆ ಚೆಸ್: ಕಾರ್ಲ್‌ಸನ್‌ಗೆ ಆಘಾತ ನೀಡಿದ ಪ್ರಜ್ಞಾನಂದ

ಓಸ್ಲೊ (ಪಿಟಿಐ): ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರಿಗೆ ನಾರ್ವೆ ಚೆಸ್ ಟೂರ್ನಿಯ ಮೂರನೇ ಸುತ್ತಿನಲ್ಲಿ ಆಘಾತ ನೀಡುವ ಮೂಲಕ ಆರ್.ಪ್ರಜ್ಞಾನಂದ ಅವರು ತಮ್ಮ ಉತ್ತುಂಗದ ಆಟಕ್ಕೆ ಮರಳುವ ಸಂಕೇತಗಳನ್ನು ರವಾನಿಸಿದರು. ಪೂರ್ಣ ಮೂರು ಪಾಯಿಂಟ್‌ಗಳನ್ನು ಗಳಿಸಿದ 'ಪ್ರಗ್ಗು' 4.5 ಪಾಯಿಂಟ್‌ಗಳೊಂದಿಗೆ ಎರಡನೇ ಸ್ಥಾನಕ್ಕೇರಿದರು.

ಆದರೆ ವಿಶ್ವ ಚಾಂಪಿಯನ್ ಗುಕೇಶ್ ಆಟದ ಮಟ್ಟ ಕಳವಳ ಹುಟ್ಟಿಸುವ ರೀತಿಯಲ್ಲಿ ಕುಸಿಯುತ್ತಿದೆ. ಅಮೋಘ ಆಟವಾಡುತ್ತಿರುವ ಫ್ರಾನ್ಸ್‌ನ ಅಲಿರೇಝಾ ಫಿರೋಝ್‌ಜಾ ಅವರು ಬುಧವಾರ ರಾತ್ರಿ ಭಾರತದ ಆಟಗಾರನನ್ನು 'ಆರ್ಮ್‌ಗೆಡನ್'ನಲ್ಲಿ ಸೋಲಿಸಿದರು. ಕ್ಲಾಸಿಕಲ್ ಪಂದ್ಯದ ಒಂದು ಹಂತದಲ್ಲಿ ಅಲಿರೇಝಾ ತೊಂದರೆ ಸಿಲುಕಿದ್ದರೂ ಪಾರಾಗಿ ಡ್ರಾ ಮಾಡಿಕೊಂಡಿದ್ದರು.

ಈ ಪಂದ್ಯದಲ್ಲಿ ಒಂದೂವರೆ ಅಂಕ ಸೇರಿದಂತೆ ಅಲಿರೇಝಾ ಮೂರು ಸುತ್ತುಗಳ ನಂತರ 7.5 ಪಾಯಿಂಟ್ಸ್ ಕಲೆಹಾಕಿ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ. ಗುಕೇಶ್ (3.5) ನಾಲ್ಕನೇ ಸ್ಥಾನದಲ್ಲಿದ್ದಾರೆ. ವಿಶ್ವ ಚಾಂಪಿಯನ್ ಪಟ್ಟ ಉಳಿಸಿಕೊಳ್ಳಲು ಈ ವರ್ಷದ ಕೊನೆಯಲ್ಲಿ ಉಜ್ಬೇಕ್ ಆಟಗಾರ ಜಾವೋಖಿರ್ ಸಿಂದರೋವ್ ಅವರನ್ನು ಎದುರಿಸಲಿರುವ ಗುಕೇಶ್ ಅವರಿಗೆ ಈ ಹಿನ್ನಡೆ ತಲೆನೋವಾಗಿದೆ.

ಈ ಬಾರಿಯ ಆವೃತ್ತಿಯಲ್ಲಿ ಕಾರ್ಲ್‌ಸನ್ ಅವರ ಹಿನ್ನಡೆ ಮುಂದುವರಿಯಿತು. ಅವರು ಕೊನೆಯ ಸ್ಥಾನದಲ್ಲಿ ಮುಂದುವರಿದಿದ್ದಾರೆ.

ಅಮೆರಿಕದ ವೆಸ್ಲಿ ಸೊ (4) ಇನ್ನೊಂದು ಪಂದ್ಯದಲ್ಲಿ ಜರ್ಮನಿಯ ವಿನ್ಸೆಂಟ್ ಕೀಮರ್ (3) ಅವರನ್ನು ಮಣಿಸಿದರು.

ವಾಲಿಬಾಲ್: ಭಾರತ ತಂಡಕ್ಕೆ ನಿರಾಸೆ

ಕಠ್ಮಂಡು: ಭಾರತ ತಂಡವು ಇಲ್ಲಿ ನಡೆಯುತ್ತಿರುವ ಮಧ್ಯ ಏಷ್ಯಾ ಮಹಿಳಾ ವಾಲಿಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಗುರುವಾರ ಸೆಮಿಫೈನಲ್ ಪಂದ್ಯದಲ್ಲಿ ಕಜಾಕಸ್ತಾನ ತಂಡದ ಎದುರು 0–3 ಸೆಟ್‌ಗಳಿಂದ ಸೋಲನುಭವಿಸಿತು.

'ಎ' ಗುಂಪಿನಿಂದ ಸೆಮಿಫೈನಲ್‌ಗೆ ಅರ್ಹತೆ ಪಡೆದಿದ್ದ ಭಾರತ ಮಹಿಳೆಯರ ತಂಡ 21–25, 17–25, 14–25 ರಲ್ಲಿ ಸವಾಲು ಮುಗಿಸಿತು.

ಲೀಗ್ ಹಂತದಲ್ಲಿ ಭಾರತ ತಂಡವು, ಆತಿಥೇಯ ನೇಪಾಳ, ಮಾಲ್ಡೀವ್ಸ್ ಮತ್ತು ಕಿರ್ಗಿಸ್ತಾನ ತಂಡಗಳ ಎದುರು ಜಯಗಳಿಸಿತ್ತು.

ಪ್ಯಾರಾ ಅಥ್ಲೆಟಿಕ್ಸ್ ಪ್ರೀತಿ ದಾಖಲೆ

ಬೆಂಗಳೂರು: ಪ್ಯಾರಾಲಿಂಪಿಕ್ಸ್ ಅವಳಿ ಕಂಚಿನ ಪದಕ ವಿಜೇತೆ ಪ್ರೀತಿ ಪಾಲ್ ಗುರುವಾರ ಇಲ್ಲಿ ಮುಕ್ತಾಯಗೊಂಡ ಎಂಟನೇ ಆವೃತ್ತಿಯ ಇಂಡಿಯನ್ ಓಪನ್ ಅಂತರರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಮಹಿಳೆಯರ 200 ಮೀಟರ್ (ಟಿ35) ಓಟದಲ್ಲಿ ತಮ್ಮದೇ ರಾಷ್ಟ್ರೀಯ ದಾಖಲೆಯನ್ನು ಉತ್ತಮಪಡಿಸಿಕೊಂಡರು.

ಉತ್ತರ ಪ್ರದೇಶದ ಈ ಪ್ಯಾರಾ ಅಥ್ಲೀಟ್ 29.33 ಸೆಕೆಂಡ್‌ಗಳಲ್ಲಿ ಗುರಿ ತಲುಪಿ ಚಿನ್ನ ಗೆದ್ದರು. 30.01 ಸೆಕೆಂಡ್ ಅವರ ಈ ಹಿಂದಿನ ರಾಷ್ಟ್ರೀಯ ದಾಖಲೆಯ ಸಮಯವಾಗಿತ್ತು. ಅವರು 100 ಮೀ. (ಟಿ35) ಓಟದಲ್ಲೂ (13.94 ಸೆ) ರಾಷ್ಟ್ರೀಯ ದಾಖಲೆಯೊಂದಿಗೆ ಸ್ವರ್ಣ ಗೆದ್ದಿದ್ದಾರೆ.

ಕರ್ನಾಟಕದ ಅಥ್ಲೀಟ್ ಶರತ್ ಎಂ.ಎಸ್. ಅವರು ಪುರುಷರ 5,000 ಮೀ (ಟಿ12/ಟಿ 13) ಸ್ಪರ್ಧೆಯನ್ನು 16 ನಿ. 28.00 ಸೆಕೆಂಡ್‌ಗಳಲ್ಲಿ ಕ್ರಮಿಸಿ ಬೆಳ್ಳಿ ಪದಕ ಗೆದ್ದರು. ಕೂಟದ ಮೊದಲ ದಿನ ಅವರು 1500 ಮೀ (ಟಿ 13) ಸ್ಪರ್ಧೆಯಲ್ಲಿ ಚಿನ್ನ ಗೆದ್ದಿದ್ದರು.

ಪುರುಷರ ಲಾಂಗ್‌ಜಂಪ್ (ಟಿ11) ಸ್ಪರ್ಧೆಯಲ್ಲಿ ರಕ್ಷಿತ್ ಎಚ್. ಸೋಮಶೇಖರ 5.01 ಮೀ. ಸಾಧನೆಯೊಂದಿಗೆ ಕಂಚಿನ ಪದಕ ಗೆದ್ದರು.

ರಾಷ್ಟ್ರೀಯ ಸರ್ಫಿಂಗ್ ಇಂದಿನಿಂದ

ಪ್ರಜಾವಾಣಿ ವಾರ್ತೆ

ಮಂಗಳೂರು: ಮಳೆಮೋಡಗಳು ದಟ್ಟೈಸುತ್ತ ಮುಂಗಾರು ಮಳೆಯ ಸೂಚನೆ ನೀಡುತ್ತಿದ್ದಂತೆ ನಗರದ ತಣ್ಣೀರುಬಾವಿ ಇಕೊ ಬೀಚ್ ಕಡಲ ತೀರದಲ್ಲಿ ರಾಷ್ಟ್ರೀಯ ಸರ್ಫಿಂಗ್ ಚಾಂಪಿಯನ್‌ಷಿಪ್‌ಗೆ ವೇದಿಕೆ ಸಿದ್ಧವಾಗಿದೆ.

ಭಾರತ ಸರ್ಫಿಂಗ್ ಫೆಡರೇಷನ್, ಮಂತ್ರ ಸರ್ಫ್ ಕ್ಲಬ್ ಮತ್ತು ಸರ್ಫಿಂಗ್ ಸ್ವಾಮಿ ಫೌಂಡೇಷನ್ ಸಹಯೋಗದಲ್ಲಿ ಆಯೋಜಿಸಿರುವ ಎನ್‌ಎಂಪಿಎ ಇಂಡಿಯನ್ ಓಪನ್ ಆಫ್ ಸರ್ಫಿಂಗ್‌ನ 7ನೇ ಆವೃತ್ತಿ ಶುಕ್ರವಾರ (ಮೇ 29) ಆರಂಭವಾಗಲಿದ್ದು 31ರ ವರೆಗೆ ಭಾರತದ ಅಗ್ರಮಾನ್ಯ ಸರ್ಫರ್‌ಗಳ ಜೊತೆ ಈಚೆಗೆ ಪ್ರವರ್ಧಮಾನಕ್ಕೆ ಬರುತ್ತಿರವವರು ಕಡಲ ಅಲೆಗಳ ಮೇಲೆ ಪದಕಗಳಿಗಾಗಿ ಸೆಣಸಲಿದ್ದಾರೆ.

ಶಾರ್ಟ್‌ಬೋರ್ಡ್ ಸರ್ಫಿಂಗ್ ಈ ಬಾರಿ ಏಷ್ಯನ್ ಗೇಮ್ಸ್‌ನಲ್ಲಿ ಪದಾರ್ಪಣೆ ಮಾಡಲಿದೆ. ಹೀಗಾಗಿ ಭಾರತ ತಂಡವನ್ನು ಪ್ರತಿನಿಧಿಸುವ ಅವಕಾಶದ ಗುರಿಯೂ ತಣ್ಣೀರುಬಾವಿಯಲ್ಲಿ ಪೈಪೋಟಿಗೆ ಕಾರಣವಾಗಲಿದೆ. ಏಪ್ರಿಲ್‌ನಲ್ಲಿ ನಡೆದ ಲಿಟಲ್ ಅಂಡಮಾನ್ ಪ್ರೊದಲ್ಲಿ ಮಿಂಚಲು ವಿಫಲರಾಗಿರುವವರು ಮಂಗಳೂರಿನಲ್ಲಿ ತಮ್ಮ ಸಾಮರ್ಥ್ಯ ನಿಕಷಕ್ಕೆ ಒಡ್ಡಲಿದ್ದಾರೆ.

ಹೊಸ ವಿಭಾಗ ಸೇರ್ಪಡೆ: ತಣ್ಣೀರುಬಾವಿಯಲ್ಲಿ ಪುರುಷ ಮತ್ತು ಮಹಿಳೆಯರ ವಿಭಾಗದ ಮುಕ್ತ ಹಾಗೂ 18 ವರ್ಷದೊಳಗಿನರ ವಿಭಾಗಗಳಲ್ಲಿ ತುರುಸಿನ ಸ್ಪರ್ಧೆ ನಿರೀಕ್ಷಿಸಲಾಗಿದೆ.

ಸಾಹಸಕ್ಕೆ ಸಜ್ಜಾಗಿರುವ ಸರ್ಫರ್‌ಗಳು

ಎಂಟರ ಘಟ್ಟಕ್ಕೆ ಸಿಂಧು, ಲಕ್ಷ್ಯ

ಸಿಂಗಪುರ (ಪಿಟಿಐ): ಒಲಿಂಪಿಕ್ಸ್‌ನಲ್ಲಿ ಎರಡು ಪದಕಗಳನ್ನು ಗೆದ್ದಿರುವ ಪಿ.ವಿ.ಸಿಂಧು ಮತ್ತು ಅನುಭವಿ ಲಕ್ಷ್ಯ ಸೇನ್ ಅವರು ಗುರುವಾರ ವಿಭಿನ್ನ ರೀತಿಯಲ್ಲಿ ತಮ್ಮ ಪಂದ್ಯಗಳನ್ನು ಗೆದ್ದು ಸಿಂಗಪುರ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್ ಫೈನಲ್‌ಗೆ ಲಗ್ಗೆಯಿಟ್ಟರು.

ಮಾಜಿ ವಿಶ್ವ ಚಾಂಪಿಯನ್ ಸಿಂಧು ಮಹಿಳಾ ಸಿಂಗಲ್ಸ್ ಎರಡನೇ ಸುತ್ತಿನ ಪಂದ್ಯದಲ್ಲಿ ಜಪಾನ್‌ನ ರಿಕೊ ಗುಂಜಿ ಅವರನ್ನು 21–9, 21–12 ರಿಂದ ಸದೆಬಡಿದರು. ಗೆಲ್ಲಲು ಅವರಿಗೆ ಕೇವಲ 37 ನಿಮಿಷ ಹಿಡಿಯಿತು.

ಆದರೆ ಸಿಂಧು ಅವರಿಗೆ ಎಂಟರ ಘಟ್ಟದಲ್ಲಿ ಪ್ರಬಲ ಎದುರಾಳಿ ಆನ್ ಸೆ ಯಂಗ್ ಸವಾಲು ಎದುರಾಗಿದೆ. ಒಲಿಂಪಿಕ್ ಚಾಂಪಿಯನ್ ಆಗಿರುವ ದಕ್ಷಿಣ ಕೊರಿಯಾದ ಆಟಗಾರ್ತಿ ವಿರುದ್ಧ ಎಂಟು ಮುಖಾಮುಖಿಗಳಲ್ಲಿ ಸಿಂಧು ಒಮ್ಮೆಯೂ ಜಯ ಗಳಿಸಿಲ್ಲ. ಈ ವರ್ಷದ ಚೀನಾ ಓಪನ್‌ನಲ್ಲಿ ಕೊನೆಯ ಬಾರಿ ಎದುರಾಗಿದ್ದರು.

ಒಟ್ಟು ₹9.62 ಕೋಟಿ ಬಹುಮಾನ ಮೊತ್ತದ ಈ ಟೂರ್ನಿಯ ಪುರುಷರ ಸಿಂಗಲ್ಸ್ ಪ್ರಿಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಲಕ್ಷ್ಯ ಸೇನ್ ಅವರಿಗೆ ಬೆವರು ಹರಿಸುವ ಪ್ರಮೇಯ ಬರಲಿಲ್ಲ. ಅವರು 2–0 ಯಿಂದ ಮುಂದಿದ್ದಾಗ ಎರಡನೇ ಶ್ರೇಯಾಂಕದ ಎದುರಾಳಿ ಕುನ್ಲಾವುತ್ ವಿದಿತ್‌ಸರ್ನ್ (ಥಾಯ್ಲೆಂಡ್) ಅವರು ಬೆನ್ನುನೋವಿನಿಂದಾಗಿ ಪಂದ್ಯ ಬಿಟ್ಟುಕೊಟ್ಟರು. ಜಪಾನ್‌ನ ಕೋಕಿ ವತಾನಬೆ ಅವರು ಲಕ್ಷ್ಯ ಅವರ ಮುಂದಿನ ಎದುರಾಳಿ ಆಗಿದ್ದಾರೆ.

ಪಿ.ವಿ.ಸಿಂಧು

ನಾಲ್ಕನೇ ಶ್ರೇಯಾಂಕದ ಡಬಲ್ಸ್ ಜೋಡಿ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಅವರು ಗೆಲುವಿಗೆ ಬೆವರು ಹರಿಸಬೇಕಾಯಿತು. ಭಾರತದ ಆಟಗಾರರು 21–15, 11–21, 21–18 ರಿಂದ ಚೀನಾ ತೈಪೆಯ ಲೀ ಝು ಹುಯಿ – ಯಾಂಗ್ ಪೊ–ಸುವಾನ್ ಜೋಡಿಯನ್ನು ಸೋಲಿಸಿದರು.

ಸಿಂಗಲ್ಸ್‌ನಲ್ಲಿ, 33 ವರ್ಷ ವಯಸ್ಸಿನ ಪ್ರಣಯ್ ಅವರು 18–21, 21–16, 15–21 ರಿಂದ ಸ್ಥಳೀಯ ಫೇವರಿಟ್ ಲೊಹ್ ಕೀನ್ ಯೇ ಅವರಿಗೆ ಮಣಿದರು.